ಹೊಸ ಮನುಷ್ಯ

ಬೆಲೆ : ರೂ ೨೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ


ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೮ ಸೆಪ್ಟೆಂಬರ್- ೨೦೧೭ ಸಂಚಿಕೆ - ೨



ಸುರೇಂದ್ರ ಕೌಲಗಿ ನೆನಪಿನ ಸಂಚಿಕೆ

ಗೊನೆ ಮಾಗಿ ಬಾಳೆ ಜೀವನ್ಮುಕ್ತ ಹಳಸುತಿದೆ
ಹಿಂಡುಹಿಳ್ಳುಗಳಲ್ಲಿ ಪ್ರಾಣವೂರಿ - ಎಂ. ಗೋಪಾಲ.ಕೃಷ್ಣ.ಅಡಿಗ.



ಗಿರಿಜಾ ಕೌಲಗಿಯವರ ನೆನಪಿನಲ್ಲಿ
ಹೊಸ ಜೀವನ ದಾರಿಯಲ್ಲಿ ನೆಟ್ಟಿರುವ
ಆಲದ ಸಸಿಯ ಮುಂದೆ ಇರುವ ಫಲಕ.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಸೆಪ್ಟಂಬರ್- ೨೦೧೭
ಸಂಪುಟ - ೧೮
ಸಂಚಿಕೆ - ೨

ಸಂಚಿಕೆಯ ಸಂಪಾದಕರು

ಕೆ.ಪಿ.ಸುರೇಶ
ಸಂತೋಷ್ ಕೌಲಗಿ

ಚಂದಾ ವಿವರ

ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ :
08236 - 299854

email :
janapada@yahoo.com
Web: janapada.org

ನೆರಳು

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಅದರಿಚ್ಛೆ ಹಾದಿ
ಇದಕು ಹರಿದತ್ತ ಬೀದಿ.

ನೆಲನೆಲದಿ ಮನೆಯ ಮನೆಯ ಮೇಲೆ
ಕೊಳ ಬಾವಿ ಕಂಡು ಕಾಣದೋಲೆ
ಗಿಡಗುಲ್ಮ ತೆವರು ತಿಟ್ಟು
ಎನ್ನದಿದಕೊಂದೆ ನಿಟ್ಟು.

ಗಾಳಿ ಬೆರಗಿದರ ನೆಲದೊಳೋಟ!
ವೇಗ ಕಡ್ಡ ಬಹುದಾವ ಹೂಟ?
ಸಿಕ್ಕು ದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ.

ಇದ ನೋಡಿ ನಾನು ನೆನೆವೆನಿಂದು
ಇಂಥ ನೆಳಲೇನು ಗಾಂಧಿಯೆಂದು!
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನೆತ್ತ.

-ಪು.ತಿ.ನ

ಪರಿವಿಡಿ

ನಿಮ್ಮೊಂದಿಗೆ

ಜನಪದ ಸೇವಾ ಟ್ರಸ್ಟಿನ ಚರಿತ್ರೆಯ ಪ್ರಮುಖ ಘಟ್ಟವೊಂದು ಮುಗಿದಿದೆ. ಸಂಸ್ಥೆಯ ಸ್ಥಾಪಕ ಸುರೇಂದ್ರ ಕೌಲಗಿ ಅವರು ತಮ್ಮ ೮೪ ವರ್ಷದ ಯಶಸ್ವಿ ಬದುಕಿಗೆ ವಿದಾಯ ಹೇಳಿದ್ದಾರೆ. ಈ ಸಂಸ್ಥೆಯನ್ನು ಹೆತ್ತು ಬೆಳೆಸಿದ ಎರಡೂ ಜೀವಗಳು ಸುಮಾರು ಒಂದು ವರ್ಷದಲ್ಲೆ ನಮ್ಮನ್ನು ಬಿಟ್ಟು ಹೋಗಿವೆ. ೧೯೬೦ ರಿಂದ ನಿರಂತರವಾಗಿ ತಾನು ನಂಬಿದ ಆದರ್ಶಗಳನ್ನು ಜನಪದ ಸೇವಾ ಟ್ರಸ್ಟ್ ಮೂಲಕ ನನಸಾಗಿಸಲು ಶ್ರೀ ಕೌಲಗಿಯವರು ಶ್ರಮಿಸಿ ಸಫಲರಾಗಿದ್ದಾರೆ. ಸಾರ್ವಜನಿಕ ಬದುಕು ಎರಡು ಅಲಗಿನ ಕತ್ತಿ ಇದ್ದಂತೆ. ಅವರು ಆ ಕತ್ತಿಯ ಮೇಲೆ ತಮ್ಮ ಬದುಕಿನ ಸುಮಾರು ೬೫ ವರ್ಷಗಳನ್ನು ಎಲ್ಲೂ ಎಡವದೆ ಸವೆಸಿದ್ದಾರೆ. ಜನಪದ ಸೇವಾ ಟ್ರಸ್ಟಿನ ಧ್ಯೇಯ ವಾಕ್ಯವು 'ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಹೊಸ ಸಮಾಜವನ್ನು ನಿರ್ಮಿಸುವುದು' ಎಂದಾಗಿದೆ. ಧ್ಯೇಯ ವಾಕ್ಯದ ಈ ಎರಡೂ ಶಬ್ದಗಳು ಇಂದಿನ ಕಾಲಘಟ್ಟದಲ್ಲಿ ಅತ್ಯಂತ ದುಬಾರಿಯಾಗಿವೆ. ನಮ್ಮ ಮುಂದೆ ನಡೆಯುತ್ತಿರುವ ವಿದ್ಯಾಮಾನಗಳನ್ನು ಗಮನಿಸಿದಾಗ ಅವು ಮತ್ತೂ ದುಬಾರಿಯಾಗುವ ನಿರೀಕ್ಷೆಗಳು ಕಾಣುತ್ತಿವೆ. ಇದೇ ಹೊತ್ತಿನಲ್ಲಿ ಕತ್ತಲೆಯ ಸುರಂಗದ ಮತ್ತೊಂದು ತುದಿ ಹತ್ತಿರವಾಗುತ್ತಿರುವಂತೆ ಸಹ ಕಾಣುತ್ತಿದೆ. ಹೊಸ ತಲೆಮಾರಿನ ಅನೇಕ ಯುವಕರು ಹೊಸ ನಿರೀಕ್ಷೆಯಲ್ಲಿ ಸಮಸ್ಯೆಗಳ ಉತ್ತರದ ಹುಡುಕಾಟದಲ್ಲಿದ್ದಾರೆ. ಆ ಹುಡುಕಾಟದಲ್ಲಿರುವ ಹಲವರಿಗೆ ಜನಪದ ಸೇವಾ ಟ್ರಸ್ಟಿನ ಆಶೋತ್ತರಗಳು ಅಪ್ಯಾಯಮಾನವಾಗಿ ಕಾಣುತ್ತಿವೆ. ಕೌಲಗಿಯವರು ಜನಪದ ಸೇವಾ ಟ್ರಸ್ಟಗೆ ಹಾಕಿರುವ ಭದ್ರ ವೈಚಾರಿಕ ಬುನಾದಿಯು ಬಿಗಡಾಯಿಸಬಹುದಾದಾ ಕಾಲಘಟ್ಟದಲ್ಲಿ ದೀಪಸ್ತಂಭದಂತೆ ನಿಂತು ದಿಕ್ಕುತೋರುವ ಶಕ್ತಿಯನ್ನು ಪಡೆದಿದೆ ಎಂಬ ನಂಬಿಕೆ ನಮಗಿದೆ.

ಕೌಲಗಿಯವರು ಪ್ರಾರಂಭಿಸಿರುವ ಹಲವು ಕಾರ್ಯಗಳಲ್ಲಿ ಜನಪದ ವಿಚಾರ ಕೂಡ ಒಂದು. ಅವರು ತಮ್ಮ ಕಡೆಯ ದಿನದವರೆಗೂ ತಮ್ಮ ಹೆಚ್ಚಿನ ಸಮಯವನ್ನು ಪತ್ರಿಕೆಯನ್ನು ಪರಿಣಾಮಕಾರಿಯಾಗಿ ತರಲು ಪ್ರಯತ್ನಿಸುತ್ತಿದ್ದರು. ವಿಚಾರ ಪ್ರಚಾರ ಅವರಿಗೆ ಅತ್ಯಂತ ಪ್ರೀತಿಯ ಕಾಯಕವಾಗಿತ್ತು. ಹಲವಾರು ಬಾರಿ ಅವರು ಹೇಳುವುದನ್ನೇ ಹೇಳುತ್ತಿದ್ದಾರೆ ಎಂದು ನಮಗೂ ಅನಿಸಿದ್ದಿದೆ. ಆದರೆ ಸತ್ಯವನ್ನು ಹೇಳುತ್ತಲೇ ಇರಬೇಕಾದ ಅನಿವಾರ್ಯತೆ ಸಮಾಜದ

ಅಭ್ಯುದಯದಲ್ಲಿ ಆಸ್ತೆ ಉಳ್ಳವರು ಮಾಡಲೇ ಬೇಕಾಗುತ್ತದೆ. ಮುಂದಿನ ದಿನಗಳಲ್ಲಿ ಜನಪದ ವಿಚಾರವನ್ನು ಕೌಲಗಿಯವರ ಆಶಯಕ್ಕೆ ತಕ್ಕಂತೆ ಇನ್ನಷ್ಟು ಗಟ್ಟಿಯಾಗಿ ತರುವ ಸಂಕಲ್ಪ ನಮ್ಮದು. ಕನ್ನಡದ ಚಿಂತಕರು, ಬರಹಗಾರರು ಕೈಜೋಡಿಸುತ್ತಾರೆಂಬ ನಂಬಿಕೆಯೂ ಇದೆ.

ಈ ಸಂಚಿಕೆ ಸಕಾರಣವಾಗಿ ಸುರೇಂದ್ರ ಕೌಲಗಿಯವರ ನೆನಪುಗಳನ್ನು ಹಂಚಿಕೊಳ್ಳುವ ಸಲುವಾಗಿ ಇದೆ. ಮುಂದಿನದು ಅಕ್ಟೋಬರ ಮಾಹೆ. ಸುರೇಂದ್ರ ಕೌಲಗಿಯವರ ನೆಚ್ಚಿನ ವ್ಯಕ್ತಿ ಮಹಾತ್ಮ ಗಾಂಧಿ ಹುಟ್ಟಿದ ಮಾಹೆ. ಹಾಗಾಗಿ ಆ ಸಂಚಿಕೆಯನ್ನು ಗಾಂಧಿ ಹಿನ್ನೆಲೆಯಲ್ಲಿ ತರಲು ಯೋಜಿಸಿದ್ದೆವೆ. ಚಿಂತನೆ ಮತ್ತು ಕ್ರಿಯಾಶೀಲತೆ ಪರಸ್ಪರ ಹೆಣೆದುಕೊಳ್ಳಬೇಕಾದ ಕಾಲ ಇದು. ಜನಪದ ವಿಚಾರ ಮತ್ತು ಜನಪದ ಸೇವಾ ಟ್ರಸ್ಟ್ ಎರಡೂ ಅಂತಹ ಅರ್ಥಪೂರ್ಣ ವೇದಿಕೆಯಾಗಲಿ.

– ಸಂಪಾದಕ ಮಂಡಲಿ

ಹೊರಟು ಹೋದ ನನ್ನ ತಾತಾ

– ಸುಹಾಸಿನಿ ಕೌಲಗಿ

ಎರಡು ದಶಕಗಳಿಂದಲೂ ತುಂಬು ಪರಿಸರದಲ್ಲಿ ಬೆಳೆದು ಬಂದ ನನಗೆ, ಇಂದು ಮೌಲ್ಯಯುತವಾದ ಬದುಕನ್ನು, ಜೀವನದ ಹೊಸ ಆಯಾಮವನ್ನು, ಆದರ್ಶದ ಬದುಕನ್ನು ಕಟ್ಟಿಕೊಡುವಲ್ಲಿ ಎಲ್ಲರ ಪಾತ್ರವೂ ಉಂಟಾದರೂ ತಾತಾ ಸುರೇಂದ್ರ ಕೌಲಗಿ ಮತ್ತು ಅಜ್ಜಿ ಗಿರಿಜಾ ಕೌಲಗಿಯವರದು ಮುಖ್ಯವೆನ್ನಬಹುದು.

ಸಮಾಜದ ಒಳಿತಿಗಾಗಿ ಸ್ಥಾಪಿಸಿದ ಜನಪದ ಸೇವಾ ಟ್ರಸ್ಟ್ ಇಂದು ಸುಂದರವಾದ ಬೃಹತ್ತಾದ ಆಲದ ಮರವಾಗಿ ಬೆಳೆದಿದೆ. ದುಃಖದ ಸಂಗತಿ ಎಂದರೆ ಒಂದು ವರ್ಷದ ಹಿಂದೆಯಷ್ಟೇ ಮರದ ಕಾಂಡ ಕೆಲಸವನ್ನು ನಿಲ್ಲಿಸಿ ಬಿಟ್ಟಿತು. ಅದರಿಂದ ಚೇತರಿಸಿಕೊಳ್ಳುತ್ತಿದ್ದ ಮರ ತನ್ನ ಬೇರನ್ನೇ ಇಷ್ಟು ಬೇಗ ಕಳೆದುಕೊಂಡು ಬಿಡುತ್ತದೆಂದು ಊಹಿಸಿಯೂ ಇರಲಿಲ್ಲ.. ಆದರೆ ಅದು ಆಲದ ಮರವೆಂಬುದನ್ನು ನಾವು ಮರೆಯಬಾರದು. ದಾದಾ ಹಾಗೂ ಅಜ್ಜಿ ಇಂದ ಬೆಳೆದ ಎಷ್ಟೋ ಜನ ಅದರ ಬಿಳಲಾಗಿದ್ದಾರೆ ! ಆದ್ದರಿಂದ ಜನಪದ ಸೇವಾ ಟ್ರಸ್ಟ್ ಎಂಬ ಆಲದ ಮರ ಸದಾ ಕಾಲ ಹಸಿರಾಗಿರುತ್ತದೆ, ಹಸಿರಾಗಿರುವಂತೆ ಮಾಡಲು ಸದಾ ನಾವೆಲ್ಲರು ಒಗ್ಗಟ್ಟಿನಲ್ಲಿ ದುಡಿಯೋಣ.

ಆ ದೊಡ್ಡ ಜಗುಲಿಯ ಮನೆ, ವಿಶಾಲವಾದ ಒಳಾಂಗಣದಲ್ಲಿ ಶುಭ್ರ ಶ್ವೇತ ವರ್ಣದ ಖಾದಿ ಜುಬ್ಬ, ಪಂಚೆ, ಕೋಟು ಧರಿಸಿರುತ್ತಿದ್ದ ಎತ್ತರದ ಆಕಾರ, ಸದಾ ಎಣ್ಣೆ ಹಚ್ಚಿಯೇ ತಲೆ ಬಾಚಿರುತ್ತಿದ್ದ ದಾದಾ. ಅವರಿಗಿಂತಲೂ ಕುಳ್ಳಗಿದ್ದು, ಪಾದ ಕಾಣುವಂತೆ ಮೋಟು ಸೀರೆ ಉಟ್ಟು, ಹಣೆಯಗಲಕ್ಕೂ ಕೆಂಪಗಿನ ವೃತ್ತಾಕಾದ ಬಿಂದಿ ಅಂಟಿಸಿಕೊಂಡು ಅಡುಗೆ ಮನೆಯಲ್ಲಿ ನಳಮಹಾರಾಜನೂ ನಾಚುವಂತೆ ರುಚಿವತ್ತಾದ ಅಡುಗೆ ಮಾಡುತ್ತಿದ್ದ ಅಜ್ಜಿ. ಇಬ್ಬರೂ ಒಂದೇ ವರ್ಷದಲ್ಲಿ ಮಾಯವಾಗಿದ್ದಾರೆ. ಸಾವು ಎಂದರೆ ಒಂದರ್ಥ ದಲ್ಲಿ ಮಾಯೆಯೇ ಅಲ್ಲವೇ? ಈಗ ಇಡೀ ಮನೆಯೇ ಒಂದು ತರಹದಲ್ಲಿ ನಿಶ್ಯಬ್ದತೆಯಿಂದ ಆವೃತವಾಗಿ ಉಪವಾಸ ಸತ್ಯಾಗ್ರಹಕ್ಕೆ ಕೂತಂತೆ ಭಾಸವಾಗುತ್ತಿದೆ. ತಾತಾ ಪ್ರೀತಿಯಿಂದ ಮನೆಗೆ ಹೋದೊಡನೆ ಇಡೀ ದಿನದ ಸಮಾಚಾರವನ್ನು ಕೇಳುತ್ತಿದ್ದರು. ಅಜ್ಜಿ ಹೊಟ್ಟೆಯ ತುಂಬ ಊಟ ಹಾಕುತಿದ್ದರು.ಆದರೆ ಇಂದು ಅವರಿಬ್ಬರೂ ಇಲ್ಲಾ.. ರೇಡಿಯೋ ಕೆಟ್ಟಿದೆ, ಶೆಲ್ಲು ಬೇಕಿದೆ, ಚಾರ್ಜು ಆಗುತ್ತಿಲ್ಲಾ ನೋಡಿ ಎಂದು ಸದಾ ಕಾಲ ಚಾಲನೆಯಲ್ಲಿರುವಂತೆ ರೇಡಿಯೋ ಆರೋಗ್ಯವನ್ನು

ನೋಡಿಕೊಳ್ಳುತಿದ್ದ ಅದರ ಮಾಲಿಕ ಶಾಶ್ವತವಾಗಿ ರಜೆ ಹಾಕಿ ಹೋಗಿದ್ದಾನೆ. ದಿನದ ಮುಕ್ಕಾಲು ಭಾಗ ಓಡುತ್ತಲೇ ಇದ್ದ ರೇಡಿಯೋ ಮೂಲೆ ಹಿಡಿದಿದೆ. ದಾದಾ ವಾಕರ್ ಅನ್ನು ಹಿಡಿದು ನಡೆಯುತ್ತಿದ್ದರೂ ದಿನಕ್ಕೆ ನಾಲ್ಕಾರು ಬಾರಿ ಕನ್ನಡಿಯ ಮುಂದೆ ನಿಂತು ತಲೆ ಬಾಚಿಕೊಳ್ಳುತ್ತಿದ್ದರು. ಅಷ್ಟು ಶಿಸ್ತಿನ ಮನುಷ್ಯ. ನಾನು ಯಾವಾಗಲೂ ಛೇಡಿಸುತ್ತಿದ್ದೆ, ನನಗಿಂತಲೂ ನೀವೆ ಹೆಚ್ಚು ಸಿಂಗರಿಸಿಕೊಳ್ಳುತ್ತೀರ ಎಂದು , ಕನ್ನಡಿ ಸವೆದು ಹೋಗುತ್ತದೆ ಎನ್ನುತ್ತಿದ್ದೆ. ಆದರೆ ಇಂದು ಆ ಕನ್ನಡಿಯ ಮುಂದೆ ನಾನು ನಿಂತರೆ ನಿನ್ನನ್ನು ನೋಡಲಾರೆ ದಾದಾರನ್ನು ಕಳುಹಿಸು ಎನ್ನುತ್ತಾ ಅದು ನನ್ನೊಂದಿಗೆ ಮುನಿಸಿ ಕೊಂಡಿದೆಯೇನೋ ಎಂಬಂತೆ ಭಾಸವಾಗುತ್ತದೆ.

ಪ್ರತಿದಿನ ಸಂಜೆ ಏಳು ಗಂಟೆಗೆ ಊಟ ಬಡಿಸು, ಹೊಸ ರುಚಿ ಮಾಡುವುದಾದಾರೆ ಬೇಗಮಾಡಿ, ಬೀದಿ ಜಗುಲಿ ಮೇಲೆ ತಿನ್ನಬೇಡಿ ಎಂದು ಕೇಳುತ್ತಿದ್ದ ಧ್ವನಿ ಎಷ್ಟೋ ಬಾರಿ ಕೋಪ ತರಿಸಿದ್ದುಂಟು. ಆದರೇ ಇಂದು ಆ ಧ್ವನಿಯನ್ನು ಕೇಳಬೇಕೆಂದರೂ ಸಾಧ್ಯವಾಗುತ್ತಿಲ್ಲ.

ಆಸ್ಪತ್ರೆಯಲ್ಲಿ ಸುಮಾರು ಹನ್ನೆರಡು ದಿನ ದಾದಾ ಇದ್ದರು, ಉಸಿರಾಟದ ತೊಂದರೆಯಿಂದ ಬಹಳ ಒದ್ದಾಡುತ್ತಿದ್ದರು. ಡಾಕ್ಟರುಗಳು ಅಸಹಾಯಕರಾಗಿದ್ದರು. ಆ ಕೊನೆ ದಿನಗಳಲ್ಲಿ ದಾದಾ ಬಹಳ ಕ್ಷೀಣಿಸುತ್ತಿದ್ದರು. ಸತ್ಯದ ಮಾತೆಂದರೆ ದಾದಾ ಬದುಕುವ ಯಾವುದೇ ನಂಬಿಕೆಯೂ ಇರಲಿಲ್ಲಾ. ಅಗಲುತ್ತಾರೆಂದು ತಿಳಿದರೂ ಆ ಸಮಯವನ್ನು ಕಾಯುತ್ತಾ ಕೂರುವುದಿದೆಯಲ್ಲಾ ಅದನ್ನು ಅಕ್ಷರ ರೂಪಕ್ಕೆ ತರಲು ಸಾಧ್ಯವೇ ಇಲ್ಲ. ಎಲ್ಲೋ ಒಂದೆಡೆ ಏನಾದರು ಜಾದು ಆಗಿ ಚೇತರಿಸಿಕೊಂಡು ಬಿಟ್ಟರೆ ಎಂಬ ಆಸೆ ಇದ್ದೇಯಿತ್ತು. ದಾದಾರ ಮುಖದಲ್ಲಿ ನೋಡದ ಗಡ್ಡ–ಮೀಸೆ, ಕೆದರಿದ ತಲೆಯನ್ನು ನೋಡಲಾಗದೆ ನಾನೇ ಸ್ವತಃ ಎಣ್ಣೆ ಹಚ್ಚಿ ತಲೆ ಬಾಚಿದೆ, ಗಡ್ಡ–ಮೀಸೆಯನ್ನೂ ತೆಗೆದೆ. ಆ ದಿನವೇ ರಾತ್ರಿ ದಾದಾ ನಮ್ಮನ್ನು ಅಗಲಿದರು. ಬಹುಶಃ ಅವರಿಗೆ ನಾನು ತಲೆ ಬಾಚಿ, ಗಡ್ಡ–ಮೀಸೆ ತೆಗೆದ ನಂತರ ತಾನು ಹೊರಡಲು ಸಿದ್ದವಾಗಿದ್ದೇನೆಂದು ಭಾವಿಸಿದರೇನೋ. ಅದೇ ಶುಭ್ರ ಬಿಳಿವಸ್ತ್ರದಲ್ಲಿ ಬಾಚಿದ ತಲೆ, ಗಡ್ಡ–ಮೀಸೆ ತೆಗೆದ ಮುಖ ಹೊತ್ತು ಅಜ್ಜಿಯ ಬಳಿ ಶಿಸ್ತಿನಿಂದ ಹೊರಟೇ ಬಿಟ್ಟರು ನನ್ನ ದಾದಾ.

ಈಗ ಮನೆಯೆಲ್ಲವೂ ಖಾಲಿ ಖಾಲಿ. ಬರಿ ಅವರ ನೆನಪು ಮಾತ್ರ. ತಾತಾ ಅಜ್ಜಿಯ ಪ್ರೀತಿ ಮಮತೆಯ ಮುಂದೆ ಬೇರೇನೂ ಇಲ್ಲ. ಅವರು ತೋರಿದ ಸರಳ ಜೀವನ ನಮಗೆಲ್ಲರಿಗೂ ಒಂದು ಮಾದರಿ.

ದಾದಾ ನನ್ನ ತಾತಾ

– ಸುಪ್ರಜ್ ಕೌಲಗಿ

ಅಣ್ಣ, ತಂಗಿ ಮತ್ತು ನಾನು ನಮ್ಮ ಹೆಚ್ಚಿನ ಬಾಲ್ಯವನ್ನು ಕಳೆದದ್ದು ನಮ್ಮ ತಾತಾ 'ಸುರೇಂದ್ರ ಕೌಲಗಿ'ಯವರಿಂದ ಪ್ರಾರಂಭಿತವಾದ 'ಹೊಸ ಜೀವನ ದಾರಿ' ಕೇಂದ್ರದಲ್ಲಿ. ಇಲ್ಲಿ ನಮ್ಮ ಬಾಲ್ಯವನ್ನು ಕಳೆದದ್ದು ಎನ್ನುವದಕ್ಕಿಂತ ಬಾಲ್ಯದಲ್ಲಿ ಬೆಳೆದದ್ದು ಎಂದರೇ ಸೂಕ್ತವೆನಿಸುತ್ತದೆ. ಪ್ರತಿದಿನವೂ ಚಟುವಟಿಕೆಗಳಿಂದ ಕೂಡಿದ್ದ ಆ 'ದಾದಾ' ನಿರ್ಮಿತ ಕೇಂದ್ರ ನಮ್ಮ ಬಾಲ್ಯದ ಪ್ರತಿಕ್ಷಣವನ್ನೂ ಸೃಜನಾತ್ಮಕವಾಗಿರುವಂತೆ ಮಾಡಿತ್ತು. ನಿಮಗೆ ಒಂದು ವಿಷಯವನ್ನು ಹೇಳಲು ಮರೆತೆ. ನಾವೆಲ್ಲರೂ ನಮ್ಮ ತಾತಾನನ್ನೂ 'ದಾದಾ' ಎಂತಲೇ ಸಂಭೋದಿಸುತ್ತಿದ್ದೆವು. ನಾವು ಹುಟ್ಟುವ ಮುಂಚೆಯೇ ಎಲ್ಲರೂ ಅವರನ್ನು ಹಾಗೆ ಕರೆಯುತ್ತಿದ್ದ ಕಾರಣ ನಾವೂ 'ದಾದಾ' ಎಂದೇ ಕರೆಯಲು ರೂಢಿಸಿಕೊಂಡೆವೋ ಏನೋ.

'ತಾತಾ' ಎಂದು ಕರೆಯದೆ 'ದಾದಾ' ಎಂದು ಕರೆಯುತ್ತಿದ್ದುದು ಒಂದು ರೀತಿಯಲ್ಲಿ ಸರಿಯಂತಲೇ ಅನಿಸುತ್ತದೆ. ಏಕೆಂದರೇ ನಮ್ಮ ತಾತಾ ಕೇವಲ ಕುಟುಂಬ ಸಂಬಂಧಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಸಂಸ್ಥೆಯಲ್ಲಿ ಬೆಳೆಯುತ್ತಿದ್ದ ಅನೇಕ ಪೋಲಿಯೋ ಪೀಡಿತ ಮಕ್ಕಳಿಗೂ, ಸಂಸ್ಥೆಯಲ್ಲಿನ ಕಾರ್ಯಕರ್ತರಿಗೂ, ಅವರು ನಡೆಸುತ್ತಿದ್ದ ಶ್ರೀಕೃಷ್ಣ ಕನ್ನಡ ಶಿಶುವಿಹಾರದ ಮಕ್ಕಳಿಗೂ ತಾತಾನ ಸ್ಥಾನದಲ್ಲೇ ಇದ್ದರು. ಈಗಲೂ ಸಹ ತಾತಾನ ಸ್ಥಾನದಲ್ಲೇ ಇದ್ದಾರೆ. 'ತಾತ' ಶಬ್ದ ಕೇವಲ ಕುಟುಂಬ ಸಂಬಂಧಗಳಿಗೆ ಮೀಸಲಾಗಿದ್ದು 'ದಾದಾ' ಎಂಬುದು ಒಬ್ಬ ನಾಯಕನೆಂಬ ಅರ್ಥವನ್ನು ಕೊಡುತ್ತದೆ ಎಂದು ಭಾವಿಸಿದ್ದೇನೆ. ಕೇವಲ ಕುಟುಂಬ ಸಂಬಂಧಗಳಿಗೆ ಮೀಸಲಾಗಿರದೆ ಸಮಾಜದ ಪ್ರೀತಿ–ಸಂಬಂಧಗಳನ್ನು ಪಡೆದ ಒಬ್ಬ ವ್ಯಕ್ತಿ 'ದಾದಾ" ಆಗಿ ಹೊರಹೊಮ್ಮುತ್ತಾನೆ. ಆದ್ದರಿಂದ 'ದಾದಾ' ಎಂಬ ಅನ್ವರ್ಥನಾಮವೇ ನನ್ನ ತಾತಾನಿಗೆ ಸೂಕ್ತ.

ಹೊಸ ಜೀವನ ದಾರಿಯಲ್ಲಿ ನನ್ನ ಅಣ್ಣ, ನಾನು ಮತ್ತು ನನ್ನ ತಂಗಿ ಒಂದು ನಿಮಿಷವೂ ಸುಮ್ಮನೇ ಕುಳಿತುಕೊಳ್ಳುತ್ತಿರಲಿಲ್ಲ, ನಾನಾ ರೀತಿಯ ಕಾರ್ಯಗಳಲ್ಲಿ ನಮ್ಮನ್ನು ತೊಡಗಿಸಿಕೊಳ್ಳುತ್ತಿದ್ದೆವು. ನಮ್ಮೆಲ್ಲರ ಪ್ರತಿಯೊಂದು ನಿಮಿಷವನ್ನೂ ಸುಖಮಯವಾಗಿ ಕ್ರಿಯಾಶೀಲವಾಗಿ, ಖುಷಿಯಾಗಿ ಇರುವಂತೆ ಮಾಡುತ್ತಿದ್ದುದು ಆ ನಮ್ಮ ದಾದಾ. ಇಂದು ಹೊಸಜೀವನದಾರಿ ಕೇಂದ್ರ ಕ್ಕೆ

ಬಂದಾಗಲೆಲ್ಲಾ ನನಗೆ ಬರುವ ಒಂದು ಪುಟ್ಟ ನೆನಪನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ.

ಬೆಳಗ್ಗೆ ಬೇಗನೆ ಎದ್ದು, ಹಸ್ತವನ್ನು ನೋಡಿ "ಕರಾಗ್ರೆ ವಸತೇ ಲಕ್ಷ್ಮೀ, ಕರಮಧ್ಯೇ ಸರಸ್ವತಿ. ಕರಮೂಲೆ ಸ್ಥಿತಾ ಗೌರಿ ಪ್ರಭಾತೇ ಕರದರ್ಶನಂ" ಎಂದು ಹೇಳುತ್ತಾ 'ಅಮ್ಮಾ' ಎಂದು ಒಮ್ಮೆ ಕೂಗಿದರೆ ಸಾಕು! ಅಮ್ಮ ನಮ್ಮೆಲ್ಲರಿಗೂ ಸೌದೆ ಒಲೆಯ ಘಮಲಿನ ಬಿಸಿನೀರಿನಿಂದ ಸ್ನಾನ ಮಾಡಿಸಿ, ತಲೆಗೆ ಕೊಬ್ಬರಿ ಎಣ್ಣೆ ಹಚ್ಚಿ, ಮುಖಕ್ಕೆ 'ಜಾನ್ಸನ್' ಪೌಡರು ಮೆತ್ತಿ, ಕೊಡುತಿದ್ದ ದೊಡ್ಡ ಲೋಟದ ಹಾಲಿಗೆ, ಮೂರು 'ಪಾರ್ಲೆ-ಜಿ' ಬಿಸ್ಕತ್ತನ್ನು ತೇಲಿಬಿಟ್ಟು ಚಮಚದಲ್ಲಿ ರುಬ್ಬಿ ಕಲಗಚ್ಚು ಮಾಡಿ ಅದನ್ನು ಕುಡಿದಾಗ ನಮಗೆ ಅಮೃತ ಕುಡಿದಂತಾಗುತ್ತಿತ್ತು. ಅದರ ಟೇಸ್ಟೇ ಬೇರೆ ಬಿಡಿ. ನಂತರ 'ಟುರ್ರ್ ಟುರ್ರ್' ಸದ್ದು ಮಾಡುತ್ತ ನಮ್ಮ ಪ್ರೀತಿಯ ಹಳೆಯ ಸುಜುಕಿ ಸಮುರಾಯ್ ಬೈಕ್‌ನಲ್ಲಿ ಅಪ್ಪ ನಮ್ಮನ್ನು ನಾಲ್ಕೈದು ಮೈಲು ದೂರದಲ್ಲಿ ಮೇಲುಕೋಟೆಯ ಅಜ್ಜಿ-ದಾದಾನ ಮನೆಗೆ ಕರೆದೊಯ್ಯಲು ಹಾಜರಾಗುತ್ತಿದ್ದರು. ನಾವು ಸರ್ಕಸ್ ಮಾದರಿಯಲ್ಲಿ ಬೈಕ್‌ನ ಮೇಲೆ ಕುಳಿತುಕೊಂಡು ಮೇಲುಕೋಟೆಗೆ ಹೋಗುತ್ತಿದ್ದೆವು. 'ಸರ್ಕಸ್' ಎಂಬ ಪದ ಬಳಸಲು ಕಾರಣವಿದೆ. ಏಕೆಂದರೆ ಅಪ್ಪ ಬೈಕ್ ಚಾಲಕನ ಸ್ಥಳದಲ್ಲಿ ಕುಳಿತರೆ, ತಂಗಿ ಮುಂಭಾಗದಲ್ಲಿ ತಾನೇ ಚಾಲಕಿ ಎಂಬಂತೆ ಕೂರುತ್ತಿದ್ದಳು. ಹಿಂಭಾಗದಲ್ಲಿ ಅಮ್ಮ ಕೂರುತ್ತಿದ್ದರು. ಅಮ್ಮ-ಅಪ್ಪರ ಮಧ್ಯದಲ್ಲಿ ಅಪ್ಪಚ್ಚಿಯಾದಂತೆ ಅಣ್ಣ ಕೂರುತ್ತಿದ್ದ, ನಾನು ತೂಕ ಕಡಿಮೆ ಇದ್ದ ಕಾರಣ ಅಮ್ಮ ನನ್ನನ್ನು ಒಂದು ಕೈನಲ್ಲಿ ಹಿಡಿದು ತೊಡೆಯ ಮೇಲೆ ಕೂರಿಸಿಕೊಳ್ಳುತ್ತಿದ್ದಳು. ಇಷ್ಟೇ ಅಲ್ಲದೇ ಒಂದು ಹಾಲಿನ ದೊಡ್ಡ ಕ್ಯಾನ್ ನನಗಿಂತಲೂ ಹೆಚ್ಚು ತೂಕವಿತ್ತೊ ಏನೋ!, ಅದು ನಮ್ಮ ಅಮ್ಮನ ಇನ್ನೊಂದು ಕೈನಲ್ಲಿ ನೇತು ಬೀಳುತ್ತಿತ್ತು! ಇದನ್ನು ಸರ್ಕಸ್ ಅನ್ನದೆ ಇನ್ನೇನನ್ನಬೇಕು ? ತಾತಾ-ಅಜ್ಜಿಯನ್ನು ನೋಡಲು ನಾವು ಕಾತುರದಿಂದ ಬೈಕ್‌ನ ಮೇಲೆ ಕುಳಿತುಕೊಳ್ಳುತ್ತಿದ್ದೆವು. ಆದರೆ ನಿಜವಾಗಿ ನಮಗಿಂತಲೂ ಹೆಚ್ಚಿನ ಕಾತುರ ಅಜ್ಜಿ-ದಾದಾರಲ್ಲಿತ್ತು. ಅಪ್ಪ ತೇರಿನಂತೆ ಮೇಲುಕೋಟೆಯ ಮನೆಯ ಬಾಗಿಲ ಮುಂದೆ ಬಂದು ಬೈಕ್‌ನ್ನು ನಿಲ್ಲಿಸುವುದೇ ತಡ ದಾದಾ ಮತ್ತು ಅಜ್ಜಿಯರಲ್ಲಿ ಸಂತೋಷದ ಸಂಭ್ರಮ ಮನೆ ಮಾಡುತ್ತಿತ್ತು. ಮನೆಯ ಒಳಕ್ಕೆ ಇಳಿದು ಓಡುತ್ತಿದ್ದಂತೆ, ದಾದಾ ಬಲು ಆನಂದದಿಂದ ಬಿಳಿ ಸಿಂಹಾಸನದಂತಿದ್ದ ಅವರ ಹಳೆಯ ಬಿದಿರಿನ ಚೇರಿನ ಮೇಲೆ ಕುಳಿತು, ಅವರ ಅಗಲವಾದ ಕಾಲಿನ ಮೇಲೆ ತಮ್ಮ ಮೊಮ್ಮಕ್ಕಳಾದ ನಮ್ಮನ್ನು ಒಬ್ಬೊಬ್ಬರನ್ನಾಗಿ ನಿಲ್ಲಿಸಿಕೊಂಡು ಅವರ ಎರಡೂ ಕೈಗಳಲ್ಲಿ ನಮ್ಮ ಎರಡೂ

ಕೈಗಳನ್ನು ಬಿಗಿಯಾಗಿ ಹಿಡಿದು ಒಂದೇ ಸಮನೆ ಅವರ ಎರಡೂ ಕಾಲನ್ನು ಮೇಲಕ್ಕೆ ಒಗೆದು ನಮ್ಮನ್ನು ಮೇಲಕ್ಕೆ ಜಿಗಿಸುತ್ತಿದ್ದರು. ನಮಗೋ ಆಕಾಶಕ್ಕೆ ಮುಟ್ಟಿಬಂದಂತೆ ಭಾಸವಾಗುತ್ತಿತ್ತು. ಅವರು ಜಿಗಿಸುತ್ತಿದ್ದುದು ನಮಗೆ ಬಹಳ ಇಷ್ಟವಾಗುತ್ತಿದ್ದ ಕಾರಣ, ಅವರು ಬಿಳಿ ಜುಬ್ಬ ಧರಿಸಿ ರಾಜನಂತೆ ಅವರ ಸಿಂಹಾಸನದಲ್ಲಿ ಕುಳಿತಿದ್ದಾಗಲೆಲ್ಲಾ ಅವರ ಕಾಲಿನ ಮೇಲೆ ಹೋಗಿ ನಿಂತು ಬಿಡುತ್ತಿದ್ದೆವು. ಅವರೂ ಸಹ ಒಂದು ಸಲವೂ ಬೇಡವೆನ್ನದೆ ನಮ್ಮನ್ನು ಆಟವಾಡಿಸುತ್ತಿದ್ದರು. ಅವರ ಕೈ ಮತ್ತು ಕಾಲಲ್ಲಿ ಎಷ್ಟು ಶಕ್ತಿ ಇತ್ತು ಎಂಬುದು ನಮಗೆ ಊಹಿಸಲೂ ಸಾಧ್ಯವಿಲ್ಲ.

ದಾದಾ ಕೇವಲ ಸಂಸ್ಥೆಯ ಕೆಲಸ ಕಾರ್ಯಗಳಷ್ಟರಲ್ಲೇ ಅಲ್ಲದೆ ಕುಟುಂಬದವರೊಡನೆ, ಸಂಸ್ಥೆಯ ಮಕ್ಕಳೊಡನೆ, ಶಿಶುವಿಹಾರದ ಶಿಶುಗಳೊಡನೆ ಹಾಡು ಹೇಳುತ್ತ, ನೀತಿಕಥೆಗಳನ್ನು ಹೇಳುತ್ತ ಮತ್ತು ಆಟವಾಡುತ್ತ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಬೆಳೆದವರು. ದಾದಾನಿಗೆ ಅಶಿಸ್ತನ್ನು ಕಂಡರೆ, ಸಮಯ ಪಾಲಿಸದ್ದನ್ನು ಕಂಡರೆ ಮೈಸುಡುವಂತೆ ಕೋಪ ಬರುತ್ತಿತ್ತು. ಎಲ್ಲಾ ಕೆಲಸಕಾರ್ಯಗಳು ಸಮಯಕ್ಕನುಸಾರವಾಗಿ ಆಗಿಬಿಡಬೇಕಿತ್ತು. ಅವರ ಇಂತಹ ಗುಣಗಳಿಗೆ ಅವರು ಸಂಪೂರ್ಣವಾಗಿ ಹಿಂಬಾಲಿಸುತ್ತಿದ್ದ ಗಾಂಧೀಯ ವಿಚಾರಗಳೇ ಕಾರಣ.

ದಾದಾ ಮಾಡಿದ ಕೆಲಸಕಾರ್ಯಗಳು ನಿಮಗೆ ತಿಳಿದೇ ಇದೆ. ದಾದಾ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದುದು ಕಡಿಮೆ. ಅವರು ಹೆಚ್ಚಾಗಿ ಬರೆಯುತ್ತಿದ್ದರು, ಇಲ್ಲವಾದಲ್ಲಿ ಭಾಷಣ ಮಾಡಲೆಂದು ಓಡಾಡುತ್ತಿರುತ್ತಿದ್ದರು. ದಾದಾ ತಮ್ಮ ಅನೇಕ ಗಾಂಧೀಯ ವಿಚಾರಗಳನ್ನು ನಮ್ಮೊಡನೆ ಹಂಚಿಕೊಳ್ಳುತ್ತಿದ್ದರು. ಆ ಎಲ್ಲಾ ವಿಚಾರಗಳು ನಮ್ಮ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿದೆ ಎಂದು ಹೇಳಲಿಚ್ಚಿಸುತ್ತೇನೆ. ಕೊನೆಯದಾಗಿ ನನ್ನೊಡನೆ ಅವರು ಹಂಚಿಕೊಂಡ ವಿಚಾರವೆಂದರೆ ಗಾಂಧೀಯವರ ಏಕದಶವ್ರತಗಳು: “ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಸರ್ವತ್ರ ಭಯವರ್ಜನ, ಸರ್ವಧರ್ಮ, ಸಮಾನತ್ವ, ಸ್ವದೇಶಿ, ಸ್ಪರ್ಶಭಾವನಾ” ದಾದಾ ಇದರಲ್ಲಿ ಹೆಚ್ಚಿನದನ್ನು ಪಾಲಿಸುತ್ತಿದ್ದರು. ಈ ಹನ್ನೊಂದು ವ್ರತಗಳನ್ನು ಪಾಲಿಸಿದಲ್ಲಿ ಮನುಷ್ಯನು ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಸಂಪೂರ್ಣ ಆರೋಗ್ಯವಾಗಿರುತ್ತಾನೆಂದು ಜೊತೆಗೆ ಸಮಾಜವೂ ಸರಿ ದಾರಿಯಲ್ಲಿ ಇರುತ್ತದೆಂದು ಹೇಳಿದರು.

ದಾದಾನಿಗೆ ಬಲು ಪ್ರಿಯವಾದ ಮೂರು ವಿಷಯಗಳೆಂದರೆ–

೧. ಅವರ ರೇಷ್ಮೆ ಎಳೆಯಂಥ ಬಿಳಿ ಕೂದಲುಗಳನ್ನು ಹಿಂದಕ್ಕೆತ್ತಿ ತಲೆಬಾಚಿಕೊಳ್ಳುವುದು.

೨. ರೇಡಿಯೋದಲ್ಲಿ ವಾರ್ತೆ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೇಳುವುದು ಮತ್ತು ವಾರ್ತಾ ಪತ್ರಿಕೆ ಓದುವುದು.

೩. ಬಿಸಿ ಬಿಸಿಯಾದ ಮೆಣಸಿನಕಾಯಿ ಬಜ್ಜಿ ತಿನ್ನುವುದು.

ದಾದಾ ಆಸ್ಪತ್ರೆಯಲ್ಲಿದ್ದಾಗ ಅವರ ಎರಡೂ ಕೈಗಳನ್ನೂ ಹತ್ತಿಯಿಂದ ಬಿಗಿಯಾಗಿ ಕಟ್ಟಿದ್ದರು. ಅವರ ಬಾಯಿಗೆ ಹಾಕಲಾಗಿದ್ದ 'ರೈಸ್ ಟ್ಯೂಬ್' ಅನ್ನು ತಮ್ಮ ಕೈಗಳಿಂದ ಕಿತ್ತೊಗೆಯುತ್ತಾರೆಂದು ಹಾಗೆ ಮಾಡಿದ್ದರು. ಇದನ್ನು ಕಂಡಾಗಲೆಲ್ಲಾ ನಮಗೆ ಬಹಳ ದುಃಖವಾಗುತ್ತಿತ್ತು. ಎಂದೂ ಸುಮ್ಮನಿರದೆ ಬರೆಯುತ್ತಿದ್ದ ಅವರ ಕೈ ಮತ್ತು ಬೆರಳುಗಳನ್ನು ಕಟ್ಟಿಹಾಕಿದ ರೀತಿಯು ಬೀಗ ಜಡಿದಂತೆ ಒಂದೇ ಜಾಗದಲ್ಲಿ ಅಸಹಾಯಕತೆಯಿಂದ ಜೋತುಬಿದ್ದಿದ್ದವು. ಇದನ್ನು ಸಹಿಸಲಾರದೆ ನಾವು ಎಷ್ಟೋ ಸಾರಿ ಅವರ ಕೈಗೆ ಜಡಿದಿದ್ದ ಹತ್ತಿಯನ್ನು ಬಿಚ್ಚಿ ಅವರ ಕೈಗಳಿಗೆ ಸ್ವಾತಂತ್ರ್ಯ ನೀಡಿದ್ದೂ ಉಂಟು.

ದಾದಾ ನಮ್ಮೆಲ್ಲರನ್ನೂ ಅಗಲುವ ಒಂದೆರಡು ದಿನ ಮುನ್ನ ಆಸ್ಪತ್ರೆಯಲ್ಲಿದ್ದಾಗ ನಾವು ಅಣ್ಣ–ತಂಗಿಯರು 'ಈಗ ದಾದಾನ ಮುಂದೆ ಬಿಸಿ ಬಿಸಿ ಮೆಣಸಿನಕಾಯಿ ಬಜ್ಜಿ ಇಟ್ಟರೆ, ಅದರ ವಾಸನೆಗೆ ಥಟ್ಟನೆ ದಾದಾ ಎದ್ದು ಕುಳಿತು ಆರೋಗ್ಯ ವಂತರಾಗಿ ಮನೆಗೆ ಹಿಂದಿರುಗಿಬಿಡುವರೆಂದು' ನಮ್ಮಲ್ಲೇ ನಾವು ಹಾಸ್ಯ ಮಾಡಿಕೊಂಡದ್ದೂ ಉಂಟು. ಆದರೆ ಅವರ ಮುಂದೆ ಬಿಸಿ ಬಿಸಿ ಮೆಣಸಿನಕಾಯಿ ಬಜ್ಜಿ ಇಡದೆ ನಾವು ತಪ್ಪು ಮಾಡಿದೆವಾ! ಎಂದು ಅವರು ನಮ್ಮನ್ನು ಅಗಲಿದ ನಂತರ ನಮಗೆ ಅನಿಸುತ್ತಿದೆ.

ನನ್ನ ಸ್ನೇಹಿತ ಮತ್ತು ಮಾರ್ಗದರ್ಶಕ

– ಸುಮನಸ ಕೌಲಗಿ

ನನ್ನ ತಾತಾ (ದಾದಾ) ಸುರೇಂದ್ರ ಕೌಲಗಿಯವರು ಯಾವಾಗಲೂ ಜನಪದ ವಿಚಾರಕ್ಕೆ ಲೇಖನಗಳನ್ನು ಬರೆದು ಕೊಡು ಎಂದು ಒತ್ತಾಯಿಸುತ್ತಿದ್ದರು. ಪ್ರತಿ ಸಲವೂ ಮುಂದಿನ ಸಂಚಿಕೆಗೆ ಬರೆಯುತ್ತೇನೆ ಎಂದು ಸಬೂಬನ್ನು ಕೊಡುತ್ತಾ ಕಡೆಗೆ ಅವರ ಸ್ಮರಣ ಸಂಚಿಕೆಗೆ ನಾನು ಬರೆಯುವಂತಾಗಿರುವುದು ನನ್ನಲ್ಲಿ ಅಪಾರ ದುಃಖವನ್ನು ಉಂಟು ಮಾಡಿದೆ. ನಾನು ಎಷ್ಟೇ ಪ್ರಯತ್ನಿಸಿದರೂ ತಾತಾನ ಜೊತೆಗಿನ ನನ್ನ ಸಂಬಂಧ ಹಾಗೂ ಒಡನಾಟವನ್ನು ಸಂಪೂರ್ಣವಾಗಿ ಬರವಣಿಗೆಯ ರೂಪದಲ್ಲಿ ಹೇಳಲು ಅಸಾಧ್ಯವೆನಿಸುತ್ತದೆ. ದಾದಾ ನನಗೆ ಕೇವಲ ತಾತಾನಾಗಿರದೆ ಒಬ್ಬ ಒಳ್ಳೆಯ ಸ್ನೇಹಿತ ಕೂಡ ಆಗಿದ್ದರು. ಅವರು ಓದಿದ ಅಥವಾ ಕೇಳಿದ ವಿಷಯಗಳನ್ನು ಸಮಯ ಸಿಕ್ಕಾಗೆಲ್ಲ ನನ್ನೊಡನೆ ಹಂಚಿಕೊಂಡು ನನ್ನ ಅಭಿಪ್ರಾಯವನ್ನು ಕೇಳುತ್ತಿದ್ದರು. ಅವರಲ್ಲಿ ನನಗೆ ಆಶ್ಚರ್ಯವನ್ನು ಮೂಡಿಸುತ್ತಿದ್ದದ್ದು ಸದಾಕಾಲ ಎಲ್ಲದರ ಬಗ್ಗೆಯೂ ಅವರಿಗಿದ್ದ ವಿವೇಚನೆ ಹಾಗು ನೈತಿಕತೆಯನ್ನು ಒಳಗೊಂಡ ಕುತೂಹಲ. ಇದೇ ಅವರ ಸೈದ್ಧಾಂತಿಕ ನಿಲುವನ್ನು ಗಟ್ಟಿಗೊಳಿಸಿ ಅಷ್ಟು ಸರಳವಾದ ಬದುಕನ್ನು ನಡೆಸಲು ಸಾಧ್ಯವಾಗಿಸಿತು ಎನಿಸುತ್ತದೆ.

ಇದನ್ನು ನಡೆದ ಒಂದು ಘಟನೆಯ ಮೂಲಕ ಹಂಚಿಕೊಳ್ಳಲು ಬಯಸುತ್ತೇನೆ. ಕೆಲವು ವರ್ಷಗಳ ಹಿಂದೆ ನಾನು ಹೊಸ ಜೀವನದಾರಿಯಿಂದ ಮೇಲುಕೋಟೆಗೆ ಬರುವಾಗ ದಾರಿಯಲ್ಲಿ ಅಪಘಾತಕ್ಕೆ ಸಿಕ್ಕಿ ಒಂದು ಸಣ್ಣ ಪಕ್ಷಿಯೊಂದು ಸತ್ತಿತ್ತು. ಅದನ್ನು ಮಕ್ಕಳಿಗೆ ತೋರಿಸುವ ಸಲುವಾಗಿ ಮನೆಗೆ ಎತ್ತಿಕೊಂಡು ಬಂದೆ. ಅದನ್ನು ಕಂಡ ದಾದಾ ಇದು ಯಾವ ಪಕ್ಷಿ? ಏನನ್ನು ತಿನ್ನುತ್ತದೆ? ಹೇಗೆ ಸತ್ತಿತು? ಎಂದೆಲ್ಲಾ ಪ್ರಶ್ನೆಯ ಮೇಲೆ ಪ್ರಶ್ನೆಯನ್ನು ಕೇಳಲು ಶುರು ಮಾಡಿದರು. ಕಡೆಗೆ ಚರ್ಚೆಯು ಪರಿಸರ ಮತ್ತು ಅಭಿವೃದ್ಧಿಯ ನಡುವಿನ ಸಂಘರ್ಷಕ್ಕೆ ತಿರುಗಿ ಹೇಗೆ ನೈತಿಕತೆಯನ್ನು ಒಳಗೊಂಡ ಸರಳ ಜೀವನ ಶೈಲಿಯು ಈ ಬಹುದೊಡ್ಡ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯ ಎಂಬುದರ ಬಗ್ಗೆ ಮನವರಿಕೆ ಮಾಡಿತು. ಕೇವಲ ಕಾಡಿನ ಸಂರಕ್ಷಣೆಯಿಂದ ಪರಿಸರವನ್ನು ಉಳಿಸಬಹುದು ಎಂದು ನಂಬಿದ್ದ ನನಗೆ ಅದಕ್ಕೆ ಅಂಟಿಕೊಂಡಿರುವ ಬಹು ಮುಖ್ಯವಾದ ಜೀವನ ಶೈಲಿಯ ಆಯಾಮವನ್ನು ಮನವರಿಕೆ ಮಾಡಿದರು.

ದಾದಾ ಏಕೆ ಯಾವಾಗಲು ಎರಡು ಜೊತೆ ಖಾದಿ ಬಟ್ಟೆಯನ್ನು ಬಿಟ್ಟು ಬೇರೆ ಏನನ್ನೂ ಹಾಕಿಕೊಳ್ಳುವುದಿಲ್ಲ ಎಂಬ ನನ್ನ ಪ್ರಶ್ನೆಗೆ ಅಂದು ಉತ್ತರ ಸಿಕ್ಕಿತು. ಆಗಾಗ ಸರಳ ಜೀವನ ಶೈಲಿಯಿಂದ ಜಾರುತ್ತಿದ್ದ ನನಗೆ ದಾದಾನ ಜೊತೆಗಿನ ಚರ್ಚೆಗಳು ಮತ್ತೆ ಮತ್ತೆ ಆ ರೀತಿ ಜಾರುವುದರಿಂದಾಗುವ ಅಪಾಯಗಳನ್ನು ಮನದಟ್ಟು ಮಾಡಿಸುತ್ತಿತ್ತು.

ಅವರಿಗಿದ್ದ ಕುತೂಹಲ ಸ್ವಭಾವವು ಅವರಲ್ಲಿ ಜ್ಞಾನದ ದಾಹವನ್ನು ಇರಿಸಿತ್ತು ಎಂದೆನಿಸುತ್ತದೆ. ಎಷ್ಟರ ಮಟ್ಟಿಗೆಂದರೆ ಕೆಲವು ಸಲ ನಿದ್ದೆ ಬರದಿದ್ದಾಗ ಮಧ್ಯ ರಾತ್ರಿ ಎದ್ದು ಪುಸ್ತಕಗಳನ್ನು ಓದುತ್ತಿದ್ದರು. ಪ್ರತಿಸಲವು ಅವರು ಓದುತ್ತಿದ್ದದ್ದನ್ನು ಕಂಡಾಗಲೆಲ್ಲಾ ನಾನು ಏನನ್ನೂ ಓದುತ್ತಿಲ್ಲವಲ್ಲ ಎಂಬ ಅಳುಕು ಕಾಡುತ್ತಿತ್ತು. ಕೆಲವೊಂದು ಸಲ ಅವರ ಓದಿನ ಹುಚ್ಚನ್ನು ನಾನು ನನ್ನ ಉಪಯೋಗಕ್ಕೆ ಬಳಸಿ ಕೊಂಡಿದ್ದುಂಟು. ನಾನು ಓದಬೇಕೆಂದು ತರಿಸಿಕೊಂಡ ಕೆಲವು ಪುಸ್ತಕಗಳನ್ನು ಓದದೆ ನೇರವಾಗಿ ದಾದಾನಿಗೆ ಕೊಟ್ಟು ಆ ಪುಸ್ತಕದ ಸಾರಾಂಶವನ್ನು ತಿಳಿದುಕೊಂಡು ಬಿಡುತ್ತಿದ್ದೆ. ಆ ಪುಸ್ತಕಗಳ ಸಾರಾಂಶವನ್ನು ಎಷ್ಟು ಚೆನ್ನಾಗಿ ಹೇಳುತ್ತಿದ್ದರೆಂದರೆ, ನಾನು ಅವರಿಂದ ತಿಳಿದುಕೊಂಡ ವಿಚಾರಗಳನ್ನು ನಾನೇ ಓದಿ ಅರ್ಥೈಸಿಕೊಂಡಂತೆ ಬೇರೆಯವರಿಗೆ ಹೇಳಲು ಸಾಧ್ಯವಾಗುತ್ತಿತ್ತು !

ನಾನು ನನ್ನ ಉನ್ನತ ಶಿಕ್ಷಣದಲ್ಲಿ ಬರೆಯುತ್ತಿದ್ದ ಪ್ರಬಂಧಗಳನ್ನು ಬಹಳ ಆಸಕ್ತಿಯಿಂದ ದಾದಾ ಓದಿ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಿದ್ದರು. ಪ್ರತಿ ಸಲವೂ ನನಗೆ ಸೈದ್ಧಾಂತಿಕ ಗೊಂದಲಗಳು ಉಂಟಾದಾಗ ದಾದಾನ ಜೊತೆಗಿನ ಮಾತುಗಳು ಆ ಗೊಂದಲಗಳನ್ನು ಬಗೆಹರಿಸಿ ಬಿಡುತ್ತಿದ್ದವು. ಅವರಿಂದ ಕಲಿತಿರುವುದು ಬಹಳಷ್ಟಿದೆ. ಆದರೆ ನನ್ನ ತಾತಾ ಮತ್ತು ಅಜ್ಜಿ ತೀರಿ ಹೋಗುವ ಮೂಲಕ ನನಗೆ ಕಲಿಸಿದ ಬಹು ದೊಡ್ಡ ಪಾಠವೆಂದರೆ ಪ್ರಪಂಚದಲ್ಲಿ ಯಾವುದೂ ಶಾಶ್ವತವಲ್ಲ ಎಂಬ ಸತ್ಯದ ಅರಿವನ್ನು. ಈ ಸತ್ಯವು ನನ್ನ ಜೀವನದ ದೃಷ್ಟಿಕೋನವನ್ನೇ ಬದಲಿಸಿದೆ. ಇಲ್ಲಿಯವರೆಗಿನ ಅವರೊಡನೆಯ ಒಡನಾಟ ಮತ್ತು ಕಲಿಕೆ ಸದಾಕಾಲ ನನ್ನನ್ನು ಮುನ್ನಡಿಸಿ ನನ್ನ ಸತ್ಯದ ಅನ್ವೇಷಣೆಗೆ ದಾರಿದೀಪವಾಗುತ್ತದೆ ಎಂದು ನಂಬಿದ್ದೇನೆ.

ನಾವು ತಾತಾನ ಮುದ್ದಿನ ಮೊಮ್ಮಕ್ಕಳು

– ಗೌರಿ ಕೌಲಗಿ ಮತ್ತು ಸಮೀಪ ಕೌಲಗಿ

ನನಗೆ ಮತ್ತು ನನ್ನ ತಮ್ಮನಿಗೆ ತಾತಾ ಮತ್ತು ಅಜ್ಜಿ ಎಂದರೆ ತುಂಬ ಇಷ್ಟ. ಅವರಿಗೂ ನಮ್ಮನ್ನು ಕಂಡರೆ ತುಂಬಾ ಮುದ್ದು. ತಾತಾ ಯಾವಾಗಲೂ ನನಗೆ ಏನಾದರೂ ಹೇಳಿಕೊಡುತ್ತಿದ್ದರು. ನಾನು ಬರೆಯುವುದನ್ನು, ಹಾಡುವುದನ್ನು, ಕಲಿಯಲು ಒತ್ತಾಯ ಮಾಡುತ್ತಿದ್ದರು. ನಮ್ಮಿಂದ ಹಾಡು ಹೇಳಿಸಿ ಖುಷಿಪಡುತ್ತಿದ್ದರು. ನಮಗೋಸ್ಕರ ಸಂಗೀತಕ್ಕೆ ಗುರುಗಳನ್ನು ನೇಮಿಸಿದ್ದರು. ಆಗಾಗ ನನ್ನ ಚಟುವಟಿಕೆಗಳ ಬಗ್ಗೆ ವಿಚಾರಿಸುತ್ತಿದ್ದರು. ನಮಗಾಗಿ ಆಟದ ಸಾಮಾನುಗಳನ್ನು ಮತ್ತು ಉಡುಗೊರೆಗಳನ್ನು ಕೊಡುತ್ತಿದ್ದರು. ನಾನು ಮಕ್ಕಳ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಆಸೆ ಪಡುತ್ತಿದ್ದರು.

ಒಂದು ದಿನ ರೇಡಿಯೋದಲ್ಲಿ ಬರುವ ಮಕ್ಕಳ ಕಾರ್ಯಕ್ರಮದಲ್ಲಿ ನನ್ನಿಂದ ಹಾಡು ಹೇಳಿಸಲು ಪ್ರಯತ್ನಿಸಿದರು. ನಾವು ಎಷ್ಟೇ ಪ್ರಯತ್ನ ಪಟ್ಟರೂ ದೂರವಾಣಿಯ ಸಂಪರ್ಕ ಮಾತ್ರ ಸಿಗಲೇ ಇಲ್ಲ. ತಾತಾನಿಗೆ ತುಂಬಾ ಬೇಸರವಾಯಿತು. ನಾನು, ಸಮೀಪ ಮತ್ತು ಕರುಣಾಗೃಹದ ಮಕ್ಕಳು ಮೈದಾನದಲ್ಲಿ ಆಟವಾಡುವುದನ್ನು ತಾತಾ ಬಾಗಿಲಲ್ಲಿ ಕುಳಿತು ನೋಡಿ ನಗುತ್ತಿದ್ದರು. ತಾತಾ ಕಾರ್ಯಕ್ರಮಕ್ಕೆ ಹೋದಾಗ ಸಿಗುತ್ತಿದ್ದ ಹಣ್ಣು ಮತ್ತು ತಿನಿಸುಗಳನ್ನು ತಪ್ಪದೇ ನಮಗಾಗಿ ತಂದುಕೊಡುತ್ತಿದ್ದರು. ನನ್ನಿಂದ ಹಾಡು ಹೇಳಿಸಿ ಖುಷಿಪಡುತ್ತಿದ್ದರು. ನಾನು ಈಗ ಹೊಸ ಹಾಡುಗಳನ್ನು ಕಲಿತಿದ್ದೇನೆ. ಆದರೆ ಅವುಗಳನ್ನು ಕೇಳಲು ಈಗ ತಾತಾ ಮತ್ತು ಅಜ್ಜಿ ಇಲ್ಲ.

ನನಗೆ ಹಳುಗುಳಿ ಮಣೆ ಆಟವಾಡುವಾಗ ಅಜ್ಜಿಯ ನೆನಪಾಗುತ್ತದೆ. ಅಜ್ಜಿ ನನಗೆ ಈ ಆಟವನ್ನು ಕಲಿಸಿದರು. ಒಮ್ಮೊಮ್ಮೆ ನನ್ನನ್ನು ಗೆಲ್ಲಿಸಲು ಅವರೇ ಬೇಕೆಂದು ಸೋಲುತ್ತಿದ್ದರು. ಅದೇ ರೀತಿ ನನ್ನ ತಮ್ಮ ಸಮೀಪನ ಜೊತೆಯಲ್ಲಿ ಚದುರಂಗ ಆಟ ಆಡಿ ನಗುತ್ತಿದ್ದರು. ದೇವರ ಸ್ತೋತ್ರಗಳನ್ನು ಹೇಳುವಾಗ ತಾತಾನ ನೆನಪಾಗುತ್ತದೆ. ಅವರು ನನ್ನ ಉಚ್ಚಾರಣೆಯನ್ನು ತಿದ್ದುತ್ತಿದ್ದರು. ಚೆನ್ನಾಗಿ ಹೇಳುತ್ತಿ ಎಂದು ಹೊಗಳುತ್ತಿದ್ದರು. ತಾತಾ ನನ್ನ ಮತ್ತು ಸಮೀಪನ ಒಂದು ಭಾವಚಿತ್ರವನ್ನು ತಮ್ಮ ಮೇಜಿನ ಮೇಲೆ ಇಟ್ಟುಕೊಂಡಿದ್ದರು. ಅದು ಈಗಲೂ ಅಲ್ಲೇ ಇದೆ. ಮೇಲುಕೋಟೆಗೆ ಹೋಗುವುದನ್ನು ನೆನಪಿಸಿಕೊಂಡರೆ ತಾತಾ ಮತ್ತು ಅಜ್ಜಿಯ ನೆನಪು ಬರುತ್ತಿತ್ತು. ಈಗ ಮೇಲುಕೋಟೆಗೆ ಹೋಗುವುದು ಎಂದರೇ ತಾತಾ ಮತ್ತು ಅಜ್ಜಿ ಇಲ್ಲ ಎಂದು ನೆನಪಾಗುತ್ತದೆ.

ನಾನು ಕಂಡ ಅಪರೂಪದ ವ್ಯಕ್ತಿ ದಾದಾ

– ಎಸ್. ಅಂತೋಣಿ ಸ್ವಾಮಿ

ನಾನು ೧೯೮೪ ರಲ್ಲಿ ಕೊಳ್ಳೇಗಾಲದ ಒಂದು ಪುಟ್ಟ ಗ್ರಾಮದಿಂದ ಮೇಲುಕೋಟೆಗೆ ಬಂದೆ ನಾನು ಕಾರಣಾಂತರಗಳಿಂದ ೪ ವರ್ಷ ವಿದ್ಯಾಭ್ಯಾಸ ಮುಂದುವರಿಸಲು ಆಗಿರಲಿಲ್ಲ. ಆನಂತರ ಹಿರಿಯ ಪ್ರಾಥಮಿಕ ಶಾಲೆಗೆ ಸೇರಿ ವಿದ್ಯಾಭ್ಯಾಸ ಮುಂದುವರಿಸಿದೆ. ನಾನು ಹಳ್ಳಿಯಲ್ಲಿ ಇದ್ದ ಪರಿಸ್ಥಿತಿಯೇ ಬೇರೆ ಕರುಣಾಗೃಹ ವಾತಾವರಣವೇ ಬೇರೆ. ನನಗೆ ಹೊಂದಿಕೊಳ್ಳಲು ತುಂಬಾ ಕಷ್ಟವಾಗುತ್ತಿತ್ತು. ಬೆಳಿಗ್ಗೆ ೫.೩೦ ಕ್ಕೆ ದಾದಾ ಬಂದು ಎಲ್ಲಾ ಮಕ್ಕಳನ್ನು ಎಬ್ಬಿಸಿ ಹೋಗುವರು. ಅವರು ೬ ಗಂಟೆಗೆ ಬರುವ ಹೊತ್ತಿಗೆ ಕಸ ಗುಡಿಸಿ ಪ್ರಾರ್ಥನೆಗೆ ಕೂರಬೇಕಿತ್ತು. ನನಗೆ ಅಷ್ಟು ಬೇಗ ಎದ್ದೇಳಲು ಆಗುತ್ತಿರಲಿಲ್ಲ. ಕೆಲವು ಹುಡುಗರು ನನಗೆ ಹೊಡೆಯುತ್ತಿದ್ದರು. ದಾದಾ ಬರುತ್ತಾರೆ ಹೇಳುತ್ತೇವೆ. ಅವರು ಸರಿಯಾಗಿ ಹೊಡೆಯುತ್ತಾರೆ ಎದ್ದೇಳು ಎಂದು ಹೆದರಿಸುತ್ತಿದ್ದರು. ಸುಮಾರು ದಿನಗಳು ಕರುಣಾಗೃಹದಲ್ಲಿ ಹೊಂದಿಕೊಳ್ಳಲು ಕಷ್ಟವಾಗುತ್ತಿತ್ತು. ಕಾಲಕ್ರಮೇಣ ಹೊಂದಿಕೊಂಡು ಮಕ್ಕಳೊಂದಿಗೆ ದಿನನಿತ್ಯದ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿದ್ದೆ. ಕರುಣಾಗೃಹದ ಮುಂಭಾಗ ಒಂದು ಸುಂದರವಾದ ಗುಲಾಬಿ ತೋಟ ಇತ್ತು. ಅಲ್ಲಿ ಒಂದು ತರದ ಹುಲ್ಲು ಹಾಕಿದರು. ಒಂದು ದಿನ ನನ್ನನ್ನು ಕರೆದು ತೋಟದಲ್ಲಿ ಸರಿಯಾಗಿ ಹುಲ್ಲು ಕತ್ತರಿಸು ಎಂದು ಹೇಳಿ ಹೋದರು. ಅವರು ವಾಪಸ್ಸು ಬರುವ ಹೊತ್ತಿಗೆ ಹುಲ್ಲು ಕತ್ತರಿಸಲಿಲ್ಲ . ಬದಲಿಗೆ ಹುಲ್ಲುಗಳನ್ನು ಬೇರು ಸಮೇತ ಕಿತ್ತು ಹಾಕಿದ್ದೆ. ಅಷ್ಟೊತ್ತಿಗೆ ಬಂದರು ನೋಡಿ ಯಾವ ಕೋಪ ಬಂದಿತ್ತೋ ಗೊತ್ತಿಲ್ಲಾ ನನಗೆ ಸರಿಯಾಗಿ ಬೈದರು. ಆದಾದ ಮೇಲೆ ದಿನನಿತ್ಯ ಅಡುಗೆ ಮನೆ, ನೂಲುಗಾರಿಕೆ, ತೋಟದ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿ ಅವರ ಮೆಚ್ಚುಗೆ ಪಡೆಯುವಲ್ಲಿ ಯಶಸ್ವಿಯಾದೆ. ನಂತರ ಪ್ರೌಢಶಾಲೆ ಮುಗಿಸಿದೆ. ಆ ಮೇಲೆ ಊರಿಗೆ ಹೋಗುತ್ತೇನೆ ಎಂದು ಅಮ್ಮ ದಾದಾ ಅವರಿಗೆ ಹೇಳಿದೆ. ಅಗ ದಾದಾ ನನ್ನನ್ನು ಹೋಗಲು ಬಿಡಲಿಲ್ಲ. ನಮ್ಮ ಕಾಲೇಜಿನಲ್ಲಿ ಕ್ಲರ್ಕ್ ಹುದ್ದೆ ಖಾಲಿ ಇದೆ ಆ ಹುದ್ದೆಗೆ ನೀನು ಸರಿಯಾಗುತ್ತೀಯ ಎಂದು ಹೇಳಿ ನನ್ನನ್ನು ಇಲ್ಲಿಯೇ ಉಳಿಯುವಂತೆ ಮಾಡಿದರು. ಅಂದಿನಿಂದ ಟ್ರಸ್ಟ್ ಮತ್ತು ಕಾಲೇಜಿನಲ್ಲಿ ಕೆಲಸ ಮಾಡಲು ಪ್ರಾರಂಭಿಸಿದೆ. ಕಾಲೇಜಿಗಿಂತ ದಾದಾ ಅವರೊಂದಿಗೆ ಆಫೀಸಿನಲ್ಲಿ ಕೆಲಸ

ಮಾಡಲು ಪ್ರಾರಂಭಿಸಿದೆ. ನನಗೆ ವಾಕ್ಯರಚನೆ, ಮಹಾಪ್ರಾಣ, ಒತ್ತಕ್ಷರಗಳು ಬರೆಯಲು ಸರಿಯಾಗಿ ಬರುತ್ತಿರಲಿಲ್ಲ. ಪದೇ ಪದೇ ಬೈಗಳ ತಿಂದು ಕಾಲಕ್ರಮೇಣ ಸುಂದರವಾದ ಬರವಣಿಗೆ ಇತ್ಯಾದಿ ಆಫೀಸ್ ಕೆಲಸಗಳನ್ನು ಮಾಡಿ ಮೆಚ್ಚುಗೆ ಪಡೆದೆ, ಆದರೆ ಇನ್ನು ಸುಧಾರಣೆ ಮಾಡಿಕೊಳ್ಳಬೇಕು ಎಂದು ಹೇಳಿದರು. ಟ್ರಸ್ಟಿಗೆ ಭೇಟಿ ನೀಡಿದ ದಾನಿಗಳಿಗೆ ಮತ್ತು ಅಭಿಮಾನಿಗಳಿಗೆ ನನ್ನ ಸುಂದರವಾದ ಅಕ್ಷರ ತೋರಿಸಿ ನನ್ನನ್ನು ಪರಿಚಯ ಮಾಡುತ್ತಿದ್ದರು. ಕೊನೆಗೆ ನಾನೇ ಕಲಿಸಿದ್ದು ಎಂದು ಹೇಳುತ್ತಿದ್ದರು. ಕ್ರಮೇಣ ನನ್ನ ಸುಂದರವಾದ ಬರವಣಿಗೆ ಮತ್ತು ಕಛೇರಿಯ ನಿರ್ವಹಣೆ ಅವರ ಶಿಸ್ತಿನ ಪ್ರತಿಫಲ. ಈಗ ಜನಪದ ಸೇವಾ ಟ್ರಸ್ಟಿನಲ್ಲಿ ಮಹತ್ವದ ಜವಾಬ್ದಾರಿ ಕೊಟ್ಟು ನನ್ನ ಜೀವನವನ್ನು ಬದಲಾಯಿಸಿದ್ದಾರೆ. ಆದಾದ ನಂತರ ನನ್ನ ಮತ್ತು ಅವರ ಸಂಬಂಧ ಗಟ್ಟಿಯಾಯಿತು. ದಿನನಿತ್ಯ ರಾಜಕೀಯ, ಊರಿನ ಇತರೆ ವಿಷಯಗಳನ್ನು ಅವರೊಂದಿಗೆ ಚರ್ಚಿಸಬೇಕಿತ್ತು. ಅವರೊಂದಿಗೆ ದಿನವೂ ಹೋಗಿ ಹರಟೆ ಹೊಡೆಯುವುದು ನನ್ನ ದಿನಚರಿ ಆಗಿತ್ತು. ಯೋಗಕ್ಷೇಮ ಮತ್ತು ನನ್ನ ಕುಟುಂಬ ವಿಷಯ ಕೇಳುತ್ತಿದ್ದರು. ರಾಜಕೀಯ ಇತರೆ ವಿಷಯ ಮಾತನಾಡುವಾಗ ಅವರ ಅಭಿಪ್ರಾಯಗಳನ್ನು ಕೊಡುತ್ತಿದ್ದರು. ನಾನು ಹಲವು ಸಲ ಅವರ ಅಭಿಪ್ರಾಯಗಳಿಗೆ ವಿರೋಧ ಮಾಡುತ್ತಿದ್ದೆ. ಅವರು ಗಾಂಧೀ ಅವರ ವಿಷಯಗಳನ್ನು ತಿಳಿಸುತ್ತಿದ್ದರು. ಆದರೆ ಅವುಗಳನ್ನು ಅಳವಡಿಸಲು ನನಗೆ ಸಾಧ್ಯವಾಗಲಿಲ್ಲ. ಆದರೆ ಅವರ ಶಿಸ್ತು ಮತ್ತು ಸರಳ ಜೀವನ ದಿನನಿತ್ಯದ ಚಟುವಟಿಕೆ ಸ್ವಲ್ಪವಾದರೂ ನನ್ನ ಜೀವನದಲ್ಲಿ ಅಳವಡಿಸಿಕೊಂಡೆ.

ಅವರೊಂದಿಗೆ ೩೩ ವರ್ಷ ಒಡನಾಟ ನಿರಂತರವಾಗಿ ಬೆಳೆದು ನನ್ನಂತಹ ಒಬ್ಬ ಅಂಗವಿಕಲ ವ್ಯಕ್ತಿಯು ಸಮಾಜದಲ್ಲಿ ಗುರುತಿಸಲ್ಪಟ್ಟ ವ್ಯಕ್ತಿಯಾಗಿ ಮಾಡಿದ ಅಪರೂಪದ ದಾದಾ ಕಣ್ಮರೆಯಾದರು. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.

ನನ್ನ ಐಕಾನ್

– ಪಾರ್ಥಸಾರಥಿ, ಮೇಲುಕೋಟೆ

ಹುಟ್ಟಿನಲ್ಲಿ ದುಃಖ ಉಂಟು
ಎಂದು ಇವನು ಸಾಯ್ವನೋ?
ಸಾವಿನಲ್ಲೂ ಸುಖವು ಉಂಟು
ಮತ್ತೆ ಇವನು ಹುಟ್ಟನು!

ಒಂದು ಜ್ಯೋತಿ ಪರಂಜ್ಯೋತಿಯನ್ನು ಸೇರಿತು, ದಾದಾರವರ ಆತ್ಮ ನಿರ್ಗಮನದ ಸುದ್ದಿ ಸಣ್ಣ ಆಘಾತವನ್ನು ನೀಡಿತು. ಆದರೆ ಅವರ ಪಾರ್ಥಿವ ದೇಹವನ್ನು ದರ್ಶಿಸಿದಾಗ ಸೂತಕದ ಛಾಯೆ ನನ್ನನ್ನೇನೂ ಆವರಿಸಲಿಲ್ಲ, ಏಕೆಂದರೆ ಅವರು ಸೃಜಿಸಿ ಹೋಗಿರುವ ಪ್ರತಿಕಾರ್ಯ–ನಡೆ–ನುಡಿ–ಸಾಧನೆಗಳು ಅವರು ನನ್ನೊಂದಿಗೆ– ನಮ್ಮೊಂದಿಗೇ ಇರುವಂತೆ ಭಾಸವಾಗುತ್ತದೆ. ಹೋದ ವರ್ಷ ಅಮ್ಮನ ನಿರ್ಗಮನ, ಈ ವರ್ಷ ದಾದಾ,

೧೯೮೪ ರಲ್ಲಿ ಶ್ರೀಕೃಷ್ಣ ಕನ್ನಡ ಶಿಶುವಿಹಾರಕ್ಕೆ ಸೇರಿದಾಗ ಮೊದಲ ಪಾಠವೇನೆಂದರೆ ಆಟಗಳನ್ನು ಹೇಗೆ ಆಡಬೇಕೆಂಬುದನ್ನು ತೋರಿಸಿಕೊಟ್ಟಿದ್ದು ಗಿರಿಜಮ್ಮನವರು. ಶ್ವೇತ ವಸ್ತ್ರಧಾರೀ ದಾದಾರವರು ಆಗಾಗ ನಮಗೆ ಕಾಣಸಿಗುತ್ತಿದ್ದರು. ೧೯೯೦ ರಲ್ಲಿ ನಾಲ್ಕನೇ ತರಗತಿ ಮುಗಿಸಿ ಐದನೇ ತರಗತಿಗೆ ಸರಕಾರಿ ಶಾಲೆಗೆ ಸೇರಿದಾಗಲೇ ನನಗೆ ದಾದಾರವರ ಜೀವನ ಸರಳತೆ ಅರಿವಿಗೆ ಬಂದಿದ್ದು. ದೂರವಾದರಲ್ಲವೇ ಬೆಳಕಿನ ಬೆಲೆ ಅರಿವಾಗುವುದು? ಮಾತು ಕಡಿಮೆ ಕಾರ್ಯಗಳೇ ಜಾಸ್ತಿ, ಪ್ರಿಂಟಿಂಗ್ ಪ್ರೆಸ್‌ನ ಕೆಲಸಗಳು, ಕರಡು ತಿದ್ದುವಿಕೆ, ಸಂಜೆ ವಿಶೇಷ ಚೇತನ ಮಕ್ಕಳೊಂದಿಗೆ ಗಂಜಿ ಸೇವನೆ, ತಿಂಗಳಿಗೊಮ್ಮೆ ಎಲ್ಲ ಮಕ್ಕಳಿಗೂ ಚಿತ್ರಕಲಾ ಸ್ಪರ್ಧೆ, ಹಳೆಯ ಜೋಡೆತ್ತಿನ ಗಾಡಿಯಲ್ಲಿ ಹಾಗೂ ಜೀಪಿನಲ್ಲಿ ಎಲ್ಲ ಮಕ್ಕಳನ್ನೂ ಕರೆದುಕೊಂಡು ಇಂದಿನ ಹೊಸ ಜೀವನ ಹಾದಿಗೆ ಪ್ರಯಾಣ ಪ್ರವಾಸ ಇಂದಿಗೂ ನೆನ್ನೆ ನಡೆದಂತೆಯೇ ಇದೆ. ಶಿಸ್ತೆಂದರೆ ದಾದಾ. ದಾದಾ ಎಂದರೆ ಶಿಸ್ತು, ಅವರ ಗದರುವಿಕೆಯಲ್ಲೂ ಆರ್ದ್ರತೆ ಇರುತ್ತಿತ್ತು ಎಂದು ಈಗ ಅರ್ಥವಾಗುತ್ತಿದೆ. ವಿಶೇಷ ಚೇತನ ಮಕ್ಕಳೆಲ್ಲರಿಗೂ ಲೈಫ್‌ಬಾಯ್ ಸೋಪ್‌ನಿಂದ ಸ್ನಾನ ನಿತ್ಯ ಮಾಡಲೇಬೇಕೆಂಬ ನಿಯಮ ತಪ್ಪಿಸದಂತೆ ಕಣ್ಗಾವಲಾಗಿರುತ್ತಿದ್ದರು.

'ಬಾರೋಲೋ' ಎಂಬ ಸಂಭೋದನೆ ಅವರ ಬಾಯಿಯಿಂದ ಇದುವರೆಗೂ ನಾನು ಕೇಳದ ಒಂದು ಪದವಾಗಿದೆ. ಎಲ್ಲ ಮಕ್ಕಳನ್ನೂ ಬಾರಪ್ಪಾ, ಏನಪ್ಪಾ, ಬಾರಮ್ಮಾ ಏನಮ್ಮಾ ಎಂದು ಕರೆದು ನಾಗರೀಕತೆಯ ಮೊದಲ ಪಾಠ ಏನೆಂದು ತೋರಿಸಿ ಕೊಟ್ಟವರು. ನನ್ನ ಅರ್ರೈಯರ್ ತಾತಾರವರ ಕಿರಿಯ ಸ್ನೇಹಿತರೆಂದು ದಾದಾರವರನ್ನು ಕಂಡು ನನಗೆ ಹೆಮ್ಮೆ ನಾನು ಅವರ ಶಾಲೆಯಲ್ಲಿ ಓದುತ್ತಿದ್ದೇನೆಂದು ಪುಳಕ, ವಿದ್ಯಾಭ್ಯಾಸದೊಡನೆಯೇ ದೈಹಿಕ ವ್ಯಾಯಾಮಗಳಿಗೂ ಸಮಾನ ಪುರಸ್ಕಾರ ನೀಡಿದ ಶಾಲೆಯೆಂದರೆ ಜನಪದ ವಿದ್ಯಾಲಯ. ಒಂದೇ ಕೈನ ರೆಡ್ಡಿ ಎಂಬುವವರು ಈಜು ಹೊಡೆಯುವುದಕ್ಕೆ ದಾದಾರವರೇ ಪ್ರೇರಣೆ ಎಂದೆನಿಸುತ್ತದೆ. ಮಂಡ್ಯ ಜಿಲ್ಲೆಯ ಸಬ್ಬನಹಳ್ಳಿ ಪಿ. ಶಿವಕುಮಾರನು ಭಾರತದ ಕೀರ್ತಿಯನ್ನು ಪ್ಯಾರಾಲಿಂಪಿಕ್ ಕ್ರೀಡೆಯಲ್ಲಿ ಎತ್ತಿಹಿಡಿದು ಪದಕಗಳನ್ನು ಪಡೆದಿರುವುದಕ್ಕೆ ಕಾರಣ, ದಾದಾರವರ ಬದ್ಧತೆಯ ಶ್ರಮದ ಪ್ರತಿಫಲಕ್ಕೆ ಒಂದು ಉದಾಹರಣೆ, ಕೈ ಚರಕಗಳಿಂದ ಹತ್ತಿ ನೂಲು ತೆಗೆದು ಬಟ್ಟೆ ನೇಯುವ ಒಂದು ಯಂತ್ರಾಗಾರವನ್ನೂ ದಾದಾ ಆರಂಭಿಸಿ ಉಸ್ತುವಾರಿ ಹೊತ್ತು ಯಶಸ್ವಿಯಾಗಿ ನಡೆಸಿಕೊಂಡು ಬಂದರು. ಸಮಾಜದಲ್ಲಿ ಜಾತಿ ಕಾರಣದಿಂದ ಬಡತನದ ದೃಷ್ಟಿಯಿಂದ ತುಳಿತಕ್ಕೊಳಗಾದ ಅನೇಕರನ್ನು ಸಂತೈಸಿ, ಸ್ವಂತ ಸಾಮರ್ಥ್ಯಗಳಿಂದ, ಸರಳವಾಗಿ ಆದರೆ "ಧೃಢ"ವಾಗಿ ನಾವು ಬಾಳಬಹುದು ಎಂದು ತೋರಿಸಿಕೊಟ್ಟವರಲ್ಲಿ ದಾದಾರವರು ನನ್ನ ದೃಷ್ಟಿಯಲ್ಲಿ ಅಗ್ರಗಣ್ಯರೇ. ವಿಧವೆಯರನ್ನು, ಅನಾಥರನ್ನು, ಅಂಗಹೀನರನ್ನು ಸೋಂಬೇರಿಗಳಾಗಿರಲು ಬಿಡದೇ ಯಾವುದಾದಾರೂ ಸೃಜನಾತ್ಮಕ. ಬಾಳಲು ಉಪಯುಕ್ತವಾದ ಚಟುವಟಿಕೆಗಳಲ್ಲಿ ತೊಡಗಿಸಿ ಅದರಿಂದಲೇ ಜೀವನಾಧಾರ ಮಾಡಿಕೊಳ್ಳಲು ಅವಕಾಶಗಳನ್ನು ಕಲ್ಪಿಸಿಕೊಡುತ್ತಿದ್ದರು.

ದಿನನಿತ್ಯದ ಸೊಪ್ಪು-ತರಕಾರಿಗಳನ್ನು ಬೆಳೆಯುವುದನ್ನು ಸಮರ್ಥ ಸಾವಯುವ ಕೃಷಿಯನ್ನು ಸರ್ವರಿಗೂ ತಿಳಿಸಿಕೊಟ್ಟರು. ಇಂದಿಗೂ ಅದು ನಡೆದು ಬರುತ್ತಿದೆ. ದಿನನಿತ್ಯದ ಶಾಲೆಯ ಆರಂಭದ ಮೊದಲ ಹಂತದ ಶಿಸ್ತಿನ ಪಾಠದ ಪ್ರಾರ್ಥನೆಯಲ್ಲಿ ಅವರ ಹಾಜರಾತಿ ತಪ್ಪದೇ ಇರುತ್ತಿತ್ತು. ಶ್ವೇತವಸ್ತ್ರಗಳಾದ ಖಾದೀ ಜುಬ್ಬಾ, ಖಾದಿ ಬುಶ್ ಕೋಟು, ಖಾದಿ ಕಚ್ಚೆಪಂಚೆ, ಯಾವಾಗಲಾದರೊಮ್ಮೆ ಅತಿಥಿಗಳು ಬಂದಾಗ ಖಾದಿ ಟೋಪಿ ಧಾರಣೆ, ಇದೇ ದಾದಾ ಎಂದು ದೂರದಿಂದಲೇ ಗುರ್ತಿಸಬಹುದಾಗಿದ್ದ ಸರಳ ಉಡುಪು, ಅವಶ್ಯಕತೆಗಳನ್ನು ತಗ್ಗಿಸಿಕೊಂಡು ಸುಖ-ಸಂತೋಷ-ನೆಮ್ಮದಿ-ಆರೋಗ್ಯ-ಉತ್ಸಾಹ-ಉಲ್ಲಾಸಗಳಿಂದ ಬದುಕಬಹುದು ಎಂದು ದಾದಾರವರನ್ನು

ನೋಡಿಯೇ ನಾನು ಕಲಿತೆ, ಸ್ವಚ್ಛತೆಗೆ ಮೊದಲ ಆದ್ಯತೆ ನೀಡುತ್ತಿದ್ದ ದಾದಾರವರು ಸ್ವತಃ ಸಂಜೆ ಕಸಬರಿಕೆಯನ್ನು ಹಿಡಿದೇ ಬಿಡುತ್ತಿದ್ದರು!

ಶಾಲೆಯ ಕೊಠಡಿ ಆವರಣಗಳನ್ನು ಶುದ್ಧಿ ಮಾಡಲು, ಅನ್ಯರಿಗೆ ಹೇಳಿ ಮಾಡಿಸುವ ಮೊದಲು ತಾನೇ ಮಾಡಿ ತೋರಿಸಿ ಮೇಲ್ಪಂಕ್ತಿಯಾದವರಲ್ಲಿ ದಾದಾ ಒಬ್ಬರು.

ಸಣ್ಣ ಪುಟ್ಟವುಗಳನ್ನು ಸರಿಯಾಗಿ ಮಾಡು-ಹಿರಿದಾದುದು ತಾನೇ ತಾನಾಗಿ ನಡೆಯುತ್ತದೆ ಎಂಬ ವಿಶ್ವೇಶ್ವರಯ್ಯನವರ ಸಿದ್ಧಾಂತದ ಪ್ರತಿಪಾದಕರಲ್ಲಿ ದಾದಾ ಒಬ್ಬರು.

ಒಟ್ಟಾರೆ ನನ್ನ ದೃಷ್ಟಿಯಲ್ಲಿ ಸರಳ ಜೀವನದ ನನ್ನ "ಐಕಾನ್" ದಾದಾ. ಈ ಸರಳ ಬರಹದ ಹಿಂದಿನ ಶ್ರಮದ ಫಲ ಗಿರಿಜಮ್ಮನವರಿಗೆ ಅರ್ಪಿತ.

ನನ್ನ ಮಾವ

– ಗೀತಾ ಕೌಲಗಿ

ನಾನು ಚಿಕ್ಕಂದಿನಿಂದಲೂ ಜನಪದ ಸೇವಾ ಟ್ರಸ್ಟಿನೊಂದಿಗೆ ಸಂಬಂಧವನ್ನು ಬೆಳೆಸಿಕೊಂಡು ಬಂದವಳು. ನಾನು ಬಾಲ್ಯದಲ್ಲೇ ಅಮ್ಮ-ದಾದಾರವರ ಕಾರ್ಯವೈಖರಿಯನ್ನು ಕಂಡು ಗಂಭೀರವಾಗಿ ಯೋಚಿಸುತ್ತಿದ್ದೆ. ದಾದಾ ಬಿಳಿ ವಸ್ತ್ರ ತೊಟ್ಟು ಪಟ-ಪಟನೆ ಓಡಾಡುತ್ತಿದ್ದುದು, ಬೆಳಿಗ್ಗೆ ಸಾಯಂಕಾಲ ಮಕ್ಕಳನ್ನು ಸಾಲಾಗಿ ಕೂರಿಸಿ ಸರ್ವಧರ್ಮೀಯ ಪ್ರಾರ್ಥನೆ ಮಾಡುತ್ತಿದ್ದುದ್ದು, ಊಟ ಬಡಿಸುತ್ತಿದ್ದುದು, ತೋಟದ ಕೆಲಸ ಮಾಡುತ್ತಿದ್ದುದ್ದು, ಓದಲು ಕೂರಿಸುತ್ತಿದ್ದುದ್ದು ಹೀಗೆ ಹತ್ತು ಹಲವಾರು ನೆನಪುಗಳು ಹಾದು ಹೋಗುತ್ತವೆ. ಇಷ್ಟೆಲ್ಲಾ ಆದರೂ ನನಗೆ ದಾದಾನ ಮುಂದೆ ನಿಂತು ಮಾತಾಡುವ ಧೈರ್ಯವಿರಲಿಲ್ಲ. ನಾನು ಶಿಶುವಿಹಾರಕ್ಕೆ ಬರುವಾಗಲೂ ಅಮ್ಮನ ಜೊತೆ ಇದ್ದ ಸಲಿಗೆ-ಒಡನಾಟ ದಾದಾನ ಬಳಿ ಇರಲಿಲ್ಲ. ಮುಂದೆ ಹೈಸ್ಕೂಲ್ ತನಕ ಇವರ ಸಂಪರ್ಕ ಬರಲಿಲ್ಲ. ಮುಂದೆ ನನ್ನ ಅಕ್ಕ ಟ್ರಸ್ಟಿನ ಪಕ್ಕದ ಮನೆಗೆ ಬಾಡಿಗೆಗೆ ಬಂದಾಗ ಮತ್ತೆ ಇವರೆಲ್ಲರ ಸಂಪರ್ಕ ಬೆಳೆಯಿತು. ಟ್ರಸ್ಟಿನ ಹುಡುಗರೊಡನೆ ಬೆರೆಯುವ ಅವಕಾಶವೂ ದೊರೆಯಿತು. ಮಕ್ಕಳು ಪ್ರಾರ್ಥನೆ ಮಾಡುವಾಗ ನಾನೂ ಕೂರುತ್ತಿದ್ದೆ. ತೋಟದ ಕೆಲಸದಲ್ಲಿ ಭಾಗಿಯಾಗುತ್ತಿದ್ದೆ. ಒಟ್ಟಾಗಿ ಕೂತು ಊಟ ಮಾಡುತ್ತಿದ್ದೆ. ಮುಂದೆ ಇವರೇ ತೆರೆದ ಜನಪದ ಸೇವಾ ಟ್ರಸ್ಟ್ ಕಾಲೇಜಿನಲ್ಲಿ ವ್ಯಾಸಾಂಗಕ್ಕೆ ಸೇರಿದೆ. ಆಗ ದಾದಾ ಕಾಲೇಜಿನಲ್ಲಿ ಚರಕದಲ್ಲಿ ನೂಲು ತೆಗೆಯುವುದನ್ನು ಹುಡುಗರಿಗೆ ಪರಿಚಯಿಸಿದರು. ಕಾಲೇಜಿನಲ್ಲಿ ನಾನು ಕೂಡ ನೂಲು ತೆಗೆಯುವುದನ್ನು ಕಲಿತೆ. ಗಾಂಧಿ ಜಯಂತಿಯ ಸಮಯದಲ್ಲಿ ವಿಚಾರವಂತರಿಂದ ಭಾಷಣ ಮಾಡಿಸುತ್ತಿದ್ದರು, ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆ ಏರ್ಪಡಿಸುತ್ತಿದ್ದರು. ನಾನು ಭಾಗವಹಿಸುತ್ತಿದ್ದೆ. ಹೀಗೆ ಬೆಳೆದ ನಾನು ನನ್ನ ಪದವಿಯ ನಂತರ ದಾದಾರವರ ಬಳಿ ಸ್ವಲ್ಪ ಸಮಯ ಕೆಲಸ ಮಾಡಿದೆ. ೧೯೮೯ ರಲ್ಲಿ ಮೇಲುಕೋಟೆಯಲ್ಲಿ ಅವರು ಏರ್ಪಡಿಸಿದ್ದ ಸರ್ವೋದಯ ಸಮ್ಮೇಳನಕ್ಕೆ ಹಗಲು-ರಾತ್ರಿ ಎನ್ನದೆ ನೂರಾರು ಪತ್ರಗಳನ್ನೂ ಹಲವಾರು ಲೇಖನಗಳನ್ನು ದಾದಾ ನನ್ನಿಂದ ಬರೆಸಿದರು. ಬರೆಯುವಾಗ ತಪ್ಪುಗಳನ್ನು ತಿದ್ದುತ್ತಿದ್ದರು. ವಿಚಾರಗಳು ಅರ್ಥವಾಗುವಂತೆ ಮನದಟ್ಟು ಮಾಡುತ್ತಿದ್ದರು.

ಅವರೊಂದಿಗೆ ಕೆಲಸ ಮಾಡುವಾಗ ಬೆಳಿಗ್ಗೆ ಸರಿಯಾಗಿ ಎಂಟು ಗಂಟೆಗೆ ಕೆಲಸಕ್ಕೆ ಬರಬೇಕಿತ್ತು. ಬಂದ ತಕ್ಷಣ ಮೇಜು-ಕುರ್ಚಿಗಳನ್ನು ಜೋಡಿಸಿ, ಸ್ವಚ್ಛ ಮಾಡಿ ಕೆಲಸ ಪ್ರಾರಂಭಿಸಬೇಕಿತ್ತು. ಒಮ್ಮೆ ನಾನು ಹಾಗೇ ಟೈಪ್ ಮಾಡಲು

ಪ್ರಾರಂಭಿಸಿದೆ. ಬಂದವರೇ ಚೆನ್ನಾಗಿ ಬೈಯ್ದರು. ಚಿಕ್ಕವಳಾದ ನನಗೆ ಬಹಳ ಬೇಸರವಾಗಿ ಅಲ್ಲಿಂದ ಹೊರಟೆ ಬಿಟ್ಟೆ. ಅಮ್ಮ ನನ್ನನ್ನು ಸಮಾಧಾನ ಮಾಡಿ ಕೆಲಸಕ್ಕೆ ಬರುವಂತೆ ಮಾಡಿದರು. ಹೀಗೆ ದಾದಾನ ಶಿಸ್ತು ಮತ್ತು ಕಠೋರವಾದ ನಡವಳಿಕೆ ಭಯವನ್ನು ಕೋಪವನ್ನು ತರುತ್ತಿತ್ತು. ಮುಂದೆ ಇವರೊಡನೆ ಕೆಲಸ ಮಾಡುತ್ತಾ ಇವರ ವಿಚಾರಗಳಲ್ಲಿ ಆಸಕ್ತಿ ಬೆಳೆಯಿತು. ಮುಂದೆ ಇವರುಗಳ ಇಚ್ಛೆಯಂತೆ ಇವರ ಮನೆಯ ಸೊಸೆಯಾಗಿ ಬಂದೆ. ನಾನು ಮದುವೆಯಾಗಿ ಬಂದಾಗ ಹೊಸ ಜೀವನ ದಾರಿಯಲ್ಲಿ ವಾಸ ಮಾಡುತ್ತಿದ್ದೆವು. ಅಲ್ಲಿ ದೀಪವಿರಲಿಲ್ಲ, ಸಗಣಿ ನೆಲ, ರಾತ್ರಿಯಾದರೆ ಎಲ್ಲೆಲ್ಲೂ ಕತ್ತಲೂ. ಆದರೆ ಅವುಗಳು ಎಂದೂ ಬೇಸರ ತರಲಿಲ್ಲ. ಆದರೆ ದಾದಾನ ಶಿಸ್ತಿಗೆ ಹೆದರಿದ್ದೆ. ಅವರು ಮೇಲುಕೋಟೆಯಿಂದ ಬೆಳಗ್ಗೆ ೭ ಗಂಟೆಗೆ ಅಲ್ಲಿಗೆ ಬರುತ್ತಿದ್ದರು. ಅವರು ಬರುವ ವೇಳೆಗೆ ಅಂಗಳವೆಲ್ಲಾ ಸ್ವಚ್ಛವಿರಬೇಕಿತ್ತು. ಸಗಣಿ ಕೂಡ ಬಿದ್ದಿರುವಂತಿರಲಿಲ್ಲ. ಅಡಿಗೆ ಮಾಡಲು ಕಸ-ಕಡ್ಡಿ ಎಲೆಗಳನ್ನು ಮೊದಲು ಬಳಸಬೇಕಿತ್ತು. ಸೌದೆ ಹೆಚ್ಚಾಗಿ ಬಳಸುವಂತಿರಲಿಲ್ಲ ಹೀಗೆ ಹತ್ತು ಹಲವಾರು, ಆಗ ಅದು ವಿಚಿತ್ರವಾಗಿ ಕಂಡರೂ ಈಗ ಎಲ್ಲವೂ ಸತ್ಯವೆಂದು ತೋರುತ್ತದೆ. ಅದಕ್ಕೊಂದು ಕಾರಣವಿತ್ತೆಂದು ತೋರುತ್ತದೆ. ಅವರ ಜೀವಿತಾವಧಿಯ ಕೊನೆಯವರೆಗೂ ಸಂಸ್ಥೆಗಾಗಿ ದುಡಿಯುತ್ತಲೇ ಬಂದವರು. ಅವರಿಗೆ ವಯಸ್ಸಾದರೂ ಅವರ ವಿಚಾರಗಳಿಗೆ ಮುಪ್ಪಾಗಿರಲಿಲ್ಲ. ಕೊನೆಯವರೆಗೂ ಓದಲು, ಬರೆಯುವುದರಲ್ಲೇ ತೊಡಗಿದ್ದರು. ಕೊನೆಯವರೆಗೂ ಅವರು ನಂಬಿದ ವಿಚಾರದ ಹಾದಿಯಲ್ಲೇ ನಡೆದರು. 'ಜನಪದ ವಿಚಾರ' ಎಂಬ ಮಾಸಿಕ ಪತ್ರಿಕೆಯನ್ನು ತಮ್ಮ ಕೊನೆಯ ಉಸಿರಿರುವ ತನಕವೂ ಹೊರ ತರುವುದನ್ನು ಬಿಡಲಿಲ್ಲ. ಅದಕ್ಕಾಗಿ ಹಗಲು-ರಾತ್ರಿ ಲೇಖನಗಳನ್ನು ಬರೆಯುತ್ತಿದ್ದರು. ಲೇಖನಗಳನ್ನು ಸಂಗ್ರಹಿಸುತ್ತಿದ್ದರು. ಎಂದೂ ಉತ್ಸಾಹವನ್ನು ಕಳೆದುಕೊಳ್ಳಲಿಲ್ಲ.

ಅವರು ಜನಪದ ಸೇವಾ ಟ್ರಸ್ಟ ಮೂಲಕ ಹತ್ತು ಹಲವಾರು ಸಂಸ್ಥೆಗಳನ್ನು ಕಟ್ಟಿ ಬೆಳೆಸಲು ಪ್ರಯತ್ನಿಸಿದರು. ಅದರಲ್ಲಿ ಶ್ರೀಕೃಷ್ಣ ಶಿಶುವಿಹಾರ, ಜನಪದ ವಿದ್ಯಾಲಯ, ಜನಪದ ಸೇವಾ ಟ್ರಸ್ಟ್, ಪದವಿ ಪೂರ್ವ ಕಾಲೇಜು ಹೀಗೆ. ನಾನೂ ಕೂಡ ಶ್ರೀಕೃಷ್ಣ ಶಿಶುವಿಹಾರದಲ್ಲಿ ವಿದ್ಯಾರ್ಥಿನಿಯಾಗಿದ್ದೆ. ಜನಪದ ವಿದ್ಯಾಲಯದಲ್ಲಿ ಉಪಾಧ್ಯಾಯಿನಿಯಾಗಿ ಕೆಲಸ ಮಾಡಿದೆ, ಕಾಲೇಜಿನಲ್ಲಿ ವ್ಯಾಸಾಂಗ ಮಾಡಿದೆ, ಜನಪದ ವಿದ್ಯಾಲಯವನ್ನು ಅಚ್ಚುಕಟ್ಟಾಗಿ ಕಟ್ಟಿದರು, ಶಾಲೆ ಬಹಳ ಚೆನ್ನಾಗಿ ನಡೆಯುತ್ತಿತ್ತು. ಮುಂದೆ ಸರ್ಕಾರ ಸಹಾಯ ಮುಕ್ತವಾಗಿ ಬೆಳೆಸಲು ನೋಡಿದರು ಹಾಗೂ ಇಂಗ್ಲೀಷ್ ವ್ಯಾಮೋಹದಿಂದ ಮಕ್ಕಳ ತಂದೆ-ತಾಯಿಗಳ ಮನಸ್ಸನ್ನು ಪರಿವರ್ತಿಸಲೂ ಪ್ರಯತ್ನಿಸಿದರು. ಖಾಸಗಿಯಾಗಿ ಮಕ್ಕಳನ್ನು ಪರೀಕ್ಷೆಗೆ ಕುಳ್ಳರಿಸುವ ಪ್ರಯತ್ನವನ್ನು ಮಾಡುವಾಗಲೇ ಶಾಲೆಯನ್ನು

ಮುಚ್ಚುವ ಪ್ರಸಂಗ ಬಂದೊದಗಿತ್ತು. ಇದು ಯಾವಾಗಲೂ ಅವರನ್ನು ಕಾಡತೊಡಗಿತ್ತು. ಹೀಗೆಯೇ ಕೆಲವು ಆದರ್ಶಗಳನ್ನು ನಂಬಿ ಕಾಲೇಜನ್ನು ಪ್ರಾರಂಭಿಸಿದರು. ಆದರೆ ಯಾವುದೇ ಆದರ್ಶಗಳನ್ನು ಪರಿಪಾಲಿಸಲು ಆಗದ ಕಾರಣ ಕಾಲೇಜನ್ನು ಬೇರೆ ಸಂಸ್ಥೆಗೆ ವಹಿಸಿಕೊಟ್ಟರು. ಹೀಗೆ ಅವರ ಜೀವಾತಾವಧಿಯಲ್ಲೇ ಏಳು–ಬೀಳನ್ನು ಕಂಡರೂ ಎಂದು ಕುಗ್ಗಲಿಲ್ಲ. ಎಷ್ಟೇ ಎಡರು–ತೊಡರುಗಳು ಬಂದರೂ ಎದೆಗುಂದದೇ ಸಂಸ್ಥೆಗಾಗಿ ದುಡಿದರು.

ಹೊಸ ಜೀವನ ದಾರಿಯ ಸುತ್ತ–ಮುತ್ತಲ ರೈತರಿಗೆ ತೆಂಗಿನ ಸಸಿಗಳನ್ನು ಕೊಟ್ಟಿದ್ದರಿಂದ ಅವುಗಳು ಈಗ ಫಲ ಕೊಡುತ್ತಿವೆ ಎಂದು ಈಗಲೂ ಸುತ್ತ ಮುತ್ತಲ ಜನ ಅವರನ್ನು ನೆನೆಯುತ್ತಾರೆ. ರೈತರಿಗಾಗಿ ಹೊಸ ಜೀವನ ದಾರಿಯಲ್ಲಿ ಸಸಿ ಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರಂತೆ, ಅವರಿಗಾಗಿ ಒಂದು ಗೊಬ್ಬರದ ಅಂಗಡಿ ತೆರಿದಿದ್ದರಂತೆ. ಹೀಗೆ ಎಲ್ಲಾ ಕ್ಷೇತ್ರದಲ್ಲೂ ಕೆಲಸ ಮಾಡಿದವರು.

ಈಗ ೮–೧೦ ವರ್ಷಗಳಿಂದ ಆಗಾಗ ಅವರ ಆರೋಗ್ಯದಲ್ಲಿ ಏರು–ಪೇರಾಗುತ್ತಿತ್ತು. ಕೊನೆಗೆ ಪಾಶ್ವವಾಯುವಿಗೂ ತುತ್ತಾದರು. ಆಗ ಅವರ ಕೆಲಸಗಳಿಗೆ ಹೆಗಲಿಗೆ–ಹೆಗಲು ಕೊಟ್ಟು ಸಂಸ್ಥೆಯನ್ನು ಮುನ್ನಡಿಸಿದವರು ನನ್ನ ಪತಿ ಸಂತೋಷ್ ಹಾಗೂ ಮೈದುನ ಸುಘೋಷ್. ಇಂದಿಗೂ ಈ ಸಂಸ್ಥೆಯ ಚಟುವಟಿಕೆಗಳು ಜೀವಂತವಾಗಿರಲು ದಾದಾನೊಂದಿಗೆ ಅವರ ಮಕ್ಕಳ ಪರಿಶ್ರಮವೂ ಕೂಡ ಕಾರಣವಾಗಿದೆ. ತಮ್ಮ ಇಳಿ ವಯಸ್ಸಿನಲ್ಲೂ ಮಕ್ಕಳೊಡನೆ ಕೂತು ಪ್ರಾರ್ಥನೆ ಮಾಡುವುದು, ಕಥೆ ಹೇಳುವುದನ್ನು ಬಿಡಲಿಲ್ಲ. ಯಾರಾದರು ಹುಡುಗರು ಇಂಗ್ಲೀಷ್ ಕಲಿಯಲು ಬಂದರೆ ಅವರಿಗೆ ಮೊದಲು ಕನ್ನಡ ಕಲಿಸಿ, ತಾಳ್ಮೆಯಿಂದ ಇಂಗ್ಲೀಷ್ ಕಲಿಸುತ್ತಿದ್ದರು.

ಅವರಿಗೆ ರೇಡಿಯೋ ಕಾರ್ಯಕ್ರಮವೆಂದರೆ ಪಂಚಪ್ರಾಣ, ಯಾವಾಗಲೂ ರೇಡಿಯೋ ಕೇಳುವ ಹವ್ಯಾಸವಿತ್ತು. ಅದರಲ್ಲಿ ಬರುವ ವಾರ್ತೆಗಳು, ಹಾಡುಗಳು, ನಾಟಕ ಹೀಗೆ ಹಲವಾರು ಕಾರ್ಯಕ್ರಮಗಳನ್ನು ಕೇಳುತ್ತಿದ್ದರು. ಇತ್ತೀಚೆಗೆ ಪ್ರಧಾನಮಂತ್ರಿ ಮೋದಿಯವರ 'ಮನ್ ಕೀ ಬಾತ್' ಕಾರ್ಯಕ್ರಮ ತಪ್ಪದೆ ಕೇಳುತ್ತಿದ್ದರು. ಕೇಳಿ ಒಮ್ಮೊಮ್ಮೆ ಪ್ರಶಂಸಿಸುತ್ತಿದ್ದರು. ಒಮ್ಮೊಮ್ಮೆ ನಮ್ಮೊಡನೆ ಚರ್ಚೆ ನಡೆಸುತ್ತಿದ್ದರು. ಆದರೆ ಇಂದು ಆ ರೇಡಿಯೋ ಅನಾಥವಾಗಿ ಬಿದ್ದಿದೆ, ಅದನ್ನು ಕಂಡೊಡನೆ ನಮಗೆಲ್ಲ ಅವರ ನೆನಪಾಗಿ ದುಃಖವಾಗುತ್ತದೆ.

ನಾನು ಸಂಪ್ರದಾಯ ಕುಟುಂಬದಿಂದ ಬಂದಿದ್ದರಿಂದ ಸಹಜವಾಗಿ ಹಬ್ಬ–ಹರಿದಿನ, ಶ್ರಾದ್ಧ ಹೀಗೆ ಎಲ್ಲದರಲ್ಲೂ ನಂಬಿಕೆ ಇಟ್ಟವಳು. ನಾನು ಮದುವೆಯಾಗಿ ಬಂದ ಮೇಲೆ ಗಣಪತಿಹಬ್ಬ, ದೀಪಾವಳಿ ಹಬ್ಬ, ತುಳಸಿಹಬ್ಬ, ಸಂಕ್ರಾಂತಿ ಹೀಗೆ ಮುಖ್ಯವಾದ ಹಬ್ಬಗಳನ್ನು ಸಂಸ್ಥೆಯಲ್ಲಿ ಎಲ್ಲಾ ಮಕ್ಕಳೊಡನೆ ಆಚರಿಸುತ್ತಿದ್ದೆವು. ಅಮ್ಮ ನಮ್ಮನ್ನೆಲ್ಲಾ ಅಗಲಿದಾಗ ಅವರ ಅಂತ್ಯಸಂಸ್ಕಾರ

ಹೇಗೆ ಮಾಡಬೇಕೆಂಬ ಜಿಜ್ಞಾಸೆ ಉಂಟಾಯಿತು. ನಾನು ಶಾಸ್ತ್ರೋಕ್ತವಾಗಿ ಆಗಬೇಕು ಎಂದು ಹಠ ಹಿಡಿದೆ. ದಾದಾ ಬಿಟ್ಟರೆ ಯಾರೂ ನನಗೆ ಒಪ್ಪಿಗೆ ನೀಡಲಿಲ್ಲ. ಎಲ್ಲರೂ ವಿರೋಧಿಸಿದರು. ಮುಂದೆ ಶ್ರಾದ್ಧ ಮಾಡುವಾಗಲೂ ವಿರೋಧ. ೪-೫ ದಿವಸದ ನಂತರ ದಾದಾನನ್ನು ಭೇಟಿ ಮಾಡಲು ನಮ್ಮ ಕುಟುಂದ ಹಿತೈಷಿಗಳಾದ ಶ್ರೀಯುತ ಅನವಟ್ಟಿ ಹಾಗೂ ಸರಸ್ವತಿ ಕುಟುಂಬದವರು ಬಂದಿದ್ದರು. ಅವರೊಡನೆ ಮಾತನಾಡಿದ ದಾದಾ ಮನೆಯವರನ್ನು ಕುರಿತು ಹೀಗೆ ಹೇಳಿದರು. ಗೀತಾ, ಈ ಮನೆಯ ಹಿರಿಯ ಸೊಸೆ, ಅವಳು ಹೇಳಿದಂತಾಗಲಿ ಎಂದರು.

ಮುಂದೆ ದಾದಾ ಅನಾರೋಗ್ಯದಿಂದ ಆಸ್ಪತ್ರೆ ಸೇರಿದಾಗ ಆಸ್ಪತ್ರೆಯ ನಿಗಾ ಘಟಕದಲ್ಲೂ ಗೀತಾ, ಗೀತಾಕ್ಕ ಎಂದು ಕಿರಿಚುತ್ತಿದ್ದರು. ಅವರ ಪ್ರಾಣಪಕ್ಷಿ ಹಾರಿ ಹೋದ ಮೇಲೆ ನನಗನಿಸಿದ್ದು ಹೀಗೆ ನನ್ನನ್ನು ಇದುವರೆಗೂ ಗೀತಾ ಎನ್ನುತ್ತಿದ್ದ ದಾದಾ ಈಗ ನನಗೆ ಅಕ್ಕನ ಸ್ಥಾನ ಕೊಟ್ಟಿದ್ದು ಏಕೆ? ತನ್ನ ಅಂತ್ಯಕಿಯೆಯನ್ನು ಮತ್ತು ಇತರ ಕರ್ಮಾದಿಗಳನ್ನು ಶ್ರದ್ಧೆಯಿಂದ ನೆರವೇರಿಸು ಎಂದು ಹೇಳಲಿರಬಹುದು ಎಂದು ಅಂದುಕೊಂಡೆ. ಮತ್ತೆ ಮನೆಯಲ್ಲಿ ಅದೇ ಚರ್ಚೆ, ಅದೇ ಜಿಜ್ಞಾಸೆ. ಕೊನೆಗೂ ನನ್ನ ಇಚ್ಛೆಯಂತೆ ಕಾರ್ಯವೆಲ್ಲವೂ ಸರಾಗವಾಗಿ ನೆರವೇರಿತು ಎಂದು ಭಾವಿಸುತ್ತೇನೆ. ಇದು ಎಲ್ಲರ ಮನಸ್ಸಲ್ಲಿ ಜಿಜ್ಞಾಸೆ ಹುಟ್ಟಿಸಿರಬೇಕು. ಆದರೆ ಅವರ ಸೊಸೆಯಾಗಿ ನಾನು ಕುಟುಂಬದ ಜವಾಬ್ದಾರಿ ನೆರವೇರಿಸಿದ ವಿಶ್ವಾಸ ಮತ್ತು ಕೃತಜ್ಞತೆಯ ಭಾವನೆ ಮೂಡಿದೆ.

ಅವರ ಮಾರ್ಗದರ್ಶನದಲ್ಲಿ ನನ್ನ ಮಕ್ಕಳು ಬೆಳೆದು ನಿಂತಿದ್ದಾರೆ. ಅವರವರ ಇಚ್ಛೆಯಂತೆ ವ್ಯಾಸಾಂಗ ಮಾಡುತ್ತಿದ್ದಾರೆ. ತಾತಾ-ಅಜ್ಜಿಯ ಒಡನಾಟ, ವಿಚಾರಗಳು ಅವರನ್ನು ಎತ್ತರಕ್ಕೆ ಕೊಂಡೊಯ್ದಿದೆ. ಇನ್ನು ಎತ್ತರಕ್ಕೆ ಕೊಂಡೊಯ್ಯಲೆಂದು ಪ್ರಾರ್ಥಿಸುತ್ತೇನೆ. ಅವರಿಲ್ಲದ ಮನೆ ಬಣಗುಟ್ಟುತ್ತಿದೆ. ಬೆಳಿಗ್ಗೆ ಎದ್ದ ತಕ್ಷಣ ಪೇಪರ್ ಹಿಡಿದು ಓದುತ್ತಾ, ಕಾಫಿ ಕೇಳುವವರಿಲ್ಲ. ೯ ಗಂಟೆಗೆ ತಿಂಡಿ ಕೇಳುವವರಿಲ್ಲ, ಸಂಜೆ ೬.೩೦ ಕ್ಕೆ ಊಟಕ್ಕೆ ಕೂರುವವರಿಲ್ಲ. ಹೀಗೆ ಶಿಸ್ತಿನ ಸಿಪಾಯಿಂತಿದ್ದ ನನ್ನ ಮಾವ ಇನ್ನಿಲ್ಲ ಎಂದಾಗ ಬೇಸರವಾಗುತ್ತದೆ. ಹೀಗೆ ಒಂದೇ ವರ್ಷದಲ್ಲೇ ಅಮ್ಮ-ದಾದಾನನ್ನ ಕಳೆದುಕೊಂಡು ಜನಪದ ಸೇವಾ ಟ್ರಸ್ಟ್ ಶೂನ್ಯವಾಗಿದೆ.

ದಾರಿ ತೋರಿದ ದಾದಾ

– ಜಿ.ಎನ್ ರಘು

'ದಾದಾ' ನೂರಾರು ಯುವಕರಲ್ಲಿ ಅಡಗಿದ್ದ ಅದಮ್ಯ ಚೇತನವನ್ನು ಬಡಿದೆಬ್ಬಿಸಿ, ಅವರಲ್ಲಿದ್ದ ಹೆಬ್ಬಯಕೆಯ ಮಹಾತ್ವಾಕಾಂಕ್ಷೆಗೆ ಗುರಿಯನ್ನು ತೋರಿದ ಗುರು,

ದಾದಾ ಅವರಿಗೆ ನಾನು ಸುಮಾರು ಎಂಟು ತಿಂಗಳ ಹಿಂದೆಯಷ್ಟೇ ವೇಣು ಮಾಧವ ಮತ್ತು ದೀಪಕ್ ಅವರು ಬರೆದಿರುವ 'ದಿ ವೆಬ್ ಆಫ್ ಫ್ರೀಡಂ' ನಲ್ಲಿ ದಾದಾರ ಉಲ್ಲೇಖವಿದ್ದ ಬಗ್ಗೆ ತಿಳಿಸಿದ್ದೆ. ಅಚ್ಚರಿಯ ಸಂಗತಿ ಎಂದರೆ ದಾದಾರವರಿಗೆ ಅವರ ಹೆಸರು ಆ ಪುಸ್ತಕದಲ್ಲಿ ಉಲ್ಲೇಖ ಆಗಿರುವುದೇ ತಿಳಿದಿರಲಿಲ್ಲ. ೧೯೯೬ರಲ್ಲಿ ದೀಪಕ್ ಅವರು ಮೇಲುಕೋಟೆಗೆ ಬಂದಾಗ. ಜೆ. ಸಿ. ಕುಮಾರಪ್ಪರವರ ಬಗ್ಗೆ ದಾದಾ ಹೇಳಿದ ವಿಚಾರವು ಅವರಿಗೆ ಸ್ಫೂರ್ತಿ ನೀಡಿತ್ತು. ತದನಂತರ ದೀಪಕ್ ಅವರು ಜೆ.ಸಿ. ಕುಮಾರಪ್ಪನವರ ಬಗ್ಗೆ ಹೆಚ್ಚು ಅಧ್ಯಯನ ನಡೆಸಿ 'ದಿ ವೆಬ್ ಆಫ್ ಫ್ರೀಡಂ' ಪುಸ್ತಕವನ್ನು ಪ್ರಕಟಿಸಿದರು. ಆ ಪುಸ್ತಕವನ್ನು ತಂದು ತೋರಲು ದಾದಾ ನನಗೆ ಹೇಳಿದ್ದರು, ಮುಂದಿನ ಬಾರಿ ತೋರಿದರಾಯಿತು ಎಂದು, ಜೊತೆಗೆ ನನ್ನ ಮರುಗುಳಿ ಸ್ವಭಾವದಿಂದ ಆ ಹೇಳಿಕೆಯನ್ನು ಪೂರೈಸಲೇ ಇಲ್ಲ.

ಮುಂದಾವುದೇ ದಿನವು ಆ ಹೇಳಿಕೆಯನ್ನು ನನ್ನಿಂದ ನೆರವೇರಿಸಲು ಸಾಧ್ಯವಾಗುವುದೇ ಇಲ್ಲವಲ್ಲಾ ಎಂಬುದು ಅತ್ಯಂತ ದುಃಖದ ವಿಷಯ ಮತ್ತು ನನ್ನನ್ನು ಸದಾ ಕಾಡುವ ಸಂಗತಿಯಾಗಿಯೇ ಉಳಿದುಬಿಟ್ಟಿತು.

ನನ್ನ ಏಳು ವರ್ಷದ ಜನಪದ ಸೇವಾ ಟ್ರಸ್ಟ್ ಒಡನಾಟದಲ್ಲಿ ಕಲಿತದ್ದು ಬಹಳ. ವಿಶೇಷವೆಂದರೆ ದಾದಾರವರಿಗೆ ನಮ್ಮಲ್ಲಿರುವ ಕೌಶಲ್ಯವನ್ನು ಹೊರ ತೆಗೆದು ಅದಕ್ಕೆ ಸೂಕ್ತವಾದ ಸೂತ್ರವನ್ನು ಕಟ್ಟಿ ಸರಿಯಾದ ದಿಕ್ಕಿನಲ್ಲಿ ನಡೆಯುವ ಶಕ್ತಿಯಿತ್ತರು. ನಾವು ಎಷ್ಟೋ ಮಹನೀಯರ ಜೀವನ ಚರಿತ್ರೆಗಳನ್ನು ನೋಡಿ ಅವರ ಜೀವನ ಮಾರ್ಗಗಳನ್ನು ನಮ್ಮ ಜೀವನಕ್ಕೆ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ದಾದಾರವರ ಜೀವನದ ಬಗ್ಗೆ ಹೆಚ್ಚು ತಿಳಿಯದವರಿಗೆ ಅವರ ಸ್ಫೂರ್ತಿದಾಯಕವಾದ ಮಾತುಗಳೇ ಬದುಕಿಗೆ ಹೊಸ ಆಯಾಮಗಳನ್ನು ನೀಡುತ್ತಿದ್ದವು.

ಕತ್ತಲ ದಾರಿಯಲ್ಲಿ ಕುರಿಗಳಂತೆ ನುಗ್ಗುತ್ತಿರುವ ಜನಗಳ ಹಿಂದೆ ನಮ್ಮನ್ನು ನುಗ್ಗಲು ಬಿಡದೆ,

ಜೀವನದ ಸತ್ಯತೆ ಕಡೆಗೂ, ಪರಿಸರಕ್ಕೆ ಹತ್ತಿರವಾಗಿ ಬದುಕುವ ಕಡೆಗೂ ದಾರಿ ದೀಪ ತೋರಿದಾತ ದಾದಾ. ದಾದಾ ಹೇಳಿದ ಎರಡು ಮಾತುಗಳು ನನ್ನ ಮನದಾಳದಲ್ಲಿ ಅಚ್ಚೊತ್ತಿರಿವೆ' ಗಾಂಧೀ ಎಂದರೆ ಬರಿ ಸ್ವತಂತ್ರ ಹೋರಾಟಗಾರನಲ್ಲ! ಖಾದಿ ಬಟ್ಟೆ ಬರಿಯ ಬಟ್ಟೆಯಲ್ಲ!. ಇದರ ಒಳಾರ್ಥ ಬಹಳ ವಿಶಾಲವಾದದ್ದು. ಅದನ್ನು ದಾದಾ ಅದ್ಭುತವಾಗಿ ವಿವರಿಸಿದ್ದರು. ನನ್ನಂತ ಹಲವಾರು ಯುವಕರು ಅವರ ಸುತ್ತಲೂ ಕುಳಿತು ಅವರಿಂದ ಅರಿವು ಪಡೆಯುತ್ತಿದುದು ಸಾಮಾನ್ಯ ದೃಶ್ಯ. ಮುಖ್ಯವಾಗಿ ನಾವು ಪಡೆದ ಅರಿವು ನಮ್ಮಲ್ಲೇ ಉಳಿಯದೆ ನಮ್ಮಿಂದ ಇತರರಿಗೂ ತಲುಪುವಂತೆ ಮಾಡುತ್ತಿದುದೇ ದಾದಾರ ವಿಶೇಷ ಗುಣ.

ದಾದಾ ಎಂದೊಡನೆ ನೆನಪಿಗೆ ಬರುವುದು ಅವರು ಸದಾ ತೊಡುತ್ತಿದ್ದ ಖಾದಿಕೋಟು.

ಹೊಸ ಜೀವನ ದಾರಿಯ ಸಭಾ ಗುಡಿಸಲಿನಲ್ಲಿ ಬೆತ್ತದ ಕುರ್ಚಿಯಲ್ಲಿ ಕೂರುತ್ತಿದ್ದ ಚಿತ್ರಣ ಹಾಗೂ ಅವರು ನಕ್ಕಾಗ ಬೊಚ್ಚಾದ ಬಾಯಿಯಿಂದ ಹೊರ ಕಾಣುತ್ತಿದ್ದ ಉಳಿದ ಬಲಗಡೆಯ ಕೋರೆ ಹಲ್ಲುಗಳು. ಹೇಗೆ ನಾವು ಖಾದಿ ಕೋಟನ್ನು ಬಿಟ್ಟು ದಾದಾರನ್ನು ಕಲ್ಪಿಸಿಕೊಳ್ಳಲಾಗದೋ ಹಾಗೆ ರೇಡಿಯೋ ಜೊತೆಗಿಲ್ಲದ ದಾದಾ ಅವರನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಆದರೆ ಇಂದು ಆ ರೇಡಿಯೋ ತನ್ನ ಆಪ್ತ ಶ್ರೋತೃ ಒಬ್ಬರನ್ನು ಕಳೆದುಕೊಂಡು ಮೂಕವಾಗಿಬಿಟ್ಟಿದೆ.

ಮಾರ್ಗದರ್ಶನ ನೀಡಿದ ದಾದಾ

– ಸೌಮ್ಯ

ದಾದಾ ಅವರಿಗೆ ಸಹಾಯಕಿಯಾಗಿ ಸೇರಿ ಸುಮಾರು ಒಂದು ವರ್ಷ ಕಳೆಯಿತು. ದಾದಾ ಅವರೊಂದಿಗೆ ಮೊದಲ ಬಾರಿ ಮಾತಾನಾಡುವಾಗ ಡಿ.ಟಿ.ಪಿ ಮಾಡುವುದರಲ್ಲಿ ತಪ್ಪಾದರೆ ಹೇಳಿ ತಿದ್ದಿಕೊಳ್ಳುತ್ತೀನಿ ಅಂತ ಹೇಳಿದೆ. ಅದಕ್ಕೆ ಅವರು ಎಲ್ಲರೂ ತಪ್ಪು ಮಾಡುತ್ತಾರೆ, ನಾನೂ ತಪ್ಪು ಮಾಡುತ್ತಿನಿ ಎಂದರು ನನಗೆ ಡಿ.ಟಿ.ಪಿ ಮಾಡುವುದನ್ನು ಕಲಿಸಿ ಸಂಸ್ಥೆಯಲ್ಲಿ ಜವಾಬ್ದಾರಿಯುತವಾದ ಕೆಲಸವನ್ನು ನೀಡಿದರು.

ಅವರೊಂದಿಗೆ ಪ್ರತಿದಿನವು ನನಗೆ ಕಲಿಕೆಯ ದಿನ, ವಿಚಾರಗಳನ್ನು ತಿಳಿದುಕೊಳ್ಳುವ ದಿನವಾಗಿತ್ತು. ಅವರು ಹೇಳಿದ ವಿಷಯಗಳನ್ನು ಡಿ.ಟಿ.ಪಿ ಮಾಡಿ ದಾದಾ ಅವರಿಗೆ ನೋಡಲು ಕೊಟ್ಟಾಗ ಮಹಾಪ್ರಾಣ, ಅಲ್ಪಪ್ರಾಣ, ಒತ್ತಕ್ಷರಗಳು ಹೀಗೆ ಹತ್ತು ಹಲವಾರು ತಪ್ಪಾಗಳಾಗುತ್ತಿದ್ದರೂ ಅದನ್ನು ತಿದ್ದಿ ಇನ್ನು ಮುಂದೆ ಸರಿಮಾಡಿಕೊ ಅಂತ ಹೇಳುತ್ತಿದ್ದರು. ಯಾವಾಗಲೂ ನಾವು ಯಾರನ್ನು ಅವಲಂಬಿಸಬಾರದು, ಅವಲಂಬಿಸಿದರೆ ಅವರ ಸಹಾಯವಿಲ್ಲದೆ ಯಾವ ಕೆಲಸವನ್ನು ಮಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಲೇ ಇದ್ದರು. ಹೀಗೆ ನನಗೆ ಮಾರ್ಗದರ್ಶನ ನೀಡುವ ವ್ಯಕ್ತಿಯಾಗಿದ್ದರು. ನನ್ನ ಮತ್ತು ಅವರ ಸಂಬಂಧ ಗುರು ಶಿಷ್ಯೆ ಸಂಬಂಧವಾಗಿತ್ತು.

ಜನಪದ ವಿಚಾರ ಪತ್ರಿಕೆಯಲ್ಲಿ ಅವರ ಲೇಖನವು ಪ್ರಮುಖ ಪಾತ್ರವಹಿಸುತ್ತಿತ್ತು. ಅವರ ಲೇಖನವೆಂದರೆ ನನಗೆ ಕುತೂಹಲ, ಯಾವ ವಿಷಯದ ಬಗ್ಗೆ ಲೇಖನವನ್ನು ಬರೆಯುತ್ತಾರೋ, ಹೊಸ ವಿಷಯದ ಬಗ್ಗೆ ನಾನು ತಿಳಿದುಕೊಳ್ಳಬಹುದಲ್ಲ, ಅಂತ ಕಾತುರದಿಂದ ಕಾಯುತ್ತಿದ್ದೆ. ಹೀಗೆ ಪ್ರತಿ ತಿಂಗಳು ಹೊಸ ಹೊಸ ವಿಷಯಗಳ, ವಿಚಾರಗಳ ಬಗ್ಗೆ ತಿಳಿದುಕೊಳ್ಳುತ್ತಾ ಜನಪದ ವಿಚಾರ ಮಾಸ ಪತ್ರಿಕೆ ಮುಂದುವರೆಯುತ್ತಿತ್ತು.

ದಾದಾರವರು ಶ್ರೀ ಕೃಷ್ಣ ಕನ್ನಡ ಶಿಶುವಿಹಾರವು ಇನ್ನು ಹೆಚ್ಚು ಪ್ರಗತಿ ಹೊಂದಬೇಕು ಎಂದು ಸ್ವಲ್ಪ ಸಮಯ ಮಕ್ಕಳೊಂದಿಗೆ ರೇಡಿಯೋದಲ್ಲಿ ಬರುತ್ತಿದ್ದ ಸಂಗೀತ, ಕಥೆ, ಆಟ ಹೀಗೆ ಹಲವಾರು ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಇದರಿಂದಾಗಿ ಜನಪದ ವಿಚಾರ ಪತ್ರಿಕೆಗೆ ಹೆಚ್ಚು ಸಮಯ ಕೊಡದೆ ಇದ್ದಾಗ ನನಗೆ ಅಸಮಾಧಾನ ಉಂಟಾಯಿತು. ದಾದಾರವರು ಹೆಚ್ಚಿನ ಸಮಯ

ಶಿಶುವಿಹಾರಕ್ಕೆ ಕೊಡುವುದರಿಂದ ಜನಪದ ವಿಚಾರ ಸರಿಯಾಗಿ ಮಾಡುವುದಕ್ಕೆ ಆಗುತ್ತಿಲ್ಲ ಎಂದು ಅವರಿಗೆ ಹೇಳಿದೆ. ನಂತರ ದಾದಾರವರು ಹೆಚ್ಚಿನ ಸಮಯ ಕೊಡಲು ಪ್ರಾರಂಭಿಸಿದರು. ಅವರು ಸ್ವಲ್ಪ ಸಮಯ ನನ್ನ ಜೊತೆಯಲ್ಲಿ ಇಲ್ಲ ಎಂದಾಗ ಯಾರೋ ನನ್ನಿಂದ ಅವರನ್ನು ದೂರ ಮಾಡುತ್ತಿದ್ದರಲ್ಲಾ. ನನಗೆ ಅವರ ಅಮೂಲ್ಯವಾದ ಸಮಯವನ್ನು ಕೊಡುತ್ತಿಲ್ಲವೆಂದು ಅಸೂಯೆ ಉಂಟಾಯಿತು.

೨೪ ಜೂಲೈ ೨೦೧೭ ಸೋಮವಾರದಂದು ಮೈಸೂರಿನ ಕಾಲೇಜಿನಲ್ಲಿ ಏರ್ಪಡಿಸಿದ್ದ ೮೮ ನೇ ದಂಡಿಯಾತ್ರೆ ನೆನಪು ಕಾರ್ಯಕ್ರಮದಲ್ಲಿ ದಾದಾ, ನಾನು ಮೈಸೂರಿನ ಕಡೆ ಪ್ರಯಾಣ ಬೆಳೆಸಿದೆವು. ದಾದಾರವರನ್ನು ಆ ದಿನ ಹೊಸದಾಗಿ ನೋಡಿದೆ! ಹೊಸ ವ್ಯಕ್ತಿಯ ದರ್ಶನವಾಯಿತು. ನಿಜವಾಗಿಯೂ ಇವರು ನಮ್ಮ ದಾದಾನ ಅನ್ನೊ ಪ್ರಶ್ನೆ ಮನಸ್ಸಲ್ಲಿ ಮೂಡಿತು. ಏಕೆಂದರೆ ಮೇಲುಕೋಟೆಯಿಂದ ಹೊರಟು ವಾಪಸ್ಸ್ ಬರುವವರೆಗೆ ದಾದಾರವರು ವಿರಾಮ ಕೊಡದೇ ಒಂದೇ ಸಮನೆ ಮಾತಾನಾಡುತ್ತ, ಹಲವು ವಿಷಯಗಳ ಬಗ್ಗೆ ಚರ್ಚೆ ಮಾಡುತ್ತ, ಉತ್ಸಾಹದಿಂದ ಬಂದರು. ಆ ಕಾರ್ಯಕ್ರಮದಲ್ಲಿ ಭಾಷಣ ಮಾಡುವಾಗ ದಂಡಿ ಯಾತ್ರೆ ಕಾರ್ಯಕ್ರಮಕ್ಕೆ ಎಲ್ಲರೂ ಎರಡು ಕಾಲಲ್ಲಿ ಬಂದರೇ ನಾನು ಆರು ಕಾಲಲ್ಲಿ ಬಂದಿದಿನಿ ಅಂತ ಹೇಳಿ ತಮ್ಮನ್ನೇ ತಾವು ತಮಾಷೆ ಮಾಡಿಕೊಂಡರು. ಆದರೆ ಅದು ದಾದಾ ಅವರ ಜೊತೆ ನನ್ನ ಕೊನೆಯ ಕಾರ್ಯಕ್ರಮವಾಗಿ ಉಳಿಯಿತು.

ದಾದಾರವರು ಯಾವಾಗಲೂ ಸೌಮ್ಯ ಎಂದು ಕೂಗುತ್ತಿದ್ದ ಧ್ವನಿ ಎಲ್ಲಿ ಮರೆಯಾಯಿತೋ. ನನಗೆ ತಪ್ಪು ಮಾಡಿದಾಗಲೆಲ್ಲಾ ತಿದ್ದಿ ಹೇಳುತ್ತಿದ್ದವರು ಎಲ್ಲಿಗೆ ಹೋದರು? ಅವರು ನೀಡಿದ ಮಾರ್ಗದರ್ಶನದ ರೂಪದಲ್ಲಿ ನಮ್ಮೊಂದಿಗೆ ಇದ್ದಾರೆ ಅನ್ನೋ ನಂಬಿಕೆ ನನ್ನಲ್ಲಿದೆ.

ನಮ್ಮೆಲ್ಲರ ಪ್ರೀತಿಯ ನೆನಪು...

– ವಿಠ್ಠಲ ಗೊಡಚಿ

ನಾನು ಕಂಡ ಹಿರಿಯ, ಉತ್ಸಾಹಿ, ಮನೋವೃತ್ತಿಯ ದಾದಾ. ಯಾವಾಗಲೂ ನಗುಮುಖ, ಮಂದಹಾಸದಿ ಮಾತನಾಡುವ ದಾದಾ. ಅವರಿಗಿದ್ದ ಹುಮ್ಮಸ್ಸು, ತೇಜಸ್ಸು, ಆಸಕ್ತಿ ನಮ್ಮಂಥ ಯುವಕರಲ್ಲೂ ಇರುವುದು ಕಷ್ಟ. ಅವರಿಗೆ ಆಧುನಿಕ ಮಾಹಿತಿ ಮಾಧ್ಯಮಗಳನ್ನು ಬಳಸುವ ನಮಗಿಂತ ಹೆಚ್ಚಿನ ಮಾಹಿತಿಯನ್ನು ಮತ್ತು ಅವುಗಳನ್ನು ಬಳಸದೆ ರೇಡಿಯೋ, ಪತ್ರಿಕೆಯಿಂದ ಎಲ್ಲ ರೀತಿಯ ಮಾಹಿತಿಯನ್ನು ಕಲೆಹಾಕಿ ಅದರಲ್ಲಿರುವ ಕೆಲವು ಒಳ್ಳೆಯ ಸಂದೇಶವನ್ನು ನಮಗೆ ನೀಡುತ್ತಿದ್ದರು.

ನಾನು ಈ ಸಂಸ್ಥೆಗೆ ಸೇರುವುದಕ್ಕಿಂತ ಮುಂಚೆ ವಿದ್ಯಾಭ್ಯಾಸ ಮುಗಿಸಿ ಮೈಸೂರಿನ ಒಂದು ಕಂಪನಿಯಲ್ಲಿ ಡಾಟಾ ಆಪರೇಟರ ಕೆಲಸವನ್ನು ಮಾಡುತ್ತಿದ್ದೆ ತದನಂತರ ಈ ಸಂಸ್ಥೆಯಲ್ಲಿ ಕೆಲಸಮಾಡಲು ಅವಕಾಶ ಮತ್ತು ನನ್ನ ಜೀವನದ ಭವಿಷ್ಯವನ್ನು ರೂಪಿಸಿಕೊಳ್ಳಲು ದಾರಿ ಮಾಡಿಕೊಟ್ಟರು. ನಾನು ಇಲ್ಲಿಗೆ ಬಂದ ಮೊದಲ ದಿನವೇ ದಾದಾರವರನ್ನು ಭೇಟಿಮಾಡಿ ಕಾಲುಮುಟ್ಟಿ ಆಶಿರ್ವಾದ ಪಡೆದುಕೊಂಡು ಅವರ ಜೊತೆಯಲ್ಲಿ ಮಾತನಾಡಿದ ಮೊದಲ ಕ್ಷಣಗಳು, ಅವರು ಮಾಡಿಕೊಟ್ಟ ಸಂಸ್ಥೆಯ ಕಿರು ಪರಿಚಯ, ಮಾತನಾಡುವ ಅರ್ಥಗರ್ಭಿತ ಪದಗಳು, ಸಂಸ್ಥೆಯಲ್ಲಿದ್ದ ಆ ಸುತ್ತಮುತ್ತ ವಾತಾವರಣ ಇವೆಲ್ಲವೂ ನನಗೆ ಖುಷಿಯಾಯಿತು. ನಾನು ಏನು ನನ್ನ ಜೀವನದಲ್ಲಿ ಅಂದುಕೊಂಡಿದ್ದೆ ಅದು ನನಗೆ ಈ ಸಂಸ್ಥೆಯಲ್ಲಿ ಒದಗಿ ಬಂದಹಾಗಾಯಿತು, ಇವರೆಲ್ಲರ ಆಶ್ರಯದಲ್ಲಿ ಕೆಲಸಕಾರ್ಯಗಳನ್ನು ಚೆನ್ನಾಗಿ ಕಲಿಯಬಹುದೆಂದು ನನಗನ್ನಿಸಿತು. ಆ ಸಂದರ್ಭದಲ್ಲೇ ನಾನು ಈ ಸಂಸ್ಥೆಯ ಕಾರ್ಯ ಚಟುವಟಿಕೆಯಲ್ಲಿ ತೊಡಗಿಕೊಳ್ಳಲು ಮತ್ತು ಜನಪದ ಕುಟುಂಬದಲ್ಲಿ ಒಬ್ಬನಾಗಲು ನಿರ್ಧಾರ ಮಾಡಿ ಕೆಲಸಕ್ಕೆ ಸೇರಿಕೊಂಡೆ. ಈಗ ನಾನು ಸಂಸ್ಥೆಯ ದತ್ತು ಕೇಂದ್ರದಲ್ಲಿ ಸಾಮಾಜಿಕ ಕಾರ್ಯಕರ್ತನಾಗಿ ಕೆಲಸವನ್ನು ಮಾಡುತ್ತಿದ್ದು ಅವರ ಮಾರ್ಗದರ್ಶನದ ದಾರಿಯಲ್ಲೆ ನಡೆಯುತ್ತಿದ್ದೇನೆ.

ಪೂಜ್ಯ ಹಿರಿಯರು, ಮಕ್ಕಳು ಅಂದರೆ ನನಗೆ ಪ್ರೀತಿ. ಹಿರಿಯರು ಅವರ ಜೀವನದಲ್ಲಿ ಎಲ್ಲಾ ರೀತಿಯ ಅನುಭವಗಳನ್ನು ಪ್ರಾಯೋಗಿಕವಾಗಿ

ಅನುಭವಿಸಿ, ಜೀವನದಲ್ಲಿ ಉಂಟಾಗುವ ಒಳಿತು-ಕೆಡತುಗಳ ಬಗ್ಗೆ ತಿಳಿದುಕೊಂಡಿರುತ್ತಾರೆ. ಅದರಂತೆ ದಾದಾರವರ ಅನುಭವಿ ಮಾತುಗಳು, ಆಲೋಚನೆಗಳು ನಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಒಳ್ಳೆಯ ಪರಿಣಾಮ ಬೀರುತ್ತಿದ್ದವು. ಇನ್ನು ಮಕ್ಕಳ ಮುಗ್ಧ ಕಲ್ಮಶವಿಲ್ಲದ ಮನಸ್ಸು, ತುಂಟಾಟದ ಜೀವನ, ನಗು-ಅಳು, ಈ ಎರಡು ಬಯಸದೆ ಬಂದ ಭಾಗ್ಯದ ಹಾಗೆ ಈ ಸಂಸ್ಥೆಯಲ್ಲಿ ಕೆಲಸಮಾಡುವ ಅವಕಾಶ ದೊರಕಿತು.

ದಾದಾರವರು ಯಾವುದಾದಾರೂ ಹೊಸ ಚಟುವಟಿಕೆಗಳನ್ನು ಕೈಗೊಳ್ಳುವಂತ ಸಂದರ್ಭದಲ್ಲಿ ಮಂಜಣ್ಣ, ಸೌಮ್ಯ, ಮತ್ತು ನನ್ನನ್ನು ಕರೆದು ಆ ವಿಷಯದ ಬಗ್ಗೆ ಮಾಹಿತಿ ನೀಡಿ, ಅದು ಹೀಗೆ ಅಥವಾ ಹೇಗೆ ಮಾಡಿದರೆ ಚೆನ್ನಾಗಿರುತ್ತದೆಂದು ನಮ್ಮಿಂದ ಕೂಡ ಕೆಲವೊಂದು ಸಲಹೆಗಳನ್ನು ಪಡೆದುಕೊಳ್ಳುತ್ತಿದ್ದರು. ಸಂಸ್ಥೆಯ ಚಟುವಟಿಕೆಗಳಲ್ಲಿ ಒಂದಾದ ಶಿಶುವಿಹಾರದ ಬೆಳವಣಿಗೆಯ ಬಗ್ಗೆ ಶಿಶುವಿಹಾರದ ಮಕ್ಕಳ ಆಟ-ಪಾಠಗಳ, ಕಲೆ-ವಿನ್ಯಾಸಗಳ, ಸಂಗೀತ ಕಲಿಕೆಯ ಬಗ್ಗೆ, ಪೋಷಕರ ಸಭೆ ಮಾಡುವ, ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಇನ್ನು ಮುಂತಾದ ಅಭಿವೃದ್ಧಿ ಚಟುವಟಿಕೆಗಳ ಬಗ್ಗೆ ಹೊಸದಾಗಿ ಪತ್ರಿಕೆ ಪ್ರಾರಂಭಿಸುವ ಬಗ್ಗೆ ಕೂಡ ಚರ್ಚಿಸಿದ್ದರು.

ಪ್ರತಿವರ್ಷದ ಹಾಗೆ ನಾಗಮಂಗಲದಲ್ಲಿ ನಡೆಯುವ ನಾಗರಂಗೋತ್ಸವ ನಡೆದ ಸ್ವಪ್ನ ವಾಸವದತ್ತ ನಾಟಕವನ್ನು ದಾದಾರವರ ಜೊತೆ ವೀಕ್ಷಿಸಿದ್ದು ಒಂದು ರೀತಿಯ ಹೊಸ ಅನುಭವವನ್ನು ತಂದುಕೊಟ್ಟಿತು. ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯಲ್ಲಿ ದಾದಾರವರು ಆರೋಗ್ಯದಲ್ಲಿ ವ್ಯತ್ಯಯ ಉಂಟಾಗಿ ಪರಿಸ್ಥಿತಿಯಲ್ಲಿ ಅವರನ್ನೂ ತೀವ್ರಾ ನಿಗಾ ಘಟಕದಲ್ಲಿದ್ದಾಗ ಒಂದು ರಾತ್ರಿ ಅವರಿಗೆ ಸೇವೆ ಮಾಡುವ ಅವಕಾಶ ದೊರಕಿದ್ದು ನನ್ನ ಭಾಗ್ಯ.

ನಮ್ಮೆಲ್ಲರ ಭವಿಷ್ಯ ಉಜ್ವಲವಾಗಲೆಂದು ಸದಾ ಬಯಸುತ್ತಿದ್ದ ಪ್ರೀತಿಯ ದಾದಾ ಇನ್ನಿಲ್ಲ.

ದಾದಾರೊಂದಿಗೆ ಪ್ರವಾಸ

– ಟಿ.ಎಂ.ಜಯಣ್ಣ

೧೯೮೭ ನೇ ಇಸವಿ ಜೂನ್ ೧ ರಂದು ಮೇಲುಕೋಟೆಯ ಜನಪದ ಸೇವಾ ಟ್ರಸ್ಟಿನ ಕಾರ್ಯಕರ್ತನಾಗಿ ಕೆಲಸವನ್ನು ಪ್ರಾರಂಭಿಸಿದೆ. ಸ್ವಲ್ಪ ದಿನದಲ್ಲಿಯೇ ರಾಚಪ್ಪ ಮತ್ತು ಚಂದ್ರಕಲಾ ಅವರ ಮದುವೆ ನಡೆದಿತ್ತು. ಅಂದಿನಿಂದ ದಾದಾ ಮತ್ತು ನಮ್ಮ ಸಂಬಂಧ ಅನ್ಯೋನ್ಯವಾಗಿ ಬೆಳೆಯಿತು. ನಾನು ಅವರ ಸಹಾಯಕನಾಗಿ ಅನೇಕ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಒಮ್ಮೆ ನಮ್ಮ ಸಂಸ್ಥೆಯಲ್ಲಿ ನಡೆಯುತ್ತಿದ್ದ ಖಾದಿ ಕೇಂದ್ರಕ್ಕೆ ಹತ್ತಿ ತರಬೇಕಾಗಿ ಬಂತು. ದಾದಾ ಮತ್ತು ನಾನು ಜೀಪಿನಲ್ಲಿ ಹಳ್ಳಿ ಮೈಸೂರಿಗೆ ಹೋಗಿ ಅಲ್ಲಿಂದ ಹತ್ತಿ ಬೇಲ್ ತರುವಾಗ ಜೀಪು ಕೆಟ್ಟು ಹೋಯಿತು. ಆಗ ನಾವು ಎರಡು ದಿನ ಅಲ್ಲಿಯೇ ಉಳಿದು ಜೀಪು ರಿಪೇರಿ ಮಾಡಿಸಿಕೊಂಡು ಬರಬೇಕಾಯಿತು. ದಾದಾರವರು ಕೈಗೊಂಡ ಅನೇಕ ಪಾದಯಾತ್ರೆಯಲ್ಲಿಯೂ ನಾನು ಭಾಗವಹಿಸಿರುತ್ತೇನೆ. ದಾದಾರವರ ಸ್ವಭಾವವೆಂದರೆ ಸ್ವಚ್ಛತೆ ಕಡೆಗೆ ಗಮನ ವಹಿಸುತ್ತಿದ್ದರು. ಸ್ಥಳ ಸ್ವಚ್ಛವಾಗಿಲ್ಲದಿದ್ದರೆ ಅವರಿಗೆ ಬಹಳ ಕಿರಿಕಿರಿ ಆಗುತ್ತಿತ್ತು. ಆ ಸಂದರ್ಭದಲ್ಲಿ ನಾನು ಅನೇಕ ಸಾರಿ ಅವರಿಂದ ಬೈಗಳ ಪಡೆದಿದ್ದೇನೆ. ಅನೇಕ ವಿಷಯದಲ್ಲಿ ನನ್ನ ಸ್ವಭಾವ ಅವರ ವಿರುದ್ಧವಾಗಿತ್ತು. ಅವರಿಗೆ ಗಿಡದಿಂದ ಹೂವನ್ನು ಕೀಳುವುದ ಇಷ್ಟವಿರಲಿಲ್ಲ. ನನಗೆ ಹೂವು ಕಿತ್ತು ದೇವರಿಗೆ ಅರ್ಪಿಸುವುದು ಇಷ್ಟ. ಈ ವಿಸಯದಲ್ಲಿ ನನಗೂಅ ಅವರಿಗೂ ಆಗಾಗ ಘರ್ಷಣೆ ಆಗುತ್ತಿತ್ತು. ನನ್ನ ೭೦ ನೇ ವರ್ಷದ ವರ್ಷಾಚರಣೆಯನ್ನು ಅಮ್ಮ ಮತ್ತು ದಾದಾ ಸಂಭ್ರಮದಿಂದ ಆಚರಿಸಿ ಉಡುಗೊರೆ ಕೊಟ್ಟಿದ್ದು ನನಗೆ ಸಂತೋಷ ತಂದಿತ್ತು.

ದಾದಾ, ಅಮ್ಮನೊಂದಿಗೆ ನಾವು ಕೆಲವರು ವಾರಣಾಸಿಯಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಲು ಹೋಗಿದ್ದೆವು. ಅಲ್ಲಿಂದ ಕಾಶಿ ದೇವಸ್ಥಾನ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳ ಜೊತೆಯಲ್ಲಿ ಬುದ್ದ ಗಯ, ಸಂದರ್ಶನ ಮಾಡಿ ಹಿಂದಿರುಗುವಾಗ ಬುದ್ಧಸ್ತೂಪವನ್ನು ನೋಡಿದೆವು.

ನಮ್ಮೊಂದಿಗೆ ಬಂದಿದ್ದ ಕಾಳಪ್ಪ ಕದ್ದು ಮುಚ್ಚಿ ಅಗಾಗ ಬೀಡಿ ಸೇದುತ್ತಿದ್ದನು. ಹಾಗೊಮ್ಮೆ ಅವನು ರೈಲಿನಲ್ಲಿ ಬೇಡಿ ಸೇದುವಾಗ ರೈಲಿನ ಟಿ ಸಿ ಗೆ ಸಿಕ್ಕಿ ಬಿದ್ದನು. ಭಾಷೆ ಬರದಿದ್ದ ಕಾಳಪ್ಪನನ್ನು ಕರೆದು ತಂದು ದಾದಾ ಮುಂದೆ

ನಿಲ್ಲಿಸಿದ ಟಿಸಿ ಅವನಿಗೆ ದಬಾಯಿಸಿ ಹೋದನು. ಪೇಚಿಗೆ ಸಿಕ್ಕ ಕಾಳಪ್ಪನಿಗೆ ನಾವೆಲ್ಲರೂ ಹಾಸ್ಯ ಮಾಡುತ್ತಲೆ ಇದ್ದೆವು. ದಾದಾ ಕೂಡ ಅದರಲ್ಲಿ ಭಾಗವಹಿಸಿದರು. ಮತ್ತೊಮ್ಮೆ ಅಸ್ಸಾಂಮಿನಲ್ಲಿ ನಡೆದ ಸರ್ವೋದಯ ಮೇಳದಲ್ಲಿ ಭಾಗವಹಿಸಲು ದಾದಾ ಮತ್ತು ಅಮ್ಮನವರ ಜೊತೆಯಲ್ಲಿ ನಾನು ಮೂರು ದಿನದ ಸಮ್ಮೇಳನದಲ್ಲಿ ಭಾಗವಹಿಸಿ ಬಂದೆ. ಅವರೊಡನೆ ಪ್ರವಾಸ ಹೋಗುವುದೇ ಒಂದು ಸಂತೋಷದ ಸಂಗತಿಯಾಗಿತ್ತು. ಇನ್ನೊಂದು ಸಲ ಮಧುರೈನಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ದಾದಾ ಅವರು ಪ್ರಮುಖ ಭಾಷಣವನ್ನು ಮಾಡಿದರು. ನಂತರ ಅಲ್ಲಿನ ಪ್ರಸಿದ್ಧ ದೇವಸ್ಥಾನವಾದ ಮೀನಾಕ್ಷಿ ಮಂದಿರ ಮತ್ತು ಅಲ್ಲಿನ ಅರಮನೆ ಮತ್ತು ವಸ್ತುಸಂಗ್ರಹಾಲಯವನ್ನು ನೋಡಲು ದಾದಾ ಅವರೊಂದಿಗೆ ಹೋಗಿದ್ದೆ ಅವರಿಂದಾಗಿದ ದೇಶದ ಅನೇಕ ಸ್ಥಳಗಳನ್ನು ನೋಡುವ ಅವಕಾಶ ನನಗೆ ಒದಗಿ ಬಂತು.

ಆದರ್ಶ ವ್ಯಕ್ತಿ ದಾದಾ

–ಮಂಜುನಾಥ ಎಮ್

ನಾನು ಜನಪದ ಸೇವಾ ಟ್ರಸ್ಟಿಗೆ ಸೇರಿ ಹತ್ತು ವರ್ಷ ಪೂರ್ಣಗೊಳ್ಳುತ್ತದೆ ಎಂದು ಹೇಳಲು ಹೆಮ್ಮೆ ಅನಿಸುತ್ತದೆ. ನನ್ನ ಮೊದಲ ದಿನದ ಕೆಲಸ ದಾದಾ ಅವರು ಹಿಂದಿ ಕನ್ನಡಕ್ಕೆ ಅನುವಾದಿಸುತ್ತಿದ್ದ ಲೇಖನ ಒಂದನ್ನು ಕನ್ನಡದಲ್ಲಿ ಬರೆದುಕೊಳ್ಳುವುದಾಗಿತ್ತು. ನನಗೆ ಚೆನ್ನಾಗಿ ನೆನಪಿದೆ ಅದು ಭಾರತದ ಬಾವುಟಕ್ಕೆ ಪ್ರಾಚೀನ ಇತಿಹಾಸವಿದೆ. ಎಂಬ ಶೀರ್ಷಿಕೆಯ ಲೇಖನವಾಗಿತ್ತು. ನನ್ನ ಬರವಣಿಗೆ ಅಂದವಾಗಿದ್ದರೂ ಒತ್ತಕ್ಷರ ಕಾಗುಣಿತ ತಪ್ಪಾಗಿ ಬರೆಯುತ್ತಿದ್ದೆ. ದಾದಾ ಅದನ್ನೆಲ್ಲ ಸರಿಮಾಡಿಕೊಂಡು ಬರೆಯಬೇಕು ಮತ್ತು ಅಕ್ಷರ ಮುದ್ರಣವಾದ ರೀತಿ ತಲೆ ಕಟ್ಟು ನೇರವಾಗಿ ಇರಬೇಕು ಮತ್ತು ಅಲ್ಪಪ್ರಾಣ, ಮಹಾಪ್ರಾಣ ಸರಿಯಾಗಿ ಉಚ್ಚಾರಣೆ ಮಾಡಿ ಮಾತನಾಡಬೇಕು ಮತ್ತು ಬರೆಯಬೇಕು ಎಂದು ಹೇಳುತ್ತಿದ್ದರು. ನಾನು ಸರಿಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದೆ. ಆದರೂ ತಪ್ಪುಗಳು ಆಗುತ್ತಿದ್ದವು. ಇದರಿಂದ ದಾದಾರವರು ಕೆಲವೊಂದು ಸಲ ಬೇಸರಮಾಡಿಕೊಂಡಿದ್ದರು. ಮತ್ತೆ ಸಮಾಧಾನದಿಂದ ಕೆಲಸ ಮಾಡಲು ಹೇಳುತ್ತಿದ್ದರು. ೨೦೦೯ರಲ್ಲಿ ಕರ್ನಾಟಕ ಸರ್ವೋದಯ ಮಂಡಲ ಅಧ್ಯಕ್ಷರಾದ ಮೇಲೆ ಬರವಣಿಗೆಯ ಕೆಲಸ ಜಾಸ್ತಿಯೇ ಆಯಿತು. ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಕರೆಯುತ್ತಿದ್ದರು.

೨೦೧೦ ಸೆಪ್ಟೆಂಬರ್‌ನಲ್ಲಿ ಶ್ರೀ ಆದಿಚುಂಚನಗಿರಿಯಲ್ಲಿ ಅಖಿಲ ಭಾರತ ಸರ್ವೋದಯ ಕಾರ್ಯಕರ್ತರ ಅರ್ಧವಾರ್ಷಿಕ ಅಧಿವೇಶನವನ್ನು ದಾದಾರವರು ಏರ್ಪಡಿಸಿದ್ದರು. ಈ ಸಮಾವೇಶದಲ್ಲಿ ೩೦೦ ಜನ ಕಾರ್ಯಕರ್ತರು ಭಾಗವಹಿಸುತ್ತಿದ್ದರು ಮತ್ತು ಸರ್ವಸೇವಾ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಸುಗುಣ ಭರಂಟ್ ಅಧ್ಯಕ್ಷತೆ ವಹಿಸಿದ್ದರು. ಈ ಮೂರು ದಿನ ನಾನು ದಾದಾರವರ ಜೊತೆ ಇದ್ದ ಕಾರಣ ಸರ್ವೋದಯ ವಿಚಾರದಲ್ಲಿ ಆಸಕ್ತಿ ಬೆಳೆಯಲು ಪ್ರೇರಣೆ ಉಂಟಾಯಿತು. ಬಂದಿದ್ದ ಕಾರ್ಯಕರ್ತರೆಲ್ಲ ಕಾರ್ಯಕ್ರಮದ ವ್ಯವಸ್ಥೆ ನೋಡಿ ದಾದಾರವರಿಗೆ ಅಭಿನಂದನೆ ಸಲ್ಲಿಸಿದರು.

೨೦೧೨ರಲ್ಲಿ ಮೈಸೂರು ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ಸಹಕಾರದೊಂದಿಗೆ ಶ್ರೀ ನಾರಾಯಣ ದೇಸಾಯಿಯವರಿಂದ ಮೈಸೂರಿನಲ್ಲಿ ೫ ದಿನಗಳ ಕಾಲ "ಗಾಂಧೀ ಕಥಾ" ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಈ

ಸಮಯದಲ್ಲಿ ಕಾರ್ಯಕ್ರಮದ ಕೊನೆ ದಿನ ತೀವ್ರ ರಕ್ತದೊತ್ತಡ ಉಂಟಾಗಿ ಆಸ್ಪತ್ರೆ ಸೇರಬೇಕಾಯಿತು. ಇದರಿಂದ ಅವರಿಗೆ ದೈಹಿಕ ತೊಂದರೆ ಉಂಟಾಯಿತು.

೨೦೧೬ ಮೇ ೧೬ರಂದು ರಂದು ಬೆಂಗಳೂರಿನ ಗಾಂಧೀಸ್ಮಾರಕ ನಿಧಿಯವರು ಅರಸೀಕೆರೆಯ ಕಸ್ತೂರಿ ಬಾ ಗಾಂಧೀ ಆಶ್ರಮದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ ವಿದ್ಯಾರ್ಥಿಗಳಿಗೆ ಒಂದು ದಿನದ ಕಾರ್ಯಗಾರವನ್ನು ಏರ್ಪಡಿಸಿದ್ದರು. ಇದು ಅವರ ಜೊತೆ ನಾನು ಹೋದ ಕೊನೆ ಕಾರ್ಯಕ್ರಮ ಅದಾಯಿತು.

ಮೇಲುಕೋಟೆಯಲ್ಲಿ ೨೦೧೭ ಡಿಸೆಂಬರ್ ೯ ಮತ್ತು ೧೦ ರಂದು ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮ್ಮೇಳನವನ್ನು ಮಂಡ್ಯ ಜಿಲ್ಲಾ ಸರ್ವೋದಯ ಮಂಡಲಿಯ ಸಹಯೋಗದಲ್ಲಿ ಏರ್ಪಡಿಸಿದ್ದರು. ಸಮ್ಮೇಳನದಲ್ಲಿ ೫೦೦ ಜನ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಸೇರಿ ಭಾಗವಹಿಸಿದರು. ೨೦೧೭ ಫೆಬ್ರವರಿ ಮಾಹೆಯಲ್ಲಿ ಟ್ರಸ್ಟಿನ ಹೊಸ ಜೀವನ ದಾರಿ ಕೇಂದ್ರದಲ್ಲಿ ಕರ್ನಾಟಕದಲ್ಲಿರುವ ಖಾದಿ ಸಂಸ್ಥೆಯ ಖಾದಿ ಕಾರ್ಯಕರ್ತರ ಸ್ನೇಹಮಿಲನ ಕಾರ್ಯಕ್ರಮವನ್ನು ಏರ್ಪಡಿಸಿದರು.

ಈ ಇಳಿ ವಯಸ್ಸಿನಲ್ಲಿ ಇಷ್ಟೆಲ್ಲಾ ಕಾರ್ಯ ಚಟುವಟಿಕೆ ಮಾಡುತ್ತಿದ್ದ ದಾದಾ ಯುವಕರಿಗೆ ಆದರ್ಶ ವ್ಯಕ್ತಿಯಾಗಿ ನಿಲ್ಲುತ್ತಾರೆ. ದಾದಾರವರು ಎಲ್ಲಾದರೂ ಹೊರಗಡೆ ಹೋಗಿಬಂದರೆ ಮಂಜು ಬಾ ಇಲ್ಲಿ ಹಣ ಲೆಕ್ಕ ಹಾಕಬೇಕು ಎಂದು ಹೇಳುತ್ತಿದ್ದರು. ೨೦೧೭ ಜುಲೈ ೨೪ ನೇ ತಾರೀಖು ಮೈಸೂರಿಗೆ ಕಾರ್ಯಕ್ರಮದ ನಿಮಿತ್ತ ಹೋಗಿದ್ದರು ಸಂಜೆ ವಾಪಾಸ್ಸಾದರು. ಬಂದಾಗ ಮಾತಾನಾಡಿಸಲು ಹೋದಾಗ ಆಯಾಸಗೊಂಡು ಮಲಗಿದ್ದರು. ಮಾರನೇ ೨೫ ನೇ ತಾರೀಖು ಮಧ್ಯಾಹ್ನ ಏನ್ ಊಟ ಮಾಡಿದ್ದೀರಿ ಅಂದು ಕೇಳಿದೆ. ಜ್ಯೂಸ್ ಕುಡಿದೆ ಎಂದು ಹೇಳಿದರು. ಅದೇ ನನ್ನ ದಾದಾರವರ ಕೊನೆಯ ಮಾತು. ೩೧ ನೇ ತಾರೀಖು ಹೊಲಿಗೆ ತರಬೇತಿಗೊಸ್ಕರ ಬೆಂಗಳೂರಿಗೆ ಹೊರಟೆ. ೭.೮.೨೦೧೭ ರಂದು ದಾದಾ ನಿಧನರಾದರೆಂದು ಮೊಬೈಲ್‌ಗೆ ಸಂದೇಶ ಬಂದಿತ್ತು. ನನಗೆ ನಂಬಲಾಗಲಿಲ್ಲ. ಬೆಂಗಳೂರಿನಿಂದ ಬಂದು ದಾದಾರವರ ಅಂತಿಮ ದರ್ಶನ ಪಡೆದೆ. ಕಣ್ಣುಗಳು ತೇವಗೊಂಡವು. ನಂತರ ೨೦.೮.೨೦೧೭ ರಂದು ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ತುಮಕೂರಿನ ಬಾಪೂಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಂ ಬಸವಯ್ಯನವರು ಹೇಳಿದ ಹಾಗೆ ದಾದಾ ಒಬ್ಬ ಪ್ರಾಯೋಗಿಕ ಮನುಷ್ಯ. ಟ್ರಸ್ಟಿನ ಎಲ್ಲಾ ಕಾರ್ಯಕರ್ತರ ಮತ್ತು ಸರ್ವೋದಯ ವಿಚಾರದವರ ಮನದಲ್ಲಿ ದಾದಾ ಸದಾ ಅಮರ.

ಆರ್ತರಿಗೆ ಆಶ್ರಯದಾತರಾದವರು ಸುರೇಂದ್ರ ಕೌಲಗಿ!

– ಎಲ್. ನರಸಿಂಹಯ್ಯ ತೊಂಡೋಟಿ

ಸುರೇಂದ್ರ ಕೌಲಗಿಯವರು–ಹಿಂದಿನ ತಲೆ ಮಾರಿನವರು, ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ಬಹಳ ಮಟ್ಟಿಗೆ ಬೇರೆಯವರ ಮೇಲೆ ಹೇರುವವರೇ ಎಂದು ಮೊದಲಿಗೆ ಕಂಡು ಬಂದರೂ. ಖಂಡಿತ ಹಾಗಲ್ಲ, ಅಭಿಪ್ರಾಯಗಳನ್ನು ಪರಸ್ಪರ ಹಂಚಿಕೊಳ್ಳುವವರು ಮಾತ್ರವಲ್ಲ, ಬೇರೆಯವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುವ, ಕೆಲಸ ಮಾಡಿಸುವ ಮನೋಧರ್ಮವುಳ್ಳವರು ಎಂದು ಯಾರಿಗೂ ಮನವರಿಕೆ ಆಗುತ್ತಿತ್ತು.

ಆದರ್ಶ ಹಾಗೂ ಜನೋಪಯೋಗಿ ಚಳುವಳಿಗಳಿಂದ ಆಕರ್ಷಿತರಾದ ಕೌಲಗಿಯವರು ತಮ್ಮ ೨೪ನೇ ವಯಸ್ಸಿಗಿಂತ ಮುಂಚಿನ ವರ್ಷಗಳಲ್ಲಿ, ಜೆ.ಪಿ. ಪ್ರಭಾವಲಯಕ್ಕೆ ಸಿಕ್ಕಿ, ಚರಿತ್ರಾರ್ಹವೆನ್ನಬಹುದಾದ ಪಾದಯಾತ್ರೆಯಲ್ಲಿ ಬಿಹಾರದಲ್ಲಿ ಸುತ್ತಾಡಿದರು. ಆಗ ಸ್ಪಷ್ಟ ಪರಿಕಲ್ಪನೆ ಇಲ್ಲದಿದ್ದರೂ, ತನ್ನದೇ ಆದ ಒಂದು ಸ್ವಂತ ಘಟಕವನ್ನು ಪ್ರಾರಂಭಿಸಬೇಕೆಂದು ಹಂಬಲಿಸಿದಾಗ ಅವರಿಗೆ ವಯಸ್ಸು–೨೪, ಆಗ ತಮ್ಮ ಸಾಧನೆಗೆ ಆಯ್ಕೆ ಮಾಡಿಕೊಂಡಿದ್ದು ಮಾತ್ರ ಅಪರಿಚಿತವೇ ಆಗಿದ್ದ ಮೇಲುಕೋಟೆಯನ್ನು, ಶಿಥಿಲಾವಸ್ಥೆಯಲ್ಲಿದ್ದ ಕಟ್ಟಡವೊಂದರಲ್ಲಿ ವಾಸ್ತವ್ಯ ಹೂಡಿ, ದಿನ ನಿತ್ಯದ ಊಟ, ನಿರ್ವಹಣೆಗಳಿಗಾಗಿ ಪರದಾಡುತ್ತಿದ್ದ ತರುಣ, ತನ್ನ ಸಾಧಕ ಮನೋಧರ್ಮವನ್ನು ಮಾತ್ರ ಬಿಡಲಿಲ್ಲ. ಅದರ ಪರಿಣಾಮವಾಗಿಯೇ ಹಾಳು ಬಿದ್ದಿದ್ದ ದೇವಸ್ಥಾನವೊಂದರಲ್ಲಿ "ಕಿಂಡರ್ ಗಾರ್ಟನ್" ಎಲೆಯ ಸಸಿಯನ್ನು ನೆಟ್ಟರು. ಆಮೇಲೆ ಜನಪದ ಸೇವಾ ಟ್ರಸ್ಟ್‌ನ್ನು ಪ್ರಾರಂಭಿಸಿ ಅದರ ಆಶ್ರಯದಲ್ಲಿ ವಿಕಲಾಂಗರನ್ನು ಪೋಷಿಸುವ, ಜ್ಞಾನದ ಬೆಳಕನ್ನು ಕಾಣಿಸುವ ಸರ್ವೋತ್ತಮ ಹಾಗೂ ಅತ್ಯಗತ್ಯವೆನಿಸಿದ್ದ ಸೇವಾಕಾರ್ಯವನ್ನು ಕೈಗೆತ್ತಿಕೊಂಡರು. ವಿಧಿವಂಚಿತ ಎಳೆಯ ವಿಕಲಾಂಗರನ್ನು ಶಾಲೆಗೆ ಬಿಟ್ಟು ಮತ್ತೆ ಕರೆದು ತರುವುದಕ್ಕಾಗಿ ಗಾಡಿ ಸೌಲಭ್ಯವನ್ನು ತಳ್ಳು ಗಾಡಿ ಸೌಲಭ್ಯವನ್ನು ಕಲ್ಪಿಸಿದ್ದು ಪ್ರಶಂಸಾರ್ಹವೇ ಹೌದು!

(ಗಾಂಧೀಜಿಯವರು ಗುರುತಿಸಿದ್ದ ೫ ವಂಚಿತ ವರ್ಗಗಳಲ್ಲಿ ಒಂದಾದ ವಿಕಲಾಂಗ ವರ್ಗವನ್ನು ಪೋಷಿಸುವ, ಶಿಕ್ಷಣ ನೀಡಿ ಮುಖ್ಯವಾಹಿನಿಗೆ ತರುವ, ಎಲ್ಲರಂತೆಯೇ ಅವರೂ ಬಾಳುವಂತಾಗಿಸುವುದೇ ನಿಜವಾದ ಪ್ರಗತಿ, ನಿಜವಾದ

ರಚನಾತ್ಮಕ ಕಾರ್ಯ ಎಂಬುದನ್ನು ೬೦ ವರ್ಷಗಳ ಹಿಂದೆಯೇ ಅರಿತು ಆಚರಿಸಿದರೆಂಬುದು ಗಮನಾರ್ಹ!)

"ಕರುಣಾಗೃಹ"ದ ಮೂಲಕ ಅನಾಥ ಮಕ್ಕಳಿಗೆ ತೂಗುವ ತೊಟ್ಟಿಲಾದರು, ಬೆಳೆಸುವ ಬಂಧುವಾದರು, ಮಾತ್ರವಲ್ಲ, ನೆಲೆ ಕಾಣಿಸುವ ಪರಮ ಹಿತೈಷಿಯೂ ಆದರೂ ಎಂಬುದು ಅವರ ಸಮಾಜ ಮುಖಿ ಕಾರ್ಯವನ್ನು ಅವರ ಸ್ಪಂದನ ಶೀಲ ಹೃದಯವನ್ನು ಬಿಂಬಿಸುವುದಾಗಿದೆ. ಹಾಗೆಯೇ ತಮ್ಮ ಜೀವನವನ್ನು ರಚನಾತ್ಮಕವಾಗಿ ತೇದರು ಎಂಬುದನ್ನು ಸಾಕ್ಷೀಕರಿಸುವುದಾಗಿದೆ. ಕೌಲಗಿಯವರ ಈ ಎಲ್ಲ ಮಮತೆಯಾಧಾರಿತ ಕಾರ್ಯಕ್ರಮಗಳ ಸಮರ್ಥ ನಿರ್ವಹಣೆಗೆ, ಅವರ ಶ್ರೀಮತಿಯವರಾದ ಗಿರಿಜಮ್ಮನವರು ಎಂದು ಹೇಳಲೇ ಬೇಕಾಗಿದೆ, ಹೇಳಿದಾಗ ಅದು ಕೌಲಗಿಯವರ ಅದೃಷ್ಟವೇಸರಿ ಎಂದಾಗುತ್ತದೆ.

ಕೌಲಗಿಯವರು, ತಮ್ಮ ರಾಷ್ಟ್ರೀಯ ದೃಷ್ಟಿಕೋನದಿಂದ ಜೆ.ಪಿ ಚಳುವಳಿ ವಿನೋಬಾವರ ಭೂದಾನ ಚಳುವಳಿ ಖಾದಿ ಪ್ರಚಾರಕಾರ್ಯ ಹಾಗೆಯೇ ಸರ್ವೋದಯ ಸಿದ್ಧಾಂತಗಳನ್ನು ಹಿಡಿದು ಮುನ್ನಡೆಯ ತೊಡಗಿದರು;

ಇಲ್ಲಿ ಸಮಾಜದಲ್ಲಿ ನೊಂದವರ ಉಳಿವು-ಏಳಿಗೆಗಾಗಿ ಶ್ರೀಮತಿ ಕೌಲಗಿಯವರು ತೊಡಗಿಸಿಕೊಂಡಿದ್ದು ಅನುರೂಪ ಹಂಚಿಕೆಯೇ ಆಯಿತು ಎಂದು ಹೇಳಬೇಕಾಗಿದೆ.

ಇನ್ನು ಬರುವ ದಿನ-ಮಾಸಗಳಿಗಾಗಿ, ಯಾವ ಮಾರ್ಗವನ್ನು ತೋರಬೇಕಾಗಿದೆ, ಎಂಬುದಕ್ಕೆ, ಸೋದಾಹರಣವಾಗಿ ಕೈಮಗ್ಗ, ಖಾದಿ ಉತ್ಪನ್ನ ಮತ್ತು ವಿವಿಧ ವಿಚಾರ ತರಬೇತಿ ನೀಡುವ ಪರಿಸರ ನಿರ್ಮಾಣ-ವಿಭಾಗಗಳನ್ನು ಕಲ್ಪಿಸಿ ಆಸಕ್ತರಿಗೆ ವಿಶೇಷವಾಗಿ ನಾವೀನ್ಯತೆಯ ಹಾದಿಯಲ್ಲಿ, ಮುಂದುವರಿಯ ಲಿಚ್ಛಿಸುವ ಯುವ ಮಿತ್ರರಿಗೆ "ಹೊಸ ಜೀವನ ದಾರಿ"ಯ ದರ್ಶನ ಮಾಡಿಸುತ್ತಿರುವ ಕೌಲಗಿಯುವರ ಮಕ್ಕಳು ಮತ್ತು ಸೊಸೆಯಂದಿರು- ಕೌಲಗಿಯುವರನ್ನು ಜೀವಂತವಾಗಿರಿಸುತ್ತಿದ್ದಾರೆ. ಅಭಿವಂದನಾರ್ಹರು!

ಪ್ರಾಪ್ತವಾಗಿರುವ ಬಜಾಜ್ ಪುರಸ್ಕಾರ ಕೌಲಗಿಯವರು ಮಾಡಿದ ರಚನಾತ್ಮಕ ಕಾರ್ಯಗಳಿಗೆ ಮಾತ್ರವಾಗಿರದೆ, ಅವರ ಕುಟುಂಬದ ಕುಡಿಗಳು ಮುಂದುವರಿಸಿಕೊಂಡು ಹೋಗುತ್ತಿರುವುದಕ್ಕೂ ಹೌದು!

ಚಿರಮಭಿ ವರ್ಧತಾಂ
ಸೇವಾ ಶ್ರೀ

Testimony Of Truth

- Koushik

I'm not writing something that nobody knows. Rather I'm writing something which everyone knows about Dada. Just the way he was. I felt it is important to be recorded because this edition of 'Janapada Vichara' might later someday be the starting point of Dada's Biogrpahy. I also realise that I'm not the best person to do this, as much as their family members who have been with Dada all through.

In the middle of a long conversation with dada about Melukote, there was a deep silenced pause. Dada with a smile continues 'Melukote is not ordinary, but extraordinary'. I had visited Melukote as a part of my Masters research on the tanks of Melukote. Interaction with Dada made me realize, how much he loved Melukote and its people. I have never had a detailed conversation about Dada's experience during Independence movement. It was when Sivagurunathan of Nurpu met with Dada and he had shared about his interaction, did I know about the connection of Dada with Vinoba and Kumarappa. The dedication with which he would read any book that he came across, always showed his thirst for learning. Dada would always be dressed in White dhoti and white kurta/ shirt. At times, when he is addressing a public gathering, he might put on his jacket. All of this was in Khadi. AIR Mysore station

news headlines at night, was his daily companion after dinner.

Once Dada was discussing about education of the past and now. 'Dharma – Not in a religious sense, but the essence of it' replied dada when asked what was that one thing to be followed in all education systems. The white Omni which the family uses now, was the only Ambulance that was available in Melukote. When I hear such stories of how Dada and Ajji take care of children affected by polio back then, it is not possible to imagine the dedication one could have towards serving others without the sense of self. I still feel, I have not realised the potential of who Dada really is and his deeds. But this is something I have learnt from Dada's life 'Pursuit of truth is the hardest but the most essential discipline of life'

Suerendra An Ideal Man

- Hugo Dixon ,UK

I was 18 when I met Surendra. I was travelling around India trying to get closer to this vast and enticing country, when somebody told me: "Go to Melkote."

So I set off and found Surendra. He first put me to work in the Karuna Graha. I saw the love he radiated. This wasn't a soppy love. It was a practical love – of service to humanity, to children crippled by polio, to those needing education, to village women who had no work.

Surendra then sent me to Hosa Jeevana Daari, where I worked weeding mulberry plants. I squatted until my legs could take it no longer. I wore Khadi from top to toe to shield me from the summer sun's baking rays. Now, when I weed my own garden, collect greens to eat in my salad and pick fruit from the trees, I'm reminded how Surendra told me everybody needs to do "bread work".

I learnt a lot. Kumara Swamy, who contracted polio as a child, was in charge. I marveled at how he maneuvered himself into a cart drawn by an ox to get around the farm. Hanuman, afflicted by polio since a child, and Krishnmurthy, who had been crippled in an accident, were there too. We had no electricity, no running water. We ate rice and saroo. We chatted into the night, and slept on the floor. I learnt how it was possible to be happy with so little. I learnt how the human spirit can overcome terrible disabilities.

I also learnt about integrity which, for me, means having fine principles and living by them. Surendra was a man of integrity. He didn't just spout his principles; he acted on them. This is why he could inspire me and, I suspect, so many others. Surendra was also my route to Gandhi. He explained his philosophy to me. Gandhi also came alive before my eyes through Surendra's work.

When I visited Melkote in later years, I kept questioning Surendra. The last time I saw him was soon after the Arab Spring, which was inspired by the ideal of nonviolent struggle, had descended into the bloody Syrian civil war. I was much troubled. Surendra didn't have any quick answers. How could he? But his passion for service to humanity was undimmed. He remains an inspiration in my heart.

My Indian Guru - Surendra

- Jamie Drumond, UK

"It was 30 years ago - I was just 17 when the koulagi family took me in, and I first met Surendra. In those 6 months this person and this family changed my life. His righteous organised fury at the way kids left with polio were abandoned, his fight for Dalit rights and his dedication to teaching know-nothing teenagers from London about local folklore, Gandhijis philosophy, his understanding of Hinduism and Buddhism - completely opened my eyes to another, better, worldview. I was lucky and honoured to get so much of his time when I was so young and impressionable - and it helped set me on a personal and professional course I'm still on, that urged me eventually to campaign on sustainable development, debt cancellation, the AIDS emergency, the fight for girls education and against corruption. It's because of Surendra Koulagi I eventually set up ONE with Bono and other activists. Millions of the most marginalised people on the planet received lifesaving AIDs medications or are getting a hand up out of poverty because of that part of his legacy which was planted here in my heart and head. I'm sure many others feel the same. The movement for social and environmental justice has lost a great leader, but he certainly left a great legacy which is needed now more than ever. All my love goes to all the Koulagis and the wider Janapada Seva movement at this time. And please please keep up the struggle."

My Indian Family

- Sally Cambridge,UK

I first met Surendra when I was a volunteer for a month at the JST in 1995. I had no real knowledge of Gandhian philosophy and although I grew up in the countryside I had never worked in the fields. That first visit to India for me was the first experience of another culture in a profound way. Surendra would patiently explain Gandhi's life, his philosophy, his teachings and his actions. But even more than that, you would then see Surendra and his family act according to these same values every day: in the support they gave to members of their community and all the work that they did to help those in need.

The experience had a profound effect on me and it continues to do so. I started working on international development programmes and on efforts to respond to humanitarian emergencies. Working on the global campaign to end polio reminded me of how far the world has come in trying to eradicate the disease since I first met children suffering the effects of polio who were living at JST. And at a more personal level, I learnt how soft and durable khadi cloth is. I still have clothes from that very first visit that I treasure and more I have bought or been given since.

Surendra and all the family have given me an insight into life in India that I could never have hoped to have otherwise. I have always referred to them as my Indian family and I made sure to take my husband to meet them to give their approval. They have helped inspire me – and I know countless others – to keep Gandhi in our hearts every day.

That Inspiring Time

-Simon Howard, Brighton, UK

I was very sad to hear of the death of Surendra Koulagi last week. I first met Surendra around 15 years ago when I spent a summer with him, his family and the Janapada Seva Trust in Melkote. The visit had been coordinated by a university society with the aim of sending students around the world to work on useful projects. We arrived expecting to help build a school or work on the farm. In fact, Surendra and his son Santosh had far greater aspirations for us. Their aim was to help us to see the world from a different perspective, one shaped by Gandhian principles, that valued people and the environment. We did a bit of work on the farm in the morning but the focus of the trip became afternoon lectures held on the farm, listening to Surendra's eminent friends discussing politics, economics, the environment, the future. We were then offered a carefully chosen selection of books to read, such as the ever relevant 'Small is Beautiful' by EF Schumacher. It was an inspiring time and certainly shaped my view of the world. That summer had a tangible impact too, the year before I went to Melkote I had almost failed my penultimate year at university, the year following the trip I graduated top of my class, due almost entirely to the ideas and enthusiasm generated by the Janapada Seva Trust in Melkote.

Some years later, again back in education I needed to write a research dissertation on the impact of climate change and globalisation on rural farmers. Who better to

help me with this than Surendra and Santosh! The family again looked after me for a summer and helped me organise endless focus groups with local farmers. They also introduced me to local academics and thinkers to help form my arguments. I spent long afternoons discussing my ideas with Surendra, testing out which ideas worked and which did not. He would tirelessly and patiently answer my questions on changes in rainfall, agricultural commodification, ongoing caste issues and urban migration, all from his wise Gandhian perspective. Again, I went from being a rather mediocre student though the year to winning an award for that research. I am certain that this was not due to my own brilliance, but because I got to document Surendra's remarkable understanding of rural India supported by the unique network surrounding the Janapada Seva Trust. I owe them all a great deal and will always remember Surendra and those summers in Melkote with great fondness.

Dada – puliyogare, mosaranna and Gandhi-ism

- Prakash Iyer, Bangalore

At the recommendation of a dear friend, I went to Melkote sometime in 2001, with the assurance of natural beauty, a morally heartwarming experience and intellectually stimulating conversations. After a tentative exploration of the village and the temple, I probably went to meet Dada driven more by a hunger for food than cravings for intellectual or moral stimulation. After due introductions, Dada insisted that I eat lunch first. The food is simple he said unapologetically - "puliyogare and mosaru anna."

What followed the delicious lunch was a rich and detailed description of his life and Janapada Seva Trust. How he came to live in Melkote in response to JP's call to Indian youth, the formation of Janapada Seva Trust and the work that the Trust was doing. A naive question from me led us to the library, Mahadev Desai's diaries and references to particular aspects of Gandhi's thought. The puliyogare and the conversation with Dada and Amma sealed a relationship with the Koulagis that is an essential part of the person I am today.

What was striking about Dada is the manner in which he responded to the numerous problems Janapada Seva Trust encountered in their work with the villages around Melkote. The most critical problems he encountered did not seem ideological. Rather they resembled banal prob-

lems most people face - tenancy and land ownership disputes, vagaries of monsoon, Trust workers desiring to leave for bigger cities, erosion of trust in friends and partners. The depth of Dada's understanding and belief in Gandhian ideas became evident in the way he responded to these situations. His responses came from clarity of thought, steadfastness and the hardy trust in the principles he insisted on employing in responding to these situations.

Dada's contribution ought not to be judged solely by material contribution and societal impact. His contribution is to the conservation of an idea. An idea that remains relevant and even necessary in changing circumstances. An idea that does not gain relevance by demanding fidelity to itself. A reflective mind like Dada's had to morph the idea it into something that remains necessary and useful in different circumstances. His life was a demonstration that the value of Gandhism resides in concrete action and one's ability to see changes in the world, the ability to respond to these changes while maintaining integrity to some foundational principles. This manifested itself as much in the puliyogare and mosaru anna he offered that day for lunch, as in his direct, simple responses to complex real life problems.

The man who walked his talk

- Lakshmi Swaminathan

As I was trying to sleep after a long rainy day, I received a call from Sumanas saying that Dada had passed away. I sat up straight not knowing how to respond but suddenly, flashes of him came to my mind. His square face, peaceful eyes, handsome physique and a reassuring smile. A smile that gave hope.

I have known Dada since March 2016, when I had gone to Melukote on a professional visit. The first time I saw him, he was on his chair and table reading the Kannada newspaper. He smiled at me curiously with his radiant face reflecting light that came through the window. After introducing myself and knowing a bit about him, I left amazed by this wonderful person who had dedicated his life for others and lived one that he believed in.

Since that visit, Dada had spoken so much about his life, his travels, encounters with handicrafts, education, the times that he worked with Jayaprakash Narayan, the formation of his Gandhian ideals, marriage with Ajji and establishment of the Janapada Seva Trust in Melukote. The growth of Janapada reflects his immense hard work behind it and I am really astonished to see the number of under-privileged who are benefited out of his varied programs. It was because of Dada that I learnt the true meaning of Khadi. His stories on making Khadi cotton as a fabric that would serve as a living to many, made me fall in love with the place and the fabric. Without doubt, he was always ahead of his times

showing us a way to walk our path.

Dada's physical presence may not be there anymore but he has engulfed us with an essence that will last with all of us. Like a tree protecting its off springs and providing home for birds and other small animals, Dada had given parts of him to different people being a source of strength and support to all. In this world of humongous catastrophe, there are a few who still give us hope. One such person was Dada. Well, still IS Dada.

We are mere beings
in this beautiful wide world
trying, hard, to find our path.
It is rare that we meet people
like Dada..
A soul, so pure and compassionate
that is so evident,
From the reassuring smile.
A smile that I will always miss.

ಶ್ರೀಯುತ ಸುರೇಂದ್ರ ಕೌಲಗಿ-ನಾನು ಕಂಡಂತೆ

ಹೆಚ್.ಎನ್. ರಮೇಶ್,ಮಂಡ್ಯ.

ಶ್ರೀಯುತ ಸುರೇಂದ್ರ ಕೌಲಗಿಯವರು ನನಗೆ ಆತ್ಮೀಯ ದಾದಾ. ಇವರು ಮೇಲುಕೋಟೆಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಅನೇಕ ಜನಪರ ಕಾರ್ಯಗಳನ್ನು ಮಾಡುತ್ತಾ ಬಂದು ಆರು ದಶಕಗಳೇ ಸಂದಿವೆ. ಆದರೆ ನನಗೆ ಅವರ ಒಡನಾಟ ಕೆಲವೇ ವರ್ಷಗಳಿಂದ. ಆದರೆ ನನಗೆ ಎಷ್ಟೋ ವರ್ಷಗಳ ದೀರ್ಘ ಬಾಂಧವ್ಯವಿರುವ ಪಿತೃಸಮಾನ ವ್ಯಕ್ತಿ ಎನಿಸಿದ್ದಾರೆ. ಅಲ್ಲದೆ ನಮ್ಮ ಕುಟುಂಬದ ಭಾಗವೆನಿಸಿದ್ದಾರೆ. ನಾನು ಅನೇಕ ಸಾರಿ ದಾದಾರವರು ಹೇಗೆ ನಮಗೆ ಇಷ್ಟು ಆಪ್ತರಾದರು ಎಂದು ಪ್ರಶ್ನಿಸಿಕೊಂಡಿದ್ದೇನೆ! ಅವರ ಸರಳತೆ, ಪ್ರೀತಿ, ವಿಶ್ವಾಸ, ಮಗುವಿನ ಮುಗ್ಧತೆ ಎಲ್ಲವೂ ಅವರ ವ್ಯಕ್ತಿತ್ವದ ಪರಧಿಗೆ ಬಂದ ಎಲ್ಲರಿಗೂ ಇವ ನಮ್ಮವ, ಇವ ನಮ್ಮವ ಎಂಬ ಭಾವನೆ ಮೂಡಿಸುತ್ತದೆ.

ದಾದಾ ಮತ್ತು ಜನಪದಸೇವಾ ಟ್ರಸ್ಟ್ ಕಾರ್ಯಗಳ ಬಗ್ಗೆ ೧೫ ವರ್ಷಗಳ ಹಿಂದೆ ನಮಗೆ ಪರಿಚಯವಾದರು ನನ್ನ ಸ್ನೇಹಿತ ಎಸ್.ನಾರಾಯಣ್‌ರವರು. ಆಗ ನಾನು ಮತ್ತು ಮಂಡ್ಯದ ಕೆಲವು ಸ್ನೇಹಿತರು ಮೇಲುಕೋಟೆಗೆ ಹೊರಟೆವು. ದಾದಾ ಮತ್ತು ಶ್ರೀಮತಿ ಗಿರಿಜಮ್ಮ ದಂಪತಿ ಪ್ರಥಮ ಭೇಟಿಯಲ್ಲಿಯೇ ಆತ್ಮೀಯರೆನಿಸಿದರು. ದಿನಕಳದಂತೆ ಅವರ ಕಾರ್ಯವಿಸ್ತಾರ, ಕಾರ್ಯವ್ಯಾಪ್ತಿ, ವೈಖರಿಗಳು ನಮ್ಮ ಮೇಲೆ ಆಳವಾದ ಪ್ರಭಾವ ಬೀರಿದವು.

ವಿಶೇಷ ಚೇತನ ಮಕ್ಕಳಿಗೆ ಅವರು ನಡೆಸುತ್ತಿದ್ದ ಕರುಣಾಲಯ ಆಗ ಕಾರ್ಯನಿರ್ವಹಿಸುತ್ತಿತ್ತು. ಅಲ್ಲಿ ಪುಟ್ಟಮಕ್ಕಳಿಂದ ಹಿಡಿದು, ೧೫ ರಿಂದ ೧೬ವರ್ಷದವರೆಗಿನ ಬಾಲಕ/ಬಾಲಕಿಯರಿದ್ದರು. ಈ ಮಕ್ಕಳು ಎಲ್ಲಾ ಸಾಮಾನ್ಯ ಮಕ್ಕಳಂತೆಯೇ ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದರು. ವಿಶೇಷ ಸಲಕರಣೆಯನ್ನು ಆಳವಡಿಸಿದ್ದ ಬಾವಿಯಿಂದ ನೀರು ಸೇದಿ, ಸ್ನಾನ ಮಾಡಿ, ತಮ್ಮ ಬಟ್ಟೆಗಳನ್ನು ತಾವೇ ಶುಚಿಗೊಳಿಸಿಕೊಳ್ಳುತ್ತಿದ್ದರು. ಶಾಲೆಗೆ ಹೋಗುವುದು, ಆಟ-ಪಾಠಗಳಲ್ಲಿ ಮತ್ತು ಕೆಲಸಗಳಲ್ಲಿ ಉತ್ಸಾಹದಿಂದ ಭಾಗವಹಿಸುವುದು, ಕೈತೋಟ ಬೆಳೆಸುವುದು, ಚರಕದಿಂದ ನೂಲುವುದು, ಮುಂತಾದ ಕೆಲಸಗಳಲ್ಲಿ ಆತ್ಮ ವಿಶ್ವಾಸದಿಂದ ಪಾಲ್ಗೊಳ್ಳುತ್ತಿದ್ದರು. ಎಲ್ಲಕ್ಕಿಂತ ಮುಖ್ಯವಾಗಿ ಆ ಮಕ್ಕಳಲ್ಲಿ ಯಾವುದೇ ಕೀಳರಿಮೆಯ ಭಾವ ಇರಲಿಲ್ಲ. ಈ ಮಟ್ಟದ ಆತ್ಮಸ್ಥೈರ್ಯವನ್ನು ಮಕ್ಕಳಲ್ಲಿ ತುಂಬಿದ ದಾದಾ ದಂಪತಿ ಬಗ್ಗೆ ನಮ್ಮ ಗೌರವ ನೂರ್ಮಡಿಯಾಯಿತು.

ಜನಪದ ಸೇವಾ ಟ್ರಸ್ಟ್‌ನಲ್ಲಿ ತಯಾರಾದ ಖಾದಿ ಕೈಚೀಲಗಳು ಬಹು ಜನಪ್ರಿಯವಾಗಿದ್ದವು. ಇಂತಹ ಚೀಲಗಳನ್ನು ನಾವೂ ಕೊಂಡುದಲ್ಲದೆ, ಸ್ನೇಹಿತರಿಗೆ ಹಾಗೂ ಬಂಧುಗಳಿಗೆ ಉಡುಗೊರೆಯಾಗಿ ಕೊಟ್ಟಿದ್ದು ಉಂಟು.

ನಾನು ಜನಪದನಿಲಯಕ್ಕೆ ಹೋದಾಗಲೆಲ್ಲಾ ದಾದಾರವರು ಆತ್ಮೀಯವಾಗಿ ಕುಟುಂಬದ ಎಲ್ಲಾ ಸದಸ್ಯರ ಬಗ್ಗೆ ವಿಚಾರಿಸಿ, ಯಾಕೆ ಒಬ್ಬರೇ ಬಂದಿದ್ದೀರಿ? ನಿಮ್ಮ ಶ್ರೀಮತಿಯವರೆಲ್ಲಿ? ಎನ್ನುತ್ತಿದ್ದರು. ಹಾಗೆಯೇ ದೇಶದ ರಾಜಕೀಯ ವಿದ್ಯಮಾನಗಳ ಬಗ್ಗೆ ಕಳಕಳಿಯಿಂದ ಚರ್ಚಿಸುತ್ತಿದ್ದರು. ಆಗ ನನಗೆ ದಾದಾರವರ ಆಳವಾದ ಅಧ್ಯಯನ , ಅನುಭವ ಹಾಗೂ ಅವರ ಚಿಕಿತ್ಸಕ ಮನಸ್ಸಿನ ಪರಿಚಯವಾಗುತ್ತಿತ್ತು. ಅವರ ಚಿಂತನೆಗಳಿಗೆ ಗಾಂಧಿಜಿಯವರ ಚಿಂತನೆಗಳಾದ ಸತ್ಯ, ಅಹಿಂಸೆ, ಸರಳಜೀವನ ಹಾಗೂ ಶ್ರಮ ಸಹಿತ ಸುಸ್ಥಿರ ಬದುಕು ಅವುಗಳೇ ತಳಹದಿ ಎಂದು ತಿಳಿಯಿತು.

ಒಮ್ಮೆ ಮಾತುಕತೆಯಲ್ಲಿ ಅವರ ಗಮನ ಅಯೋಡಿನ್‌ಯುಕ್ತ ಉಪ್ಪನ್ನು ಮಾತ್ರ ಮಾರಾಟ ಮಾಡಬೇಕೆಂಬ ಸರ್ಕಾರದ ನಿಲುವಿನ ಕಡೆ ಹೊರಳಿತು. ದಾದಾರವರಿಗೆ ಇದರ ಬಗ್ಗೆ ವಿರೋಧವಿತ್ತು. ಅವರ ಪ್ರಕಾರ ಸರ್ಕಾರದ ಈ ನಿಲುವಿನ ಹಿಂದೆ ಜನಹಿತಕ್ಕಿಂತ ಕೈಗಾರಿಕೋಧ್ಯಮಿಗಳ ಹಿತವೇ ಅಡಗಿದೆ ಎನಿಸಿತು. ಟಾಟಾ ಕಂಪನಿಯಂತಹ ಬಹುರಾಷ್ಟ್ರೀಯ ಸಂಸ್ಥೆಗಳು ಜನಸಾಮಾನ್ಯರು ಬಳಸುವಂತಹ ಉಪ್ಪಿನ ವಸ್ತುವಿನ ಮೇಲೂ ಸಹ ತಮ್ಮ ಪ್ರಭುತ್ವ ಸಾಧಿಸುವುದು ಅಕ್ಷಮ್ಯವೆನಿಸುತ್ತಿತ್ತು. ಈ ನಿಲುವಿನ ವಿರುದ್ಧ ಜನರು ಪ್ರತಿಭಟಿಸಬೇಕೆಂದು ದಾದಾರವರು ಅಪೇಕ್ಷಿಸಿದರು. ಇದರಂತೆ ಸಮಾನ ಮನಸ್ಕರ ಸಂಘ ಸಂಸ್ಥೆಗಳು ಸೇರಿ ಒಂದು ಪ್ರತಿಭಟನೆಯನ್ನು ಮಂಡ್ಯನಗರದಲ್ಲಿ ಆಯೋಜಿಸಲಾಯಿತು.

ದಾದಾರವರು ತಾವು ನಡೆಸುತ್ತಿದ್ದ ಜನಪರಕಾರ್ಯಗಳಿಗೆ ತಗಲುವ ವೆಚ್ಚವನ್ನು ಜನಸಾಮಾನ್ಯರಿಂದಲೇ ಪಡೆಯಬೇಕೆಂದು ಬಯಸುತ್ತಿದ್ದರು. ಸರ್ಕಾರವನ್ನಾಗಲೀ, ಉದ್ಯಮಿಗಳನ್ನಾಗಲೀ, ಓಲೈಸುವುದು, ಇವರ ಜಾಯಮಾನಕ್ಕೆ ಒಗ್ಗದ ವಿಚಾರ. ಈ ಜನಪರ ಕಾರ್ಯಗಳಲ್ಲಿ ತಾವು ಭಾಗಿಗಳೆಂಬ ಭಾವ ಜನಸಾಮಾನ್ಯರಲ್ಲಿನ ಮೂಡಿಸುವುದೇ ಅವರ ಆಶಯವಾಗಿತ್ತು. ಅನೇಕರು ಪ್ರತಿ ತಿಂಗಳು ತಮ್ಮ ಕೈಲಾದ ವಂತಿಕೆಯನ್ನು ಯಾವುದೇ ಸಂಕೋಚವಿಲ್ಲದೇ ಕಳುಹಿಸಲು ಇದು ಸಹಕಾರಿಯಾಗಿತ್ತು. ಮಂಡ್ಯದ ಸಕ್ಕರೆ ನಗರದ ವ್ಯಕ್ತಿಯೊಬ್ಬರು ಎರಡು ದಶಕಗಳಿಂದ ಪ್ರತಿ ತಿಂಗಳು ರೂ. ೫–೦೦ಗಳನ್ನು ಕಳುಹಿಸುತ್ತಿದರಂತೆ. ನಾನು ಮತ್ತು ನನ್ನ ಬಳಗದ ಸದಸ್ಯರಿಗೂ ಇದೇ ಮಾದರಿಯಾಯಿತು. ಮಕ್ಕಳ ದಿನಾಚರಣೆಯನ್ನು ಕರುಣಾಲಯದಲ್ಲಿ ಸಂಭ್ರಮದಿಂದ ಆಚರಿಸಲಾಗುತ್ತಿತ್ತು. ಇದಕ್ಕಾಗಿ ನಮ್ಮ ಬಳಗದ ಸದಸ್ಯರು ಸ್ವಪ್ರೇರಣೆಯಿಂದ ವಂತಿಗೆ ನೀಡುತ್ತಿದ್ದರು.

ದಾದಾ ದಂಪತಿಯ ಒಡನಾಟದಿಂದ ಪ್ರಭಾವಿತರಾದ ನಾನು ಮತ್ತು ನನ್ನ ಶ್ರೀಮತಿ ಶೈಲಜಾ ನಮ್ಮ ವಿವಾಹದ ೨೫ನೇ ವಾರ್ಷಿಕೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಕರುಣಾಲಯವೇ ಸೂಕ್ತ ಸ್ಥಳವೆಂದು ತೀರ್ಮಾನಿಸಿದೆವು. ಅದರಂತೆ ೨೦೦೬ನೇ ಸೆಪ್ಟೆಂಬರ್ ಮಾಹೆಯಲ್ಲಿ ಕೆಲವೇ ಆತ್ಮೀಯ ಮಿತ್ರರೊಂದಿಗೆ ಕರುಣಾಲಯಕ್ಕೆ ತೆರಳಿ ಅಲ್ಲಿನ ಮಕ್ಕಳು ಹಾಗೂ ದಾದಾ ಕುಟುಂಬದವರೊಂದಿಗೆ ಭೋಜನ ಮಾಡುವ ಸೌಭಾಗ್ಯವನ್ನು ಪಡೆದೆವು. ಇದು ನಮ್ಮ ಜೀವನದ ಒಂದು ಅವಿಸ್ಮರಣೆಯ ದಿನ.

ಜನಪದ ಸೇವಾ ಟ್ರಸ್ಟ್‌ನ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ದಾದಾ ಮತ್ತು ಶ್ರೀಮತಿ ಗಿರಿಜಮ್ಮನವರ ಸೇವಾ ವ್ಯಾಪ್ತಿಯ ಹಿರಿಮೆಯ ಪರಿಚಯವಾಯಿತು. ಅಂದು ಕರುಣಾಲಯದಿಂದ ಹೊರಬಂದು, ಸ್ವಾತಂತ್ರವಾಗಿ ಆತ್ಮವಿಶ್ವಾಸದಿಂದ ಸಾರ್ಥಕ ಬದುಕನ್ನು ಕಟ್ಟಿಕೊಂಡ ಅನೇಕ ದಂಪತಿಗಳ ಪರಿಚಯವಾಯಿತು. ಅವರೆಲ್ಲರೂ ಸ್ವಂತ ದುಡಿಮೆಯಿಂದ ಸಂಸಾರ ನಿರ್ವಹಣೆ ಮಾಡುತ್ತಿರುವುದಲ್ಲದೆ, ಸೇವಾಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದ್ದರು. ಇವರೆಲ್ಲರೂ ಸಂಸಾರ ಸಮೇತರಾಗಿ, ವಿನೀತಭಾವದಿಂದ ಬಂದಿದ್ದರು. ಅವರ ಮುಖದಲ್ಲಿದ್ದ ಸಂತೋಷ, ಸಮಾಧಾನ, ಹಾಗೂ ಆತ್ಮತೃಪ್ತಿ ಶ್ರೀ ಸುರೇಂದ್ರ ಕೌಲಗಿ ದಂಪತಿಯ ಸೇವೆಯ ಪ್ರಭಾವ ಎಂದು ತಿಳಿದು, ಇವರದು ಎಂತಹ ಸಾರ್ಥಕ ಜೀವನ ಎಂಬ ಭಾವನೆ ಮನದಲ್ಲಿ ತುಂಬಿ ಬಂತು.

ಇದೇ ಸುವರ್ಣಮಹೋತ್ಸವದ ಸಮಾರಂಭದಲ್ಲಿ ಹಲವಾರು ಸರ್ಕಾರೇತರ ಸೇವಾ ಸಂಸ್ಥೆಗಳು (ಎನ್.ಜಿ.ಒ) ಪದಾಧಿಕಾರಿಗಳೂ ಸಹ ಭಾಗವಹಿಸಿದ್ದರು. ಅವರುಗಳು ಜನಪದ ಸೇವಾ ಟ್ರಸ್ಟ್‌ನ ಕಾರ್ಯವೈಖರಿಯನ್ನು ಮುಕ್ತಕಂಠದಿಂದ ಹೊಗಳಿ, ತಮ್ಮ ಕಾರ್ಯಚುಟವಟಿಕೆಗಳಿಗೆ ದಾದಾರವರೇ ಪ್ರೇರಣೆ ಎಂದು ತಿಳಿಸಿದರು.

ಶ್ರೀ ದಾದಾರವರೊಂದಿಗೆ ನನ್ನ ಕೊನೆಯ ಭೇಟಿ ಜುಲೈ ೨೩, ೨೦೧೭ನೇ ಭಾನುವಾರ. ಅಂದು ದಾದಾರವರ ಮುಖದಲ್ಲಿ ವಯೋಮಾನದ ಚಿಹ್ನೆಗಳು ತೋರುತ್ತಿದ್ದವು ಅದರೂ ಅವರ ಉತ್ಸಾಹದ ಮಾತುಕತೆಗೆ ಏನೂ ಕುಂದು ತರಲಿಲ್ಲ. ಮುಖದಲ್ಲಿ ಎಂದಿನ ಪ್ರಸನ್ನತೆ, ಮತ್ತು ಜಾಗೃತವಾದ ಮನಸ್ಸು ಎಂದಿನಂತೆಯೇ ಇತ್ತು. ನಮ್ಮ ಮಾತುಕತೆಗಳೆಲ್ಲಾ ಇಸ್ರೋ ಸಂಸ್ಥೆಯ ಮಂಗಳಯಾನ ಕಾರ್ಯಕ್ರಮ, ಕೇಂದ್ರ ಸರ್ಕಾರದ ಸರಕು ಮತ್ತು ಸೇವಾ ತೆರಿಗೆ ನೀತಿ ಮತ್ತು ಫೇಸ್‌ಬುಕ್, ಟ್ವೀಟರ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ಸತ್ಯವನ್ನು ಮರೆಮಾಚುವ ತಂತ್ರಗಳು ಮುಂತಾದವುಗಳ ಬಗ್ಗೆ ತೀವ್ರವಾಗಿ ಪ್ರತಿಕ್ರಿಯಿಸಿದರು.

ಕಳೆದ ವರ್ಷ ದಾದಾರವರು ತಮ್ಮ ಜೀವನ ಸಂಗಾತಿ ಹಾಗೂ ತಮ್ಮ

ಕಾರ್ಯಚಟುವಟಿಕೆಗಳ ಊರುಗೋಲಾಗಿದ್ದ ಶ್ರೀಮತಿ ಗಿರಿಜಮ್ಮನವರನ್ನು ಕಳೆದುಕೊಂಡರು. ಈ ಘಟನೆ ಅಘಾತಕಾರಿಯಾಗಿದ್ದರೂ ಸಹ ದಾದಾರವರು ಅದನ್ನು ಸ್ಥಿತಪ್ರಜ್ಞತೆಯಿಂದ ಸ್ವೀಕರಿಸಿ, ತಮ್ಮ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಪ್ರತಿಷ್ಠಿತ ಜಮನ್‌ಲಾಲ್ ಬಜಾಜ್ ಪ್ರಶಸ್ತಿಗೆ ಭಾಜನರಾದಾಗಲೂ ಸಹ ದಾದಾರವರು ಅದನ್ನು ಸಮಚಿತ್ತದಿಂದ ಅದನ್ನು ಸ್ವೀಕರಿಸಿದ್ದರು. ನಮಗೆ ಹಿಗ್ಗುವ ಅಥವಾ ಕುಗ್ಗುವ ಚೇತನವಲ್ಲವಿದು ಎನಿಸಿದ್ದು ಇಲ್ಲಿಯೇ.

ದಾದಾರವರು ಅನೇಕ ವಿಷಯಗಳಲ್ಲಿ ಅದೃಷ್ಟವಂತರೆಂದೇ ಹೇಳಬೇಕು. ಅವರ ಜೀವನದ ಧ್ಯೇಯಗಳನ್ನು ಸಾಕಾರಗೊಳಿಸಲು ಅವರ ಜೊತೆ ಹೆಗಲುಕೊಟ್ಟು ನಿಂತಿರುವ ಕುಟುಂಬ ವರ್ಗವಿದೆ. ಇಳಿವಯಸ್ಸಿನಲ್ಲಿಯೂ ಅವರ ಮೇಲಿನ ಭಾರವನ್ನು ಕಡಿಮೆ ಮಾಡಿರುವವರು ಅವರ ಮಕ್ಕಳಾದ ಶ್ರೀ ಸಂತೋಷ್‌ಕೌಲಗಿ ಮತ್ತು ಶ್ರೀಮತಿ ಗೀತಾ ಹಾಗೂ ಶ್ರೀ ಸುಘೋಷ್‌ಕೌಲಗಿ ಮತ್ತು ಶ್ರೀಮತಿ ಶರ್ಮಿಳಾ ದಂಪತಿಗಳು. ಶ್ರೀ ಸಂತೋಷ್ ಕೌಲಗಿಯವರು ಟ್ರಸ್ಟ್‌ನ ಕಾರ್ಯದರ್ಶಿಯಾಗಿ ಖಾದಿ ಸೇವಾ ಕೇಂದ್ರ ಹಾಗೂ ಮಕ್ಕಳ ದತ್ತು ಕೇಂದ್ರವನ್ನು ದಾದಾರವರ ಮಾರ್ಗದರ್ಶನದಲ್ಲಿಯೇ ಮುನ್ನಡೆಸುತ್ತಿದ್ದಾರೆ.

ದಾದಾರವರು ತಮ್ಮ ಜೀವನವನ್ನು ಸಾಮಾಜಿಕ ಕಾರ್ಯಗಳಿಗೆ ಮುಡಿಪಾಗಿಟ್ಟವರು. ಗಾಂಧಿಯ ತತ್ವಗಳಲ್ಲಿ ಅಪಾರವಾದ ನಂಬಿಕೆ ಇಟ್ಟವರು. ಸರಳತೆ, ಮಾನವೀಯತೆ ಅವರಿಗೆ ಸಹಜವಾಗಿ ಮೈಗೂಡಿತ್ತು. ಈ ಗುಣಗಳನ್ನು ತಮ್ಮ ಜೀವನದಲ್ಲಿ ಆಳವಡಿಸಿಕೊಳ್ಳುವುದಲ್ಲದೆ, ತಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳು ಸಹ ಅಳವಡಿಸಿಕೊಂಡು ಗೌರವಿಸುವಂತೆ ಪ್ರೇರಣೆ ನೀಡಿದ್ದಾರೆ. ತಲೆಮಾರುಗಳ ನಡುವೆ ಅಂತಹ ಹೆಚ್ಚುತ್ತಿರುವ ಈ ಕಾಲದಲ್ಲಿ ದಾದಾರವರ ಈ ಸಾಧನೆ ಅಪೂರ್ವವಾದದ್ದು.

ಒಂದೇ ಧ್ಯೇಯವನ್ನು ಹೊಂದಿ, ಪರಸ್ಪರ ಗೌರವ, ನಂಬಿಕೆ ಹಾಗೂ ಬದ್ಧತೆಯಿಂದ ಸಾರ್ಥಕ ಜೀವನ ನಡೆಸಿ, ಮಾನವೀಯತೆಯ ಮಹತ್ವವನ್ನು ತೋರಿಸಿಕೊಟ್ಟು, ಒಂದೇ ವರ್ಷದ ಅಂತರದಲ್ಲಿ ಸಾವಿನಲ್ಲಿಯೂ ಜೋಡಿಯಾದ ದಾದಾ ದಂಪತಿಗೆ ನಮ್ಮ ಹೃದಯಪೂರ್ವಕ ಶ್ರದ್ಧಾಂಜಲಿ.

ಸಾಮಾಜಿಕ ಪ್ರಜ್ಞೆ ಹೆಚ್ಚಿಸಿದವರು

– ಮನೋಹರ ಎಂ. ಸಿ. ಮೈಸೂರು.

ಸುರೇಂದ್ರ ಕೌಲಗಿಯವರಿಗೂ ನನಗೂ ಸುಮಾರು ೪೦ ವರ್ಷಗಳ ಅಂತರ. ಆದರೆ ಅವರೆದುರಿನಲ್ಲಿ ನನ್ನ ಅಭಿಪ್ರಾಯ, ಅನಿಸಿಕೆಗಳನ್ನು ವ್ಯಕ್ತಪಡಿಸಲು ಈ ವಯಸ್ಸಿನ ಅಂತರ ಯಾವತ್ತೂ ಅಡ್ಡಿಬರಲಿಲ್ಲ. ಸಾಮಾಜಿಕ ಸೇವಾ ಕ್ಷೇತ್ರದಲ್ಲಿ ಅವರಿಗೆ ನನ್ನ ವಯಸ್ಸಿಗಿಂತಲೂ ಹೆಚ್ಚು ಅನುಭವವಿದ್ದರೂ, ನನ್ನ ಮಾತನ್ನು ಕೇಳಿಸಿಕೊಳ್ಳುತ್ತಿದ್ದರು. ಅವರು ಪ್ರಾರಂಭಿಸಿದ ಜನಪದ ಸೇವಾ ಟ್ರಸ್ಟ್‌ನ ಅಧ್ಯಕ್ಷನನ್ನಾಗಿ ಮಾಡಿ, ಆ ಸಮಯದಲ್ಲಿ ತಾವು ಸಾಮಾನ್ಯ ಸದಸ್ಯರಾಗಿದ್ದರು.

ಕೆಲವೊಂದು ಸಾರಿ ತಮ್ಮ ಅತಿಯಾದ ಪ್ರಾಮಾಣಿಕತೆ, ಪಾರದರ್ಶಕತೆಯ ನಡವಳಿಕೆಯಿಂದಾಗಿ, ಅನೇಕರಿಂದ ಶೋಷಣೆಗೆ ಒಳಗಾಗಿದ್ದನ್ನೂ ನಾನು ನೋಡಿದ್ದೆ.

ಮೈಸೂರಿನಲ್ಲಿ ನಾವೊಂದಿಷ್ಟು ಜನ ಸೇರಿ ಪ್ರಾರಂಭಿಸಿದ ಕನ್ನಡ ಶಾಲೆಗೆ ಬಹಳ ಉತ್ಸಾಹದಿಂದ ಬಂದು, ನೋಡಿ, ಪ್ರೋತ್ಸಾಹಿಸಿದ್ದರು. ಪ್ರತಿಸಾರಿ ಭೇಟಿಯಾದಾಗಲೂ ಶಾಲೆಯ ಬೆಳವಣಿಗೆಯ ಬಗ್ಗೆ ವಿಚಾರಿಸಿ, ಸಂತಸಪಡುತ್ತಿದ್ದರು. ತಾವು ೫೦ ವರ್ಷದಿಂದ ನಡೆಸುತ್ತಿದ್ದ ಶಿಶುವಿಹಾರಕ್ಕೆ ಮಕ್ಕಳು ಕಡಿಮೆಯಾದಾಗಲೂ, ಆರ್ಥಿಕವಾಗಿ ಹೊರೆಯಾದಾಗಲೂ, ಶಿಶುವಿಹಾರ ಮುಚ್ಚಲು ಇಷ್ಟಪಡಲಿಲ್ಲ.

ನಾನು, ತಿಂಗಳಿಗೆರಡು ಸಾರಿಯಂತೆ, ಸುಮಾರು ೨ ವರ್ಷ ಮೇಲುಕೋಟೆಯಲ್ಲಿ, ಜನರಿಗೆ ಹೋಮಿಯೋಪತಿ ಔಷಧ ಕೊಡಲು ಹೋಗುತ್ತಿದ್ದೆ. ಅದನ್ನು ಅನಿವಾರ್ಯವಾಗಿ ನಿಲ್ಲಿಸುವ ಸಂಧರ್ಭ ಬಂದಾಗ, ಬಹಳ ನೊಂದುಕೊಂಡಿದ್ದರು.

ನಮ್ಮ ಶಾಲೆಯ ಮಕ್ಕಳು ಮೇಲುಕೋಟೆಗೆ ಭೇಟಿ ನೀಡಿದಾಗಲೆಲ್ಲಾ, ಅವರ ಜೊತೆ ಉತ್ಸಾಹದಿಂದ ಸಂವಾದ ನಡೆಸಿದ್ದರು. ಮಕ್ಕಳು ಎಷ್ಟೇ ಬಾಲಿಶವಾಗಿ ಪ್ರಶ್ನೆ ಕೇಳಿದರೂ, ಅದಕ್ಕೆಲ್ಲಾ ನಸುನಗುತ್ತಲೇ, ಪ್ರಾಮಾಣಿಕವಾಗಿ ಉತ್ತರಿಸುತ್ತಿದ್ದರು.

ನಮ್ಮ ಅರಿವು ಸಂಸ್ಥೆಯಿಂದ ಪುಸ್ತಕವೊಂದನ್ನು ಹೊರತಂದಾಗ, ಪರಿಸರ, ಮನೋವಿಕಾಸ ಕಾರ್ಯಾಗಾರಗಳನ್ನು ನಡೆಸುತ್ತಿದ್ದಾಗ, ಸಾಕ್ಷ್ಯಚಿತ್ರಗಳನ್ನು ಮಾಡುವಾಗ, ಮದುವೆ ಮಾಡಿಸಲು ಸಂಬಂಧಗಳನ್ನು ಹುಡುಕಿಕೊಂಡು

ಓಡಾಡುವಾಗ, ಸಂತೋಷ ಕೌಲಗಿ, ಡಾಕ್ಟ್ರೇ ನೀವು ನಮ್ಮ ಅಪ್ಪನಿಂದ ಹೆಚ್ಚು ಪ್ರಭಾವಿತರಾಗಿರುವ ಹಾಗಿದೆ. ಹೀಗೆ ಎಲ್ಲದರಲ್ಲೂ ಸಿಕ್ಕಾಕೋಬೇಡಿ. ಹುಶಾರಾಗಿರಿ ಎಂದು ತಮ್ಮ ಎಂದಿನ ಹಾಸ್ಯಮಿಶ್ರಿತ ಶೈಲಿಯಲ್ಲಿ ರೇಗಿಸುತ್ತಿದ್ದಾಗ, ದಾದಾ ನಸುನಗುತ್ತಾ ಸಂತಸ ವ್ಯಕ್ತಪಡಿಸುತ್ತಿದ್ದರು. ಸೇವಾಕ್ಷೇತ್ರದಲ್ಲಿ ನಿರಂತರವಾಗಿ ಎಲ್ಲಾ ಅಡೆತಡೆಗಳ ನಡುವೆಯೂ ೫೦ ವರ್ಷಗಳಿಗಿಂತಲೂ ಹೆಚ್ಚು ಕಾಲ ಕೆಲಸ ಮಾಡಿದ ದಾದಾರ ಜೊತೆ ಒಡನಾಡುವ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ.

ನಾನು ಸಾಮಾಜಿಕ ಪ್ರಜ್ಞೆ, ನೈತಿಕತೆ, ಸರಳತೆ, ವಿನಮ್ರತೆ ಬೆಳೆಸಿಕೊಳ್ಳಲು ಮತ್ತು ಈ ಮೌಲ್ಯಗಳ ಪ್ರಸ್ತುತತೆಯ ಬಗ್ಗೆ ನಂಬಿಕೆ ಹೆಚ್ಚಲು ದಾದಾರವರ ಒಡನಾಟ ಮತ್ತು ಜನಪದ ಸೇವಾ ಟ್ರಸ್ಟ್ ಕಾರಣವಾಗಿದೆ.

ಚಿರ ತರುಣರಾಗಿದ್ದ ಸುರೇಂದ್ರ ಕೌಲಗಿ

– ಸಿ.ಎಸ್ ಜನಾರ್ಧನ, ಮೈಸೂರು

ದಾದಾರವರ ವೈಷಿಷ್ಟ್ಯ ಅಂದರೆ ಸಮಾಜದ ಅಂದಂದಿನ ಅಗತ್ಯಗಳನ್ನು ಮನಗಂಡು ಕಾರ್ಯಪ್ರವೃತ್ತರಾಗುವುದು. ಕರುಣಾಗೃಹ ಇರಬಹುದು, ಶಿಶಿವಿಹಾರ ಇರಬಹುದು, ಮಗ್ಗದ ಕೆಲಸ, ಹಸಿರು ಕ್ರಾಂತಿ , ಸಾವಯವ ಕೃಷಿ ಹೀಗೆ ಎಲ್ಲದರಲ್ಲೂ ತೊಡಗಿಸಿಕೊಂಡರು. ತಮ್ಮ ನಿಲುವುಗಳನ್ನೇ ನಿರಂತರ ಒರೆಗೆ ಹಚ್ಚುತ್ತಾ, ಬದಲಾವಣೆಗೆ ತೆರೆದುಕೊಳ್ಳುತ್ತಾ, ಜಂಗಮನಾಗಿ ನನಗೆ ಕಂಡವರು ದಾದಾ. ಸರ್ವೋದಯ ಚಳುವಳಿ, ಹಳ್ಳಿಗರೊಂದಿಗೆ ಬೆರೆಯುವುದು, ಎಲ್ಲ ವಿಷಯಗಳನ್ನು ತಾತ್ವಿಕ ತಳಹದಿಯ ಮೇಲೆ ಒರೆಗೆ ಹಚ್ಚುವುದು ದಾದಾರ ಅಭ್ಯಾಸ. ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಓದಿದರೆ, ಕೊನೆಯವರೆಗೂ ಅವರು ಉಳಿಸಿಕೊಂಡು ಬಂದ ಪ್ರಶ್ನಿಸುವ ಮನಸ್ಥಿತಿಯ ಅರಿವಾಗುತ್ತದೆ. ಎಲ್ಲವನ್ನು ಬೆಸೆಯುತ್ತಿದ್ದುದು ಸ್ವಾವಲಂಬನೆ, ಗ್ರಾಮ ಸ್ವರಾಜ್ಯದ ದ್ಯೋತಕವಾದ ಖಾದಿ. ತಾವು ಖಾದಿ ತೊಟ್ಟದ್ದಲ್ಲದೆ ಎಲ್ಲರಿಗೂ ತೊಡಿಸಿದರು. ನಂಬಿದ ಹಾದಿಯಲ್ಲಿ ನಡೆಯಲು ಇತರರಿಗೆ ಸ್ಫೂರ್ತಿಯಾದರು.

ಇಂದಿನ ಪೀಳಿಗೆಯ ನಮ್ಮೊಡನೆ ಅವರು ಸಮಾನಸ್ಕರಾಗಿ ಬೆರೆತರು. ಅವರು ಪ್ರತಿಯೊಬ್ಬನಲ್ಲೂ ತೋರುತ್ತಿದ್ದ ಪ್ರೀತಿ, ಅದರಣೆ, ಕೊಡುತ್ತಿದ್ದ ಗೌರವ; ಇವು ಇಷ್ಟೆಲ್ಲವನ್ನೂ ಸಾಧಿಸಿ, ಏನನ್ನೂ ಹಚ್ಚಿಕೊಳ್ಳದ ಸಂತನಂತೆ ಬಾಳಿದ ದಾನಾನಂತವರಿಗೆ ಮಾತ್ರ ಸಾಧ್ಯ. ಯುವಕರು ಮಾಡಿದ ಪುಟ್ಟ ಪುಟ್ಟ ಕೆಲಸಗಳನ್ನು ದೊಡ್ಡದಾಗಿ ಹೊಗಳುತ್ತಾ, ಬೆನ್ನುತಟ್ಟುತ್ತಾ ಮುಂದಿನ ಹೆಜ್ಜೆಗೆ ಉತ್ತೇಜಿಸುತ್ತಿದ್ದ ರೀತಿ, ಮನುಷ್ಯನ ಚೈತನ್ಯದ ರಹಸ್ಯವನ್ನು ಬುಡಮಟ್ಟ ಅರ್ಥಮಾಡಿಕೊಂಡಿದ್ದರೆಂಬುದಕ್ಕೆ ಸಾಕ್ಷಿ. ಯುವಕರನ್ನು ಸಮಾಜಮುಖಿ ಕೆಲಸಕ್ಕೆ ಪ್ರೇರೇಪಿಸುವುದು, ಅವರೊಡನೆ ವಿಚಾರ ವಿನಿಮಯ ಮಾಡಿಕೊಳ್ಳುವುದು ಇತ್ತೀಚಿನ ದಿನಗಳಲ್ಲಿ ಅವರ ಬಹು ಮುಖ್ಯ ಧ್ಯೇಯವಾಗಿತ್ತು. ಸಮಾಜ, ರಾಜಕೀಯ ಚಿಂತನೆ, ಇವು ಹೊರಳು ದಾರಿಯಲ್ಲಿದ್ದಾಗ ತಮ್ಮ ಅಭಿಪ್ರಾಯಗಳನ್ನು ಬಹಳ ಸ್ಪಷ್ಟವಾಗಿ ಮಂಡಿಸಿ, ಸೈಧ್ಧಾಂತಿಕ ಚಿಂತನೆಗಳಲ್ಲಿ ಸ್ಪಷ್ಟತೆ ತರಲು ಪ್ರಯತ್ನಿಸುತ್ತಿದ್ದರು. ಇತ್ತೀಚಿನ ವರ್ಷಗಳಲ್ಲಿ ರಾಜಕೀಯ ಧೃವೀಕರಣ ತನ್ನ ಪರಾಕಾಷ್ಟೆಯನ್ನು ಮುಟ್ಟಿರುವಾಗ, ಪ್ರಬಲ ಸರ್ಕಾರಗಳು ಇದ್ದಾಗ ಕೂಡ ತಮ್ಮ ಚಿಂತನೆಯನ್ನು ಸ್ಪಷ್ಟ ಮಾತುಗಳಲ್ಲಿ ಹೇಳಿದರು. ಇದಕ್ಕೆ ಇತ್ತೀಚಿನ

ಉದಾಹರಣೆಯೆಂದರೆ ಹಿಂದೀ ಹೇರಿಕೆ, ಆರ್ಥಿಕ ನೀತಿ ಇವುಗಳ ಬಗ್ಗೆ ಅವರು ಹಂಚಿಕೊಂಡ ಚಿಂತನೆಗಳು, ಲೇಖನಗಳು.

ದಾದಾರವರ ಗಾಂಧೀವಾದದ ತಳಹದಿ ಬಹಳ ಗಟ್ಟಿಯಾದದ್ದು. ಅದರಿಂದಾಗಿಯೇ ಅವರು ಕಾಲಕಾಲಕ್ಕೆ ತಮ್ಮನ್ನು ಪರೀಕ್ಷೆಗೆ ಒಡ್ಡಿದರು, ತಪ್ಪು ಕಂಡಾಗ ನಿಲುವು ಬದಲಾಯಿಸಿದರು, ನಿಸ್ಪೃಹತೆಯಿಂದ ಸೇವೆಯಲ್ಲಿ ತೊಡಗಿಕೊಂಡರು; ಎಲ್ಲಕ್ಕಿಂತಾ ಹೆಚ್ಚಾಗಿ ಇಡೀ ದೇಶ ಗ್ರಾಮ ಸ್ವರಾಜ್ಯ ಒಂದು ಸುಂದರ ಕನಸು ಎಂದು ಮರಿಯಲೆತ್ನಿಸುತ್ತಿರುವ ಕಾಲದಲ್ಲಿ, ಗ್ರಾಮ ಸ್ವರಾಜ್ಯದ ಅಗತ್ಯ ಎಂದಿಗಿಂತ ಇಂದು ಹೆಚ್ಚಿದೆ ಎಂದು ಹೊಸ ಪ್ರಯತ್ನಗಳನ್ನು ಮಾಡಿದರು. ಜಾನಪದ ಖಾದಿಯ ಕೆಲಸದಲ್ಲಿ ಇಂದು ಹೆಚ್ಚಿರುವ ನೇಯ್ಗೆಯವರ ಸಂಖ್ಯೆ ಈ ಪ್ರಯತ್ನದ ಫಲ.

ನನಗೆ ವೈಯಕ್ತಿಕವಾಗಿ ಬಹಳ ಕಾಡುವುದು ಅವರ ವಿನಯ, ಸರಳತೆ ಮತ್ತು ಸೌಮ್ಯವಾದ ಹಠಮಾರಿತನ. ಕಿರಿಯನಾದ ನನ್ನನ್ನು ಅಷ್ಟೆಲ್ಲ ಗೌರವದಿಂದ ಅವರು ಮಾತನ್ನಾಡಿಸಿದಾಗ ಹೇಳಲಾಗದ ಕಿರಿಕಿರಿ ಅನ್ನಿಸಿದರೂ, ಅವರಿಗೆ ಅದು ಸ್ವಭಾವವೇ ಆಗಿ ಹೋಗಿತ್ತು. ಅವರ ವಿನಯವೇ ನಮಗೆ ಪಾಠ ಹೇಳುತ್ತಿತ್ತು. ಟ್ರಸ್ಟಿನ ಸಭೆಗಳಲ್ಲಿ ಪ್ರಾರ್ಥನೆಯಿಂದ ಹಿಡಿದು ಎಲ್ಲ ಕಲಾಪಗಳು ಔಪಚಾರಿಕವಾಗಿ ನಡೆಯಲೇಬೇಕೆಂಬ ಹಠ (ಮತ್ತು ಶಿಸ್ತು), ಸಾರ್ವಜನಿಕ ಉತ್ತರದಾಯಿತ್ವ ಸಮಾಜಮುಖಿ ಕೆಲ್ಸಗಳಿಗೆ ಎಷ್ಟು ಅಗತ್ಯ ಎಂಬುದನ್ನು ನನಗೆ ತಿಳಿಸಿಕೊಟ್ಟಿತು. ಏನೂ ಬದಲಾವಣೆ ಆಗಲ್ಲ ಎಂಬ ಸಿದ್ಧ ಉತ್ತರ ಎಲ್ಲ ಯುವಕರು, ವಯಸ್ಕರಲ್ಲೂ ಇರುವಾಗ, ಬದಲಾವಣೆ ಆಗೇ ಆಗುತ್ತದೆಂದು ದಾದಾ ನವ ತರುಣನಂತೆ ಭಗೀರಥ ಪ್ರಯತ್ನ ನಡೆಸುತ್ತಲೇ ಇದ್ದರು. ಮೇಲುಕೋಟೆಗೆ ಇನ್ನು ಹೆಚ್ಚು ಬರಬೇಕೆಂದು ಯಾವಾಗಲೂ ಪ್ರೀತಿಯಿಂದ ಒತ್ತಾಯಿಸುತ್ತಿದ್ದರೂ ಹೋಗಲಾಗದ್ದಕ್ಕೆ ಸಿಟ್ಟು ಮಾಡದೆ, ಸಮಾಧಾನದಿಂದಲೇ ಟ್ರಸ್ಟಿನ ಕೆಲಸಗಳಿಗೆ ಇನ್ನೂ ಹೆಚ್ಚಿನ ಸಮಯದ ಅಗತ್ಯವನ್ನು ತಿಳಿಸುತ್ತಿದ್ದರು. ನಾನು ದಾದಾರವರೊಡನೆ ಇದ್ದದ್ದು, ಅವರೊಡನೆ ಕೆಲಸ ಮಾಡಿದ್ದು ಬಹಳ ಕಡಿಮೆ ಸಮಯವಾದರೂ ಸಾರ್ವಜನಿಕ ಕೆಲಸಗಳಲ್ಲಿ ಹೇಗಿರಬೇಕೆಂದು ಅವರಿಂದ ಅರಿತದ್ದು ಬಹಳ; ಸಾಧಕರ ವಿನಯವಂತಿಕೆಯ ಅರ್ಥ ತಿಳಿದದ್ದು, ದಾದಾನಿಂದ. ನಿರಂತರ ಕಾರ್ಯತತ್ಪರರಾಗುವ ಹುಮ್ಮಸ್ಸು ಅವರಿಂದ ನಾವು ಪಡೆದರೆ, ಅದೇ ಅವರಿಗೆ ಶ್ರದ್ಧಾಂಜಲಿ.

ಸರಳ ಜೀವನದ ಹರಿಕಾರ

– ಆನಂದ, ಬೆಂಗಳೂರು

'ನೀವೇಕೆ ಸರ್ಕಾರದಿಂದ ಅನುದಾನ ಪಡೆಯುವುದಿಲ್ಲ?' ನಾನು ಕೇಳಿದೆ ಅವರನ್ನು.

'ನೋಡಿ. ಈಗ ನಾನಯ ಮಕ್ಕಳಿಗೆ ನೀರು ಮಜ್ಜಿಗೆ ಹಾಕಿದರೂ ನಡೆದೀತು. ಆದರೆ ಸರ್ಕಾರದಿಂದ ಅನುದಾನ ಪಡೆದ ಮೇಲೆ ಒಮ್ಮೊಮ್ಮೆ ಅನಿವಾರ್ಯವಾಗಿ ನೀರು ಮಜ್ಜಿಗೆ ಹಾಕಬೇಕಾಗಿ ಬಂದಾಗ ಜನ ಆಗ ಸರ್ಕಾರದ ದುಡ್ಡು ಹೊಡೆದು ಮೊಸರಿನ ಬದಲು ನೀರು ಮಜ್ಜಿಗೆ ಹಾಕುತ್ತಾನೆ ಎಂಬ ಅಪವಾದ ಹೊರಿಸುತ್ತಾರೆ. ಅದನ್ನು ನಾನು ಹೊರಲು ಸಿದ್ಧನಿಲ್ಲ.' ಇದು ಅವರ ಉತ್ತರ ಆಗಿತ್ತು.

ಇದು ಸುಮಾರು ೩೫ ವರ್ಷಗಳ ಹಿಂದಿನ ಸಂಭಾಷಣೆಯ ತುಣುಕು. ಅದು ಕರುಣಾಗೃಹಕ್ಕೆ ಸಂಬಂಧಿಸಿದ್ದಾಗಿತ್ತು.

ಅಂದು ನನ್ನ ಪ್ರಶ್ನೆಗೆ ಉತ್ತರ ನೀಡಿದವರು ಇಂದು ನಮ್ಮನ್ನೆಲ್ಲ ಅಗಲಿರುವ ನಮ್ಮ ನೆಚ್ಚಿನ ದಾದಾ. ಸುರೇಂದ್ರ ಕೌಲಗಿ.

ಈ ೩೫ ವರ್ಷಗಳ ನನ್ನ ಮತ್ತು ದಾದಾರ ಒಡನಾಟದಲ್ಲಿ ಕಂಡು ಬಂದ ಅಂಶವೆಂದರೆ ಅವರು ತಮ್ಮ ಪ್ರಾಮಾಣಿಕತೆಯನ್ನು ಕೊನೆಯವರೆಗೂ ಉಳಿಸಿಕೊಂಡು ಬಂದಿದ್ದು. ಇಂದು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡವರ ಬಹುತೇಕ ಮಂದಿಯಲ್ಲಿ ಎದ್ದು ಕಾಣುವ ಅಂಶವೆಂದರೆ ಪ್ರಾಮಾಣಿಕತೆಯ ಕೊರತೆ. ಆದರೆ ಹಲವು ದಶಕಗಳಿಂದ ಸದ್ದುಗದ್ದಲವಿಲ್ಲದೆ ಈ ಕಾಯಕದಲ್ಲಿ ತೊಡಗಿಸಿಕೊಂಡಿದ್ದ ಸುರೇಂದ್ರ ಕೌಲಗಿ ಈ ವಿಷಯದಲ್ಲಿ ಅಪಚಾರ ಮಾಡಲಿಲ್ಲ. ತಮ್ಮನ್ನು ನಂಬಿದವರಲ್ಲಿ ನಿರಾಸೆ ಮೂಡಿಸಲಿಲ್ಲ. ಅವರು ತೊಡುತ್ತಿದ್ದ ಶುಭ್ರ ಖಾದಿ ಉಡುಪು ಕೊನೆಯುವರೆಗೂ ಶುಭ್ರವಾಗಿಯೇ ಉಳಿಯಿತು. ಮಲಿನಗೊಳ್ಳಲಿಲ್ಲ, ಮಲಿನಗೊಳ್ಳಲು ಅವರು ಬಿಡಲಿಲ್ಲ.

ಸುರೇಂದ್ರ ಕೌಲಗಿ ಅವರದ್ದು ಎದ್ದು ಕಾಣುವ ವ್ಯಕ್ತಿತ್ವ, ಮುಖದಲ್ಲಿ ತೇಜಸ್ಸು. ಮಾತಿನಲ್ಲಿ ನಯ–ವಿನಯ. ಸಜ್ಜನಿಕೆ, ಸೌಜನ್ಯ. ದನಿ ಏರಿಸಿ ಮಾತನಾಡುವವರಲ್ಲ. ಅದರ ಅವಶ್ಯಕತೆಯೂ ಇರಲಿಲ್ಲ. ಏಕೆಂದರೆ ಅವರು ಮಾತನಾಡತೊಡಗಿದರೆ ದನಿ ಬರುತ್ತಿದುದು ಬಾಯಿಂದ ಅಲ್ಲ. ಹೃದಯದಿಂದ,

ಮನದಾಳದಿಂದ. ಅನುಭವದಿಂದ. ಕೇಳುಗರನ್ನು ಹಿಡಿದಿಟ್ಟುಕೊಳ್ಳುವಂತಹ ವ್ಯಕ್ತಿತ್ವ ಅವರದ್ದು.

ಅವರ ಜೀವಿತಾವಧಿಯಲ್ಲಿ ಅವರ ಸುತ್ತಮುತ್ತಣ ಬದಲಾಗತೊಡಗಿತ್ತು. ಜನಗಳು ಬದಲಾಗತೊಡಗಿದ್ದರು. ಆದರ್ಶಗಳು ಬದಲಾಗುತ್ತಿದ್ದವು ಮತ್ತು ಅಥವಾ ಕಣ್ಮರೆಯಾಗುತ್ತಿದ್ದವು. ಸೇವೆಯ ಸೋಗಿನಲ್ಲಿ ಸ್ವಾರ್ಥವನ್ನು ಪೋಷಿಸುವವರೇ ಹೆಚ್ಚು ಕಾಣುತ್ತಿದ್ದರು. ಬದ್ಧತೆ ಕಡಿಮೆಯಾಗುತ್ತಿತ್ತು. ಆದರೆ ಸುರೇಂದ್ರ ಕೌಲಗಿ ಬದಲಾಗಲಿಲ್ಲ. ಗಾಂಧಿ, ಜೆಪಿ, ವಿನೋಬಾ ಅವರುಗಳ ಶಿಷ್ಯರಾಗಿಯೇ ಉಳಿದರು. ಬೆಳೆದರು. ಸಮೀಪದ ಮೈಸೂರು ಇರಲಿ, ಹತ್ತಿರದ ಮಂಡ್ಯ ಸಹ ಅವರನ್ನು ಆಕರ್ಷಿಸಲಿಲ್ಲ. ಮೇಲುಕೋಟೆಯೇ ಅವರ ಕರ್ಮಭೂಮಿಯಾಗಿ ಉಳಿಯಿತು. ಸರಳಜೀವನದ ಹರಿಕಾರನಾಗಿಯೇ ಕೊನೆಯವರೆಗೂ ಬದುಕು ಸಾಗಿಸಿದರು. ಮೇಲುಕೋಟೆಯ ಮಣ್ಣಿನಲ್ಲಿ ಬೆರೆತುಹೋದರು. ಈ ಶತಮಾನದ ಹತ್ತು ಹಲವಾರು ಪ್ರಲೋಭನೆಗಳ ಮಧ್ಯೆಯೂ ಅವರು ಸ್ಥಿತಪ್ರಜ್ಞನಾಗಿ ಉಳಿಯಲು ಸಾಧ್ಯ ಎಂದು ಸಾಧಿಸಿ ತೋರಿಸಿದರು.

ಇಂದು ಸುರೇಂದ್ರ ಕೌಲಗಿ ನಮ್ಮೊಡನಿಲ್ಲ. ಈಗಾಗಲೇ ಅವರು ತಮ್ಮ ಗುರುಗಳಾದ ಗಾಂಧಿ, ವಿನೋಬ, ಜೆಪಿ ಅವರಿಗೆ ಅಲ್ಲಿ ಮೇಲೆ ಭಾರತದ ದುಸ್ಥಿತಿಯ ಬಗ್ಗೆ ಕಳವಳಕಾರಿ ವರದಿ ನೀಡಿರಲೂಬಹುದು. ತಾವು ಮರಳಿ ಹೋಗಿ ಬದಲಾವಣೆಗೆ ಶ್ರಮಿಸಿ ಎಂದು ಅವರಿಗೆ ಮನವರಿಕೆ ಮಾಡಲು ಹೋಗಿ ಹಿಂಜರಿದಿರಬಹುದು. ಏಕೆಂದರೆ ಪರಿಸ್ಥಿತಿ ಪ್ರಕ್ಷುಬ್ಧ ಎಂದು ಅವರಿಗೂ ಗೊತ್ತಿತ್ತು. ಈ ದುಗುಡದಲ್ಲೇ ಅವರು ನಿರ್ಗಮಿಸಿರಬಹುದೆ?

ಮೇಲುಕೋಟೆಯಲ್ಲಿ ಎಷ್ಟು ಮಂದಿ ಆದರ್ಶವಾದಿಗಳಿದ್ದಾರೆಯೋ ಗೊತ್ತಿಲ್ಲ. ಆದರೆ ಅಗ್ರಪಂಕ್ತಿಯಲ್ಲಿದ್ದ ಒಬ್ಬ ಗಾಂಧೀವಾದಿ ಮೇಲುಕೋಟೆಯಿಂದ ಮೇಲೇರಿ ಹೋಗಿದ್ದಾರೆ.

ಅದೊಂದು ಅದ್ಭುತ ಅನುಭವ!

-ಎಚ್ ಎಸ್ ಸುರೇಶ್, ಬೆಂಗಳೂರು

ದಿನಾಂಕ: ೨೮ ನವೆಂಬರ್ ೨೦೧೪: ಸ್ಥಳ: ಮುಂಬಯಿಯ ರಾಷ್ಟ್ರೀಯ ಪ್ರದರ್ಶಕ ಕಲೆಗಳ ಕೇಂದ್ರದಲ್ಲಿನ ಜೇಮ್ ಶೇಠ್ ಜಿ ಸಭಾಂಗಣ

ಸಂದರ್ಭ: ಜಮ್ನಾಲಾಲ್ ಬಜಾಜ್‌ರ ೧೨೫ನೇ ಜನ್ಮದಿನ ಮತ್ತು ೨೦೧೪ರ ಜಮ್ನಾಲಾಲ್ ಬಜಾಜ್ ಪ್ರತಿಷ್ಠಾನದ ೩೭ನೇ ಪ್ರಶಸ್ತಿ ಪ್ರದಾನ ಸಮಾರಂಭ.

ಮುಖ್ಯ ಅತಿಥಿ :ನೋಬಲ್ ಪ್ರಶಸ್ತಿ ಪುರಸ್ಕೃತ ಶ್ರೀ ಕೈಲಾಶ್ ಸತ್ಯಾರ್ಥಿ.

ನವೆಂಬರ್ ಚುಮುಚುಮು ಚಳಿಯೊಂದಿಗೆ ಕಡಲ ತೀರದ ಬೆಚ್ಚಗಿನ ಗಾಳಿ ಆ ಐತಿಹಾಸಿಕ ಸಮಾರಂಭದ ವಾತಾವರಣಕ್ಕೆ ಮತ್ತಷ್ಟು ಮುದು ನೀಡಿತ್ತು.

ಕರ್ನಾಟಕದಿಂದ ಈ ಸಮಾರಂಭದಲ್ಲಿ ಪಾಲುಗೊಳ್ಳಲು ಬಂದವರಲ್ಲಿ ಶ್ರೀ ಕೌಲಗಿಯವರ ಕುಟುಂಬದ ಐದಾರು ಜನರನ್ನ ಹೊರತು ಪಡಿಸಿ, ನಾನು, ಶ್ರೀ ಎಂ. ಚಂದ್ರಶೇಖರ್ ಪ್ರತಿಷ್ಠಾನದ ಶ್ರೀ ಎಂ ಸಿ ನರೇಂದ್ರ ಮತ್ತು ಗಾಂಧೀ ಮಾರ್ಗಕ್ಕೆ ಪರಿವರ್ತಿತರಾದ ಮುಂಬಯಿಯ ಮಾಜಿ ಖೈದಿ ಲಕ್ಷ್ಮಣ್ ಗೋಲೆ, ಈ ಅಭೂತಪೂರ್ವ ಸಂತಸದ ಕ್ಷಣಗಳಿಗೆ ಸಾಕ್ಷಿಯಾಗಿದ್ದೆವು. ಅದೊಂದು ಅದ್ಭುತ ಅನುಭವ.!

'ಬಜಾಜ್ ಬಳಗ' ಅದರ ಸಂಸ್ಥಾಪಕ, ಗಾಂಧೀ ಸಹಚರ ದಿವಂಗತ ಜಮ್ನಾಲಾಲ್ ಬಜಾಜ್ ಪ್ರತಿಷ್ಠಾನದ ಹೆಸರಿನಲ್ಲಿ ಕೊಡಮಾಡುವ ೩೭ನೇ ವಾರ್ಷಿಕ ಪುರಸ್ಕಾರಗಳನ್ನು ಪ್ರದಾನ ಮಾಡಿದವರು ನೋಬೆಲ್ ಪ್ರಶಸ್ತಿ ಪುರಸ್ಕೃತ ಶ್ರೀ ಕೈಲಾಶ್ ಸತ್ಯಾರ್ಥಿಯವರು. ಗಾಂಧೀ ಪ್ರಣೀತ ರಚನಾತ್ಮಕ ಕಾರ್ಯಕ್ರಮ ವಿಭಾಗದಿಂದ ಈವರೆಗೆ ಪುರಸ್ಕೃತವಾಗಿರುವ ಕನ್ನಡಿಗರಲ್ಲಿ (ತಗಡೂರು ರಾಮಚಂದ್ರರಾವ್ ೧೯೮೩)ಶ್ರೀ ಎಸ್. ಎನ್. ಸುಬ್ಬರಾವ್ (೨೦೦೬) ಶ್ರೀ ಸುರೇಂದ್ರ ಕೌಲಗಿಯವರು (೨೦೧೪)ಮೂರನೆಯವರು.

ಹತ್ತು ಲಕ್ಷ ರೂಗಳ ಧನರಾಶಿ ಹಾಗೂ ಪ್ರಶಸ್ತಿ ಫಲಕಗಳನ್ನು ಒಳಗೊಂಡ ಈ ವಾರ್ಷಿಕ ಪ್ರಶಸ್ತಿಯನ್ನು 'ಬಜಾಜ್ ಬಳಗ' ಗಾಂಧೀ ವಿಚಾರಧಾರಿತವಾಗಿ ಗಣನೀಯ-ಮನನೀಯ ಸಾಧನೆ ಮಾಡಿರುವವರನ್ನು ನಾಲ್ಕು ಕ್ಷೇತ್ರಗಳಲ್ಲಿ ಗುರುತಿಸಿ ಗೌರವಿಸುತ್ತದೆ. ೨೦೧೪ ರ ಸಾಲಿನಲ್ಲಿ ಗ್ರಾಮೀಣ ವಿಜ್ಞಾನ ಮತ್ತು

ತಂತ್ರಜ್ಞಾನ ಕ್ಷೇತ್ರದಲ್ಲಿನ ಅನುಪಮ ಸಾಧನೆಗಾಗಿ ಶ್ರೀ ರಾಮ್‌ಕುಮಾರ್ ಸಿಂಘ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಶ್ರೀಮತಿ ಚೆನ್ನುಪಟಿ ವಿದ್ಯಾ ಮತ್ತು ಅಂತರರಾಷ್ಟ್ರೀಯ ಅರಿವು ಮತ್ತು ಸದ್ಭಾವನೆಗಾಗಿ ಥೈಲ್ಯಾಂಡ್‌ನ ಶ್ರೀ ಸುಲಕ್ ಶಿವರಕ್ಷಾ ಭಾಜನರಾದರು.

ಆಯ್ದ ಆಹ್ವಾನಿತರಿಂದ ಭರ್ತಿಯಾಗಿದ್ದ ಸಭಾಭವನದಲ್ಲಿ ನಡೆದ ೬೦ ನಿಮಿಷಗಳ ಈ ಶಿಸ್ತು ಬದ್ಧ ಕಾರ್ಯಕ್ರಮದಲ್ಲಿ ನಾಲ್ವರೂ ಸಾಧಕರ ೫ ನಿಮಿಷಗಳ ಕಿರುಚಿತ್ರ ಪ್ರದರ್ಶಿಸಲಾಯಿತು. ಸನ್ಮಾನಿತರಿಗೆ ಮಾತನಾಡಲು ಐದು ನಿಮಿಷಗಳ ಅವಕಾಶವಿದ್ದಿತು.

ನಂತರ ನಡೆದ ಔತಣಕೂಟದ ಸಮಯದಲ್ಲಿ ಶ್ರೀ ಸುರೇಂದ್ರ ಕೌಲಗಿಯವರೊಂದಿಗೆ ಮಾತನಾಡುತ್ತಿದ್ದ ಶ್ರೀ ಕೈಲಾಶ್ ಸತ್ಯಾರ್ಥಿ ಮೇಲುಕೋಟೆಗೆ ಬರುವ ತಮ್ಮ ಆಶಯವನ್ನು ಹೇಳಿಕೊಂಡಿದ್ದರು.

ನನಗೆ ಶ್ರೀ ಕೌಲಗಿಯವರು ಪರಿಚಯವಾದದ್ದು ೧೯೭೭ ರಲ್ಲಿ. ಮಂಡ್ಯ ನೆಹರು ಯುವಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಜನಪದ ಸೇವಾಟ್ರಸ್ಟಿನ ಸಹಯೋಗದಲ್ಲಿ ಹಲವಾರು ಯುವ ತರಬೇತಿ ಶಿಬಿರಗಳನ್ನು ನಡೆಸಿದ್ದೆ. ಅಲ್ಲಿ ನಡೆಯುತ್ತಿದ್ದ ಹಲವಾರು ಎನ್.ಎಸ್.ಎಸ್. ಮತ್ತು ಇತರ ಶಿಬಿರಗಳಿಗೆ ನಾನು ಭೇಟಿ ನೀಡುತ್ತಿದ್ದೆ. ಅವರ ತರ್ಕಬದ್ಧ ವಿಚಾರಗಳಿಂದ ಆಕರ್ಷಿತನಾಗುತ್ತಿದ್ದೆ.

ಶ್ರೀ ಕೌಲಗಿಯವರ ಸಂಪಾದಕತ್ವದಲ್ಲಿ ಪ್ರಕಟಿಸಲಾಗುತ್ತಿದ್ದ 'ಜನಪದ ವಿಚಾರ' ತಿಂಗಳ ವೈಚಾರಿಕ ಡೈಜೆಸ್ಟ್ ಇದೀಗ ೧೮ನೇ ವರ್ಷಕ್ಕೆ ಪಾದರ್ಪಣೆ ಮಾಡುತ್ತಿದೆ. 'ಚಿಂತನ, ದರ್ಶನ, ವಿಮರ್ಶನ' ಪತ್ರಿಕೆಯ ಮೂರು ಮಾರ್ಗದರ್ಶಿ ತತ್ವಗಳಾಗಿದ್ದು ಇಲ್ಲಿನ ಲೇಖನಗಳು ಪ್ರಬುದ್ಧವೂ ವಿಚಾರ ಪೂರ್ಣವೂ ಆಗಿದ್ದು ಓದುಗರಿಗೆ ಬೌದ್ಧಿಕ ಕಸರತ್ತು ಒದಗಿಸುತ್ತದೆ. ಸರಕಾರಗಳು ತೆಗೆದುಕೊಳ್ಳುವ ಆಡಳಿತಾತ್ಮಕ ಅಥವಾ ರಾಜಕೀಯ ನಿರ್ಧಾರಗಳು ವ್ಯಕ್ತಿ ಮತ್ತು ಸಮುದಾಯಗಳ ಬದುಕನ್ನು ಹಸನು ಗೊಳಿಸುವಲ್ಲಿ ಎಷ್ಟರ ಮಟ್ಟಿಗೆ ಹತ್ತಿರ ಅಥವಾ ದೂರವಾಗಿದೆ ಎಂಬುದನ್ನು ತಮ್ಮ ಹಲವಾರು ಹರಿತ ಲೇಖನಗಳಲ್ಲಿ ಸಂಪಾದಕೀಯದಲ್ಲಿ ವ್ಯಕ್ತಪಡಿಸಿದ್ದಾರೆ.

'ಪ್ರಚಾರ' ಅವರಿಗೆ ಹಿಡಿಸದು. ಸುಮಾರು ೨೫ ವರ್ಷಗಳ ಹಿಂದೆ ಅಹಮದಾಬಾದಿನಲ್ಲಿ ನಾನಿದ್ದ ದಿನಗಳು. ಅಪಾರ್ಟ್‌ಮೆಂಟಿನ ಬಾಲ್ಕನಿಗೆ ಬಂದರೆ ಧಾರವಾಡ ಆಕಾಶವಾಣಿಯ ಪ್ರದೇಶ ಸಮಾಚಾರ ಕ್ಷೀಣವಾಗಿ ಬಿಟ್ಟು ಬಿಟ್ಟು ಕೇಳಿಸುತ್ತಿತ್ತು. ಒಂದು ದಿನ ಸುರೇಂದ್ರ ಕೌಲಗಿಯವರಿಗೆ ರಾಜ್ಯಪ್ರಶಸ್ತಿ ನೀಡಲಿರುವ ಸುದ್ದಿ ಕೇಳಿ ಬಂದಿತು. ಅಭಿನಂದಿಸಲು ಅವರನ್ನು ಸಂಪರ್ಕಿಸಿದಾಗ,

ಹೌದಾ! ನನಗೆ ಅದರಲ್ಲಿ ಆಸಕ್ತಿ ಇಲ್ಲ, ನನಗೆ ಬೇಡ ಮತ್ತು ನನ್ನ ನಿರಾಕರಣೆಯ ಸುದ್ಧಿಯೂ ಪ್ರಕಟವಾಗುವುದು ಬೇಡ ಅಂತ ಸಂಬಂಧಿಸಿದ ಅಧಿಕಾರಿಗಳಿಗೆ ಸ್ಪಷ್ಟವಾಗಿ ಹೇಳಿದ್ದೆನಲ್ಲ ಅಂದರು ಆ ಪ್ರಶಸ್ತಿಯನ್ನು ಸ್ವೀಕರಿಸಲೂ ಇಲ್ಲ.

ಜನವರಿ ೨೦೦೬ ರ ಒಂದು ದಿನ ದೂರದರ್ಶನದ ಚಂದನವಾಹಿನಿಯ ಸಂದರ್ಶಕಿ ಶ್ರೀಮತಿ ವೀಣಾ ಶರತ್ ಸರ್ವೋದಯ ದಿನದ ಬೆಳಗ್ಗೆ ೭ ರ 'ಬೆಳಗು' ಕಾರ್ಯಕ್ರಮದಲ್ಲಿ ನೇರ ಪ್ರಸಾರದ ಸಂದರ್ಶನಕ್ಕೆ ಬರುವಂತೆ ನನ್ನನ್ನು ಕೇಳಿದರು. ಶ್ರೀ ಸುರೇಂದ್ರ ಕೌಲಗಿ ಯವರು ಇದಕ್ಕೆ ಸೂಕ್ತ ಅತಿಥಿಗಳು ಎಂದೇ 'ಅವರನ್ನು ಒಪ್ಪಿಸಲು ಸಾಧ್ಯವಾಗಲಿಲ್ಲ' ಆದರೆ ನಿಮ್ಮನ್ನು ಅವರೇ ಸೂಚಿಸಿದರು' ಎಂದರು.

'ಎಲೆ ಮರೆಯ ಕಾಯಿ' ಶ್ರೀ ಕೌಲಗಿಯವರಂಥಹಾ ಸೇವಾವ್ರತಿಗಳ ಉದಾಹರಣೆ ಬಹಳ ವಿರಳ.

ಸರ್ವೋದಯಿ ಸುರೇಂದ್ರ ಕೌಲಗಿ

–ಜಾನಕಿ ಶೇಷಾದ್ರಿ, ಮೈಸೂರು

ಒಂದು ನದಿಗೆ ಒಂದು ಕಡೆ ಉಗಮಸ್ಥಾನ. ಅಲ್ಲಿಂದ ಅದು ಯಾವ ಕಡೆ ಹರಿಯುತ್ತದೆ. ಅದರುದ್ದಕ್ಕೂ ತನ್ನನ್ನು ತಾನು ಪರಿಚಯಿಸಿಕೊಂಡಂತೆ, ತನ್ನ ಇಕ್ಕಡೆಗಳಿಂದ ತಂಪನ್ನೆರೆಯುತ್ತಾ, ಫಲವಾಗಿಸುತ್ತಾ, ಜೀವ ನೀಡುತ್ತಾ, ಕೊನೆಗೆ ಸಾಗರವನ್ನು ಸೇರುವುದು.

ಅಂತೆಯೇ ಮಾನವನ ಬದುಕೂ ಸಹ, ಹುಟ್ಟೂರು ಒಂದು, ಬೆಳೆಯುವುದು ಮತ್ತೊಂದು, ಜೀವನವನ್ನು ಕಳೆಯುವುದು ಮಗದೊಂದು, ಕೊನೆಗೊಂದು ದಿನ ಈ ಪ್ರಕೃತಿಗೇ ಸೇರಿಬಿಡುವುದು.

ನದಿ ಹೇಗೆ ತಾನು ಗುರುತು ಪರಿಚಯವಿಲ್ಲದ ಸ್ಥಳದಲ್ಲಿ ಸ್ವಚ್ಛಂಧವಾಗಿ ತಾನಾಗಿ ಹರಿಯುತ್ತದೋ ಅಂತೆಯೇ ಮಾನವನು ಹುಟ್ಟೂರನ್ನು ತ್ಯಜಿಸಿ ತನ್ನ ವಿಚಾರಧಾರೆಗಳು ಯಾವ ಕಡೆಗೆ ಹರಿಯುವುದೋ, ಅದರ ಕಡೆ ತಾನು ದಾಪುಗಾಲು ಹಾಕುತ್ತಾ ನಡೆಯುತ್ತಾನೆ, ದೃಢವಾಗಿ ನಿಲ್ಲುತ್ತಾನೆ, ಕಾರ್ಯತತ್ಪರನಾಗುತ್ತಾನೆ, ಗುರಿ ಸಾಧನೆಯ ಕಡೆಗೆ ತನ್ನನ್ನು ತಾನು ನೆಲೆಸಿಕೊಳ್ಳಲು ಖಚಿತಪಡಿಸಿಕೊಳ್ಳುತ್ತಾನೆ. ಸದಾ ಕಾರ್ಯತತ್ಪರನಾಗುತ್ತಾನೆ.

ಹೀಗೆಲ್ಲಾ ಏಕೆ ಬರೆಯುತ್ತಿದ್ದೇನೆ ಎಂದರೆ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕರ ಬದುಕು ಹೀಗೆಯೇ ಆಗಿಬಿಟ್ಟಿದೆ. ಇಂತಹ ಅನೇಕ ದೇಶ ಭಕ್ತರಲ್ಲಿ ನಮ್ಮವರೇ ಆದ, ನನ್ನ ಗುರುವೂ ಆದ, ಶ್ರೀಯುತ ಸುರೇಂದ್ರ ಕೌಲಗಿಯವರು ಒಬ್ಬರು. ಈಗ ೮೨-೮೩ ವರ್ಷಗಳ ಹಿಂದೆ ಇಡೀ ದೇಶದ ಮನೆಮನೆಯಲ್ಲಿಯೂ, ಹಗಲಾದರೆ ದೇಶದ ಉಳಿವಿಗಾಗಿ, ದೇಶದ ಸ್ವಾತಂತ್ರಕ್ಕಾಗಿ, ಮಾತುಕತೆಗಳು- ಚಿಂತನೆಗಳು-ಹಾಡು-ಲಾವಣಿ-ನಾಟಕ ಗಾಂಧಿಯವರ ವಿಚಾರ ಧಾರೆಗಳು ನಡೆಯುತ್ತಲೇ ಇದ್ದವು. ಗಾಂಧೀಯವರ ದರ್ಶನಕ್ಕೆ ಹಾತೊರೆಯುವುದು ಸರ್ವೆಸಾಮಾನ್ಯವಾಗಿತ್ತು. ಅವರ ವಿಚಾರಕ್ಕೆ ಎಷ್ಟೋ ಯುವ ಶಕ್ತಿಗಳು ಮನೆ ಮಠವನ್ನು ಬಿಟ್ಟು ಬೀದಿಗಿಳಿದು ದೇಶಕ್ಕಾಗಿ ತಮ್ಮ ಬದುಕನ್ನು ಮುಡಿಪಿಟ್ಟು ಹೋರಾಡುವುದು ಸರ್ವೆಸಾಮಾನ್ಯವಾದ ಕಾಲಘಟ್ಟವಾಗಿತ್ತು.

ಇದೇ ಕಾಲಘಟ್ಟದಲ್ಲಿ ಗಾಂಧೀ ವಿಚಾರದಿಂದ ಪ್ರೇರಿತರಾದ ಸುರೇಂದ್ರ ಕೌಲಗಿಯವರು ಮನೆಯನ್ನು, ಮನೆಯವರನ್ನು ಬಿಟ್ಟು ಬಂದಾಗ ಅವರಿಗೆ

ಆಸರೆಯಾದವರು ಜಯಪ್ರಕಾಶ್ ನಾರಾಯಣ್ ದಂಪತಿಗಳು.

ಹುಡುಗನ ಮುಖದ ಆಕರ್ಷಣೆ, ಮಾತಿನಲ್ಲಿ ದೃಢವಾಧ ದೇಶಭಕ್ತಿಯ ನಿಲುವು, ಅವರ ಕಾರ್ಯವೈಖರಿ ಎಲ್ಲವನ್ನೂ ಗಮನಿಸಿದ ಜಯಪ್ರಕಾಶ್‌ನಾರಾಯಣ್ ಇವರ ಭಾವನೆಗಳಿಗೆ ಎರಕ ಹೊಯ್ದದ್ದು. ಹಾಗೇಯೆ ಸರ್ವೋದಯ ವಿಚಾರಗಳನ್ನು ತುಂಬಿದ್ದು. ಸರ್ವರೂ ಬೆಳಕನ್ನು ಕಾಣಬೇಕು ಸರ್ವರೂ ಸರ್ವರನ್ನೂ ರಕ್ಷಿಸುವಂತಾಗಬೇಕು, ಸರ್ವರೂ ಸರ್ವರಿಗಾಗಿ ಬದುಕಬೇಕು. ಹಸಿವು–ಬಾಯಾರಿಕೆ, ರೋಗ–ರುಜಿನ, ಜ್ಞಾನ–ಅಜ್ಞಾನ, ಬಡತನ–ಸಿರಿತನ, ವಿದ್ಯಾವಂತ–ಅವಿದ್ಯಾವಂತ, ಇದರಲ್ಲಿ ತಾರತಮ್ಯತೆ ಕೂಡದು ಎಲ್ಲರೂ ಸಮಾನವಾದ ಬದುಕನ್ನು ಬದುಕುವ ರೀತಿಯನ್ನು ಮನಗಾಣುವಂತೆ ಮಾಡಬೇಕು. ಇವುಗಳಿಗೆ ಆಸ್ಪದವನ್ನು ಕೊಡದೆ ಸರ್ವರೂ ಭಾರತಾಂಬೆಯ ಮಡಿಲ ಮಕ್ಕಳೆಂದು ಮುದದಿಂದ ಬಾಳುವಂತಾಗಬೇಕು. ಭಾರತಕ್ಕೆ ಸಿಗುವ ಸ್ವಾತಂತ್ರ್ಯ ಜಗತ್ತಿನ ಪ್ರತಿಯೊಂದು ದೇಶಗಳ ಶಾಂತಿ ಸೌಹಾರ್ದತೆ ಸಂಕೇತವಾಗಿ ಬೆಳೆಯಬೇಕು ನಮ್ಮ ಸನಾತನ ಧರ್ಮದ “ಸರ್ವೇ ಜನಾಃ ಸುಖಿನೋ ಭವಂಥೂ” ಈ ಉಲ್ಲೇಖವನ್ನು ನಿಜವಾಗಿಸಬೇಕೆಂದು ಈ ಪುಟ್ಟ ಯುವಕನ ತಲೆಗೆ ಚಿಂತಿಸುವಂತೆ ಮಾಡಿತು. ಅವರ ಜೊತೆ ಜೊತೆಯಲ್ಲಿ ಕೆಲಸ ಮಾಡುತ್ತಾ, ಅವರ ವಿಚಾರಧಾರೆಗಳಿಗೆ ಮನಸೋತ ವ್ಯಕ್ತಿ. ವ್ಯಕ್ತಿ ಮತ್ತು ಸಮಾಜ ಇವೆರಡು ಒಂದೇ ನಾಣ್ಯದ ಎರಡು ಮುಖಗಳಂತೆ ಯಾವ ವ್ಯಕ್ತಿ ಸಮಾಜದ ಬಗ್ಗೆ ಚಿಂತಿಸುತ್ತಾನೋ ಆಗ ಅವನು ಸಮಾಜ ಚಿಂತಕನಾಗುತ್ತಾನೆ. ಅ ಚಿಂತನೆಯನ್ನು ಕಾರ್ಯರೂಪಕ್ಕೆ ತಂದಾಗ ಆತ ಉತ್ತಮ ಸಮಾಜ ಸುಧಾರಕನಾಗುತ್ತಾನೆ. ಇಂತಹ ಒಂದು ವಿಚಾರಕ್ಕೆ ಕೌಲಗಿಯವರನ್ನು ಉದಾಹರಿಸಬಹುದು.

ಸುರೇಂದ್ರ ಕೌಲಗಿಯುವರು ಜೆ.ಪಿ ಯವರೊಡನೆ ಕರ್ನಾಟಕಕ್ಕೆ ಕಾರ್ಯಕ್ರಮಗಳಿಗೆ ಬಂದಾಗ ಜೆ. ಪಿ ಯವರು ಹಿಂದಿರುಗಿದರು. ಕನ್ನಡಮ್ಮನ ಮಗ ಕೌಲಗಿಯವರು ಕರ್ನಾಟಕವನ್ನು ತಮ್ಮ ಸೇವಾ ಕಾರ್ಯಕೇತ್ರವನ್ನಾಗಿ ಆಯ್ಕೆ ಮಾಡಿಕೊಂಡರು. ಅದರಲ್ಲೂ ಮೇಲುಕೋಟೆಯನ್ನು ಅವರ ಸೇವಾ ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡರು. ಇಂದಿನ ಸಮಾಜದಲ್ಲಿ ಸಮಾಜ ಸೇವೆಯೆಂದರೆ ಒಂದಿಷ್ಟು ಹಣವಿರಬೇಕು, ನಮ್ಮವರೇ ಆದ ಜನರಿರಬೇಕು, ಕೆಲವು ರಾಜಕೀಯ ಪ್ರಭಾವಿ ವ್ಯಕ್ತಿಗಳ ಪರಿಚಯವಿರಬೇಕು, ಎಷ್ಟೆಲ್ಲಾ ಇರಬೇಕು !. ತನ್ನ ಚಿಂತನೆಯನ್ನು ಧೃಢವಾಗಿ ನಂಬಿ, ಕಾರ್ಯೋನ್ಮುಖವಾದಾಗ ಆತ ನಿಜವಾದ ಸಮಾಜ ಸುಧಾರಕ. ತನ್ನಲ್ಲಿನ ಆತ್ಮಸ್ಥೈರ್ಯವೇ ಎಲ್ಲವನ್ನೂ ಸಾಧಿಸಿಕೊಡುವುದು ಎಂಬುದಕ್ಕೆ ಜ್ವಲಂತ ಉದಾಹರಣೆ ನಮ್ಮ ದಾದಾರವರು.

ಕೈಯಲ್ಲಿ ಹಣವಿಲ್ಲ, ಸಂಬಂಧಿಕರಿಲ್ಲ, ಸ್ಥಳ ಹೊಸದು, ಜನ ಹೊಸಬರು. ಸರ್ವೋದಯ ಕಾರ್ಯಕರ್ತರಾದ ಶ್ರೀಯುತ ಅರೆಯರ್ ಮತ್ತು ಕುಟ್ಟಿ ಇವರನ್ನು ಬಿಟ್ಟರೆ ಬೇರೆ ಯಾವ ಸಂಬಂಧವೂ ಮೇಲುಕೋಟೆಯರಲಿಲ್ಲ. ಹೀಗೆ ಬಂದ ದಾದಾ ಮೊಟ್ಟ ಮೊದಲಿಗೆ ಸ್ಥಾಪಿಸಿದ್ದು ಶ್ರೀ ಕೃಷ್ಣ ಕನ್ನಡ ಶಿಶುವಿಹಾರ; ಈ ಮೂಲಕ ರೂಪುಗೊಂಡಿದ್ದು ಜನಪದ ಸೇವಾ ಟ್ರಸ್ಟ್. ಮಕ್ಕಳೊಂದಿಗೆ ಮಂದಿಯ ಮನವನ್ನೇ ಗೆದ್ದರು.

ಜೊತೆಜೊತೆಗೆ ಸಮಾಜದಲಿನ್ನ ದುರ್ಬಲ ಮಕ್ಕಳಿಗಾಗಿ, ಅಂಗವಿಕಲರಿಗಾಗಿ ದಾರಿ ತೋರಬೇಕೆಂಬ ಉದಾತ್ತವಾದ ವಿಚಾರ ಹೊಳೆದು ಅದಕ್ಕಾಗಿ "ಕರುಣಾಗೃಹ" ಎಂಬ ಹೆಸರಿನಿಂದ ಇವರ ಸೇವಾಕ್ಷೇತ್ರ ಪ್ರಾರಂಭವಾಯಿತು. ಇದು ಎಷ್ಟರ ಮಟ್ಟಿಗೆ ಬೆಳೆಯಿತೆಂದರೆ ಇಲ್ಲಿ ಬೆಳೆದ ಅಂಗವಿಕಲ ಮಕ್ಕಳು ಪೂರ್ಣಾಂಗವಿದ್ದವರು ಸಹ ನಾಚುವಂತೆ ಬೆಳೆದು ನಿಂತರು. ಅನೇಕ ಮಕ್ಕಳು ಇಂದು ಯಾರ ಹಂಗಿಲ್ಲದೆ ಜೀವನವನ್ನು ನಡೆಸುತ್ತಾ ಸಮಾಜ ಮುಖಿ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದಾರೆ ಎಂದರೆ ದಾದಾರವರ ಕಾರ್ಯವೈಖರಿಯ ಪ್ರಬಲತೆಯ ಎಷ್ಟಿತ್ತೆಂಬುದನ್ನು ಕಾಣಬಹುದು.

ಅಬಲೆಯರಿಗಾಗಿ ಸಂಕ್ಷಿಪ್ತ ಶಿಕ್ಷಣ ಶಾಲೆ, ಮುದ್ರಣಾಲಯ, ಚರಕ, ಹೊಲಿಗೆ, ಬ್ಯಾಗ್ ತಯಾರಿಕೆ, ಹೀಗೆ ಹತ್ತು ಹಲವಾರು ವಿಚಾರಗಳಲ್ಲಿ ಬದುಕನ್ನು ಕಟ್ಟಿಕೊಳ್ಳಲು ಸಹಾಯ ಮಾಡಿದ ಧೀಮಂತ ವ್ಯಕ್ತಿ.

ದೇಶದ ಜ್ವಲಂತ ಸಮಸ್ಯೆಗಳ ವಿಚಾರಗಳಲ್ಲಿ ಗಾಂಧೀ ತತ್ವದಿಂದ ದೊರೆಯುವ ಸುಲಭ ಪರಿಹಾರ ಮಾರ್ಗಗಳನ್ನು ಹೇಳಿ ಪರಿಹರಿಸಿಕೊಳ್ಳುವ ಬಗ್ಗೆ ವಿಚಾರ ಸಂಕೀರ್ಣಗಳನ್ನು ರಾಜ್ಯದ ಉದ್ದಗಲಕ್ಕೂ ಸಂಚರಿಸಿ ಸಾರಿ ಸಾರಿ ಹೇಳಿದ್ದಾರೆ.

ಗಾಂಧೀಜಿಯವರ ಸರಳ ಜೀವನ-ಸ್ವಾವಲಂಬನೆ-ಗ್ರಾಮಸ್ವರಾಜ್ ವಿಚಾರಧಾರೆ-ಗ್ರಾಮ ಗ್ರಾಮಗಳಲ್ಲಿ ಗ್ರಾಮೋದ್ಯೋಗಗಳ ಪರಿಕಲ್ಪನೆ-ಅದರ ಮೂಲಕ ಬದುಕುವ ಶೈಲಿ-ಇವೆಲ್ಲವುಗಳಿಗೂ ವೇದಿಕೆ "ಹೊಸ ಜೀವನ ದಾರಿ" ಎಂಬ ಕೇಂದ್ರವನ್ನು ಹುಟ್ಟುಹಾಕಿದ್ದಾರೆ. ಹೀಗೆ ಅನೇಕರ ಜೀವನವನ್ನು ಸುಖಮಯವಾಗಿರಿಸಲು ತನ್ನನ್ನೇ ತಾನು ಅರ್ಪಿಸಿಕೊಂಡ ಹೃದಯ ಶ್ರೀಮಂತ ಕೌಲಗಿಯವರು.

ಭಾರತ ಪ್ರಜಾತಂತ್ರ ಸ್ವಾತಂತ್ರ್ಯ ದೇಶ ಇಲ್ಲಿ ಜನತೆಯನ್ನು ಸಮಾಜ ಮುಖಿ ಕಾರ್ಯಗಳಲ್ಲಿ ತೊಡಗಿಸಿ ಅವರಿಗೆ ಪ್ರಜಾತಂತ್ರದ ಅರಿವನ್ನು ಮೂಡಿಸಬೇಕೆಂಬ "ಮತದಾರರ ವೇದಿಕೆ"ಗಳನ್ನು ಸ್ಥಾಪಿಸಿದರು. ಸರ್ವೋದಯ

ವಿಚಾರಧಾರೆಗಳನ್ನು ತಿಳಿಸಲು ಹಳ್ಳಿ ಹಳ್ಳಿಗಳಲ್ಲಿ ವಿಚಾರ ಸಂಕೀರ್ಣಗಳನ್ನು ಏರ್ಪಡಿಸಿ ಯುವ ವೇದಿಕೆಯನ್ನು ಸ್ಥಾಪಿಸುವ ಮೂಲಕ ಹತ್ತು ಹಲವಾರು ವೇದಿಕೆಗಳಲ್ಲಿ ದೇಶದ ಉಳಿವಿಗಾಗಿ ತಮ್ಮ ಸ್ವಂತಿಕೆಯುನ್ನು ಹೇಗೆ ಬೆಳೆಸಿಕೊಳ್ಳಬೇಕೆಂದು ಹಾಗೂ ಧೃಢವಿಶ್ವಾಸದಿಂದ ಕೆಲಸ ಮಾಡಲು ಅವಕಾಶ ಕಲ್ಪಿಸಿಕೊಡುವುದರ ಮೂಲಕ ದಾರಿ ದೀಪವಾಗಿದ್ದಾರೆ.

"ಜನಪದ ವಿಚಾರ" ಎಂಬ ಮಾಸ ಪತ್ರಿಕೆಯನ್ನು ಹುಟ್ಟು ಹಾಕಿ ಅದರ ಮೂಲಕ ನಿಜವಾದ ಸಾಮಾಜಿಕ ಕಳಕಳಿ, ಅದರಲ್ಲಿ ಗಾಂಧೀ ವಿನೋಬಾರವರುಗಳ ಸರ್ವೋದಯ ವಿಚಾರಗಳ ಆಳ-ಅಗಲಗಳನ್ನು ತೋರಿಸಿಕೊಡುವುದರ ಪರಿ ಪ್ರತಿಯೊಬ್ಬರಿಗೂ ಹೃದಯ ತಟ್ಟಿ ಎಬ್ಬಿಸುವ ಹಾಗೇ ಇದೆ.

ಇಲ್ಲಿ ಆಚಾರ-ವಿಚಾರ ಕಾರ್ಯವೈಖರಿ ದೇಶಿಯರಲ್ಲದೇ ಅನೇಕ ವಿದೇಶಿಯರ ಗಮನಕ್ಕೂ ಬಂದಿರುವುದು ಒಂದು ಹೆಮ್ಮೆಯ ಸಂಗತಿ. ಇಲ್ಲಿಯ ಇವರ ಗಾಂಧೀ ವಿಚಾರ ಪರಿಮಳವನ್ನು ವಿದೇಶಗಳಲ್ಲೂ ಹಂಚಿ ಗಾಂಧೀ ವಿಚಾರಧಾರೆಗಳು ಅಲ್ಲಲ್ಲಿ ಮಡುಗಟ್ಟಿರುವುದು ಇಲ್ಲಿಗೆ ಬರುವ ವಿದೇಶೀಯರಿಂದ ಮನಗಾಣಬಹುದು.

ಆಗಸದಲ್ಲಿ ಸಂಚರಿಸುವ ಮೋಡಗಳಂತೆ ಉಪ್ಪು ನೀರನ್ನು ಹೀರಿ ಮೋಡಗಟ್ಟಿದರೋ ಅದು ವರ್ಷಿಸುವುದು ಸಿಹಿ ನೀರನ್ನು. ಅಂತೆಯೇ ಅವರ ಬದುಕಿನಲ್ಲಿ ಎಷ್ಟೋ ಕಹಿ ಘಟನೆಗಳು ನಡೆದರೂ ಅದನ್ನು ತನ್ನಲ್ಲಿ ಅಡಗಿಸಿಕೊಂಡು ಸುತ್ತಲೂ ಇರುವವರಿಗೆ ಒಳಿತನ್ನೇ ಬಯಸುತ್ತಿದ್ದರು.

ಅವರ ಗಾಂಧೀ ವಿಚಾರಧಾರೆ ಸುಘೋಷವಾಗಿ ಮೆರೆದರೆ, ಅವರು ಮಾಡಿದ ಕಾರ್ಯಗಳೆಲ್ಲವೂ ಸಂತೋಷದಾಯಕವೇ. ಆಗ ಶರೀರವಿದ್ದು ನಮ್ಮ ಮಾತನ್ನು ಆಲಿಸುತ್ತಿದ್ದರು. ಈಗ ದಿವ್ಯ ಚೇತನ ರೂಪದಲ್ಲಿ ಆಲಿಸುತ್ತಾರೆ. ಇವರು ನಮಗೆ ದಾರಿ ದೀಪವಾಗಿದ್ದಾರೆ, ಚೈತನ್ಯ ಚಿಲುಮೆಯಾಗಿದ್ದಾರೆ, ಸಮಾಜ ಮುಖಿ ಕಾರ್ಯಮುಖರಾಗಲು ದಿವ್ಯ ಶಕ್ತಿಯಾಗಿದ್ದಾರೆ. ಅವರ ಗಾಂಧೀ ವಿಚಾರಧಾರೆ ಸರ್ವಕಾಲಿಕವಾದದ್ದು ಸರ್ವಸಮಂಜಸವಾದ್ದುದ್ದು. ಶಾಂತಿ ಸೌಹಾರ್ದತೆಗಳಿಗೆ ಅವರ ಸರ್ವೋದಯ ವಿಚಾರಧಾರೆಗಳೇ

ಎಲ್ಲರಿಗೂ ಮಾನ್ಯ ಎಂಬ ಅವರ ಅಂತರಂಗದ ತರಂಗಗಳು-ಸರ್ವರ ಹೃದಯಾಂತರಗಳಲ್ಲಿ ತರಂಗಗಳಾಗಿ ಝುಲಕ್ ಎಬ್ಬಿಸುವುದರಲ್ಲಿ ಸಂದೇಹವಿಲ್ಲ.

ಅರಿತೋ ಅರಿಯದೆಯೋ ದಾದಾ ಹೀಗೆ ನನ್ನ ಕೈಯಲ್ಲಿ ಬರಿಸಿದ್ದೀರಾ?

ನಿಮಗೆ ನನ್ನ ಅಂತರಂಗದ ನಮನ

ದಾದಾ ಸದಾ ಹಸಿರು ನೆನಪು

– ಎಂ. ಎಸ್. ರಾಜಲಕ್ಷ್ಮಿ, ಬೆಂಗಳೂರು

ನಾನು ಚಿಕ್ಕವಳಿದ್ದಾಗ ಶ್ರೀ ಕೃಷ್ಣಶಿಶುವಿಹಾರಕ್ಕೆ [ಜನಪದ ಸೇವಾ ಟ್ರಸ್ಟಿನ ಅಂಗ ಸಂಸ್ಥೆ] ಸೇರಿದ್ದ ವಿದ್ಯಾರ್ಥಿನಿ. ದಾದಾ ಬಂದರೆ ನಮಗೆ ಎಲ್ಲಿಲ್ಲದ ಸಂತೋಷ. ಮಕ್ಕಳೆಂದರೆ ಬಹಳ ಪ್ರೀತಿ; ಪ್ರೀತಿಯಿಂದ ಎಲ್ಲಾ ಮಕ್ಕಳನ್ನು ಮಾತನಾಡಿಸುತ್ತಿದ್ದರು. ನಾ ಕಂಡಂತೆ ಅವರು ಪರಿಸರ ಪ್ರೇಮಿಗಳು. ಶಿಶುವಿಹಾರದ ಮುಂದಿದ್ದ ಪ್ರಾರ್ಥನಾ ಮೈದಾನದ ತುಂಬ ಡಾಲಿಯಾ, ಕ್ರೋಟನ್ ಮುಂತಾದ ಗಿಡಗಳನ್ನು ನೆಟ್ಟಿದ್ದರು. ಹೂಗಳನ್ನು ಕಿತ್ತರೆ ಅವರಿಗೆ ಬಹಳ ಕೋಪ ಬರುತ್ತಿತ್ತು. ಇದನ್ನು ನೋಡಿದರೆ ಅವರ ಪರಿಸರ ಪ್ರೇಮದ ಪರಿಚಯ ನನಗಾಗುತ್ತಿತ್ತು. ದಾದಾ ಎಂದರೆ ನನಗೆ ನೆನಪಾಗುವುದು ಶ್ವೇತವರ್ಣದ ಗರಿಗರಿಯಾದ ಖಾದಿ ಪಂಚೆ, ಜುಬ್ಬದಲ್ಲಿ ಮಿಂಚುತ್ತಿದ್ದ ಅವರ ನೀಳ ದೇಹ, ನೇರ ನಡೆ–ನುಡಿ ಮಗುವಾದ ನನ್ನನ್ನು ಆಕರ್ಷಿಸಿ ಮುಗ್ಧಳನ್ನಾಗಿ ಮಾಡುತ್ತಿತ್ತು. ರಾಷ್ಟ್ರೀಯ ಹಬ್ಬಗಳಾದ ಆಗಸ್ಟ್ ೧೫, ಅಕ್ಟೋಬರ್ ೦೨, ನವೆಂಬರ್ ೧೪, ಜನವರಿ ೨೬ ರಂದು ಧ್ವಜಾರೋಹಣ ಮಾಡಿ ಆಕರ್ಷಕ ಭಾಷಣ ಮಾಡಿ ನಮಗೆಲ್ಲಾ ಸಿಹಿ–ಹಂಚುತ್ತಿದ್ದ ಆ ಸುಂದರ ದೃಶ್ಯ ನನ್ನ ಕಣ್ಣಿಗೆ ಕಟ್ಟಿದಂತಿದೆ. ೬೦ ರ ದಶಕದಲ್ಲಿಯೇ ಶಿಶುವಿಹಾರಕ್ಕೆ ಗ್ರಾಮಫೋನ್ ತಂದು ಮಕ್ಕಳಿಗೆ 'ಟೂಟು ಬೇಡಪ್ಪ ಓಡಿ ಬಂದು ನನ್ನ ಸಂಗ ಕಟ್ಟಪ್ಪ; ನೋಡಪ್ಪ ಚಂದಮಾಮ ನನ್ನ ಕೂಡ ಆಡಲೆಂದು ಬಂದನಪ್ಪ' ಹಾಡು ಹಾಕಿದರೆ ಬಾಲಕಿಯಾದ ನಾನು ಹಾಗೂ ನನ್ನ ಸಂಗಡಿಗರು ಚಪ್ಪಾಳೆ ತಟ್ಟಿ ಕೇಕೇ ಹಾಕಿ ನಗುತ್ತಿದ್ದೆವು. ದಾದಾರವರು ಖುಷಿಯಾಗಿ ದೂರದಲ್ಲಿ ಮುಗುಳ್ನಕ್ಕು ಸಂತೋಷದಿಂದ ನಮ್ಮ ಕಡೆ ನೋಡುತ್ತಿದ್ದ ದೃಶ್ಯವನ್ನು ಮರೆಯಲಾರೆ.

ನಾನು ಹೀಗೆ ಏಳೆಂಟು ವರ್ಷಗಳ ಹಿಂದೆ ಅವರ ಮನೆಗೆ ಹೋದಾಗ ಕೇಳಿದರು. ರಾಜಮ್ಮ ನಿನಗೆ ಜಿ.ಎಸ್. ಶಿವರುದ್ರಪ್ಪನವರ 'ಉಡುಗಣ ವೇಷ್ಟಿತ' ಭಾವಗೀತೆ ಬರುತ್ತಾ ಎಂದರು. ನಾನು ಅವರ ಅಭಿಲಾಷೆಯನ್ನು ಕೇಳಿ ಸಂತೋಷದಿಂದ ಆ ಭಾವಗೀತೆಯನ್ನು ಹಾಡಿದೆ.

ಅವರು ಅಂಗವಿಕಲರಿಗೆ, ದೀನದಲಿತರಿಗೆ ಬದುಕಿನ ಮಾರ್ಗವನ್ನು ತೋರಿಸಿಕೊಟ್ಟ ಧೀಮಂತ ವ್ಯಕ್ತಿ ದಾದಾ. ಅವರಿಗೆ ಸುರೇಂದ್ರ ಕೌಲಗಿ ಎನ್ನುವ ಹೆಸರು ಅನ್ವರ್ಥವಾಗಿದೆ.

ಸು– ಎಂದರೆ ಸುಭದ್ರ ದೇಶಕ್ಕಾಗಿ ಹೋರಾಡಿದ ಸರ್ವೋದಯ ವಾದಿ

ರೇ– ಎಂದರೆ ರೇಷ್ಮೆಯಂತೆ ನಾಜೂಕಾದ ಮೆದು ಭಾಷಣಕಾರ

ದ್ರ– ಎಂದರೆ ದೀನದಲಿತರ ಕಷ್ಟ ಕಂಡು ದ್ರವಿಸುವ ವ್ಯಕ್ತಿ

ಕೌ– ಎಂದರೆ ಕೌಶಲ್ಯತೆಯ ಬೀಡು

ಲ– ಎಂದರೆ ಲವಲವಿಕೆಗೆ ಹೆಸರಾದ ಕಾರ್ಯಶೀಲ ವ್ಯಕ್ತಿ

ಗಿ– ಎಂದರೆ ಗಿರಿಯಷ್ಟು ಎತ್ತರಕ್ಕೆ ಸಂಸ್ಥೆ ಬೆಳೆಸಿದ ಸಹನಶೀಲ ವ್ಯಕ್ತಿ

ಹಿರಿಯ ಗಾಂಧಿವಾದಿಯಾಗಿ ಸದಾ ಖಾದಿ ಬಟ್ಟೆಯನ್ನೇ ಧರಿಸಿ ಖಾದಿ ಗ್ರಾಮೋದ್ಯೋಗವನ್ನು ಊರ್ಜಿತಗೊಳಿಸಲು ಹುಟ್ಟಿದ ಧೀಮಂತ ವ್ಯಕ್ತಿ ನನ್ನ ದಾದಾ.

ಜೈ ಜಗತ್

ಹದಿ ಹರೆಯದ ಉತ್ಸಾಹದ ಹಿರಿಯ ಜೀವ ಸುರೇಂದ್ರ ಕೌಲಗಿ

– ಡಿ.ಎಸ್. ನಾಗಭೂಷಣ

ಸುರೇಂದ್ರ ಕೌಲಗಿಯವರನ್ನು ನಾನು ಕಂಡು ಮಾತಾಡಿದ್ದು ಹೆಚ್ಚೆಂದರೆ ನಾಲ್ಕು ಬಾರಿ. ಇಪ್ಪತ್ತು ವರ್ಷಗಳ ಹಿಂದೊಮ್ಮೆ ನನ್ನ ಪತ್ನಿ ಸವಿತಾ ಮತ್ತು ಕವಿ ಮಿತ್ರ ಎಸ್. ಮಂಜುನಾಥರೊಂದಿಗೆ ಮೂರು ದಿನಗಳ ಕಾಲ ಮೇಲುಕೋಟೆ ಪ್ರವಾಸಕ್ಕೆ ಹೋಗಿದ್ದಾಗ ಮೊದಲ ಬಾರಿಗೆ ಅವರನ್ನು ನೋಡಿದ್ದು. ಆಗ ಮೇಲುಕೋಟೆ ಬಹು ಸುಂದರವಾದ ದೊಡ್ಡ ಹಳ್ಳಿಯಾಗಿತ್ತು. ಗುಡ್ಡದ ಮೇಲಿನ ಆ ಹಳ್ಳಿಯಲ್ಲಿನ ಪ್ರಶಾಂತ ಮುಗ್ಧತೆ, ಮನೋಹರವಾದ ಕೊಳಗಳು, ಕಣಿವೆಯೊಂದರಲ್ಲಿ ಜುಳು ಜುಳನೆ ಹರಿದಿದ್ದ ಒಂದು ಸಣ್ಣ ತೊರೆ, ಸಣ್ಣ ಮಲೆಯೊಂದರ ಮೇಲಿನ ಮತ್ತು ಊರೊಳಗಿನ ಜನರ ಸದ್ದು ಗದ್ದಲವಿಲ್ಲದ ಎರಡು ಪುರಾತನ ದೇವಸ್ಥಾನಗಳು, ಊರ ಹೊರಗಿನ ವಿಶಾಲ ಬಂಡೆಗಲ್ಲುಗಳೊಂದರ ತುದಿಯಲ್ಲಿ ಕೂತರೆ ಕೆಳಗೆ ದೂರದಲ್ಲಿ ಕಾಣುವ ಬೆಣ್ಣೆಯ ಮಡಕೆಯುನ್ನೋ, ತರಕಾರಿಗಳ ಮಂಕರಿಯುನ್ನೋ ಅಥವಾ ಎತ್ತು-ನೇಗಿಲುಗಳೊಂದಿಗೆ ನಡೆದಿದ್ದ ರೈತಜನರ ಚಿತ್ರ, ಊರೊಳಗಿನ ಉಪಹಾರ ಮಂದಿರವೊಂದರಲ್ಲಿ ನಾವು ಬೇಸರವಿಲ್ಲದೆ ದಿನವೂ ತಿನ್ನಬಹುದಾದಾಷ್ಟು ರುಚಿಯಾಗಿದ್ದ ಪುಳಿಯೋಗರೆ, ಇವುಗಳೊಂದಿಗೇ ಮೂಡಿ ಬರುವುದು ಸುರೇಂದ್ರ ಕೌಲಗಿಯವರು ತಮ್ಮ ಕುಟುಂಬದೊಂದಿಗೆ ವಾಸಿಸುತ್ತಿದ್ದ ಜನಪದ ನಿಲಯ.

ಸುರೇಂದ್ರ ಕೌಲಗಿಯವರ ಇಬ್ಬರು ಮಕ್ಕಳಾದ ಸಂತೋಷ್ ಮತ್ತು ಸುಘೋಷ್ ನನ್ನ ಗೆಳೆಯ ಮಂಜುನಾಥರ ಗೆಳೆಯರಾಗಿದ್ದುದರಿಂದಷ್ಟೇ ನಾನು ಅವರ ಸಲಹೆಯ ಮೇರೆಗೆ ನನ್ನ ಪತ್ನಿಯೊಂದಿಗೆ ಜನಪದ ನಿಲಯಕ್ಕೆ ಹೋಗಿದ್ದೆ. ಅದು ಆಗ ನಾನು ನೋಡಿದಾಗ ವಿವಿಧ ತೆರನ ಜನರ ಚಲನವಲನ-ಮಾತುಕತೆಗಳಿಂದ ತುಂಬಿಕೊಂಡಿತ್ತು. ಒಂದೆರಡು ವಿದೇಶಿ ಮುಖಗಳೂ ಕಂಡಂತಿದ್ದ ಆ ಸಂಜೆಯ ಜನಸಮೂಹದ ಮಧ್ಯೆಯೂ ಮನೆಯ ಯಜಮಾನತಿ ಗಿರಿಜಮ್ಮನವರು ಮಂಜುನಾಥರನ್ನು ಗುರುತಿಸಿ ತಾವು ತಯಾರಿಸಿದ್ದ ಬಹು ರುಚಿಕಟ್ಟಾದ ಚಿತ್ರಾನ್ನದ ಒಂದೊಂದು ದೊಡ್ಡ ಉಂಡೆಯನ್ನು ನಮಗೆ ನೀಡಿದ್ದು ಮತ್ತು ನಾವು ಅದನ್ನು ಇನ್ನೂ ಮುಂಚೆ ಬಂದಿದ್ದರೆ ಮನದುಂಬಿ ಇನ್ನಷ್ಟು

ಸವಿಯಬಹುದಿತ್ತೇನೋ ಎಂಬ ಕಳೆದುಹೋದ ಅವಕಾಶಕ್ಕಾಗಿ ನಮ್ಮನ್ನು ನಾವೇ ಶಪಿಸಿಕೊಂಡು ತಿಂದಿದ್ದು ಮಾತ್ರ ಈಗ ನೆನಪಿದೆ! ಆ ಜನ ಮತ್ತು ರುಚಿ ಸಂಭ್ರಮಗಳ ಮಧ್ಯೆ ಸುರೇಂದ್ರ ಕೌಲಗಿಯವರ ಮುಖ ಮತ್ತು ಮಾತು ಎಲ್ಲೋ ನುಸುಳಿ ಬಂದುಹೋದದ್ದಷ್ಟೇ ನೆನಪು ನನಗೆ! ಆಗ ಸುರೇಂದ್ರ ಕೌಲಗಿಯವರು ನಮ್ಮ ನಡುವಿದ್ದ ಹಲವು ಗಾಂಧಿವಾದಿಗಳಲ್ಲಿ ಒಬ್ಬರಾಗಿದ್ದರಷ್ಟೆ. ಅವರು ಗಾಂಧಿ ಚಿಂತನೆಯನ್ನಾಧರಿಸಿದ ಒಂದು ಸಂಸ್ಥೆಯನ್ನು ನಡೆಸುತ್ತಾರೆ ಎಂಬ ಸ್ಥೂಲ ಮಾಹಿತಿಯ ಹೊರತಾಗಿ ಅವರ ಬಗ್ಗೆ ನನಗೆ ಬಹಳ ಹೆಚ್ಚೇನೂ ಗೊತ್ತಿರಲಿಲ್ಲ.

ಆದರೆ ಅದಾದ ಆರೇಳು ವರ್ಷಗಳ ನಂತರ ೨೦೦೨ರಲ್ಲಿ ಮೈಸೂರಿನಲ್ಲಿ ಡಾ. ರಾಮಮನೋಹರ ಲೋಹಿಯಾ ಪ್ರತಿಷ್ಠಾನವು ಜಯಪ್ರಕಾಶ ನಾರಾಯಣರ ಜನ್ಮಶತಮಾನೋತ್ಸವದ ಅಂಗವಾಗಿ ಅವರನ್ನು ಕುರಿತು ನಾನು ಬರೆದ ಜಯಪ್ರಕಾಶ ನಾರಾಯಣರನ್ನು ಕುರಿತ 'ಒಂದು ಅಪೂರ್ಣ ಕ್ರಾಂತಿಯ ಕಥೆ' ಪುಸ್ತಕದ ಬಿಡುಗಡೆ ಸಮಾರಂಭದ ಸಂದರ್ಭದಲ್ಲಿ ಸುರೇಂದ್ರ ಕೌಲಗಿಯವರನ್ನು ಆಹ್ವಾನಿಸಿದಾಗಲೇ ಅವರನ್ನು ನಾನು ನಿಜವಾಗಿ ಪರಿಚಯ ಮಾಡಿಕೊಳ್ಳಲು ಸಾಧ್ಯವಾಗಿದ್ದು. ಅವರು ಬಹುಕಾಲ ಜೆಪಿಯವರ ಆಪ್ತ ಕಾರ್ಯದರ್ಶಿಯಾಗಿದ್ದರೆಂದು ಗೊತ್ತಾಗಿದ್ದೂ ಆಗಲೇ. ಆ ಸಂದರ್ಭದಲ್ಲಿ ಅವರೊಂದಿಗೆ ಮಾತುಕತೆಯಾಡುತ್ತಿರುವಾಗಲೇ ಸರ್ವೋದಯ ಚಳುವಳಿಯೊಡನೆಯ ಅವರ ಆತ್ಮೀಯ ಸಂಬಂಧ ಮತ್ತು ಅವರ ಜನಪದ ಸೇವಾ ಟ್ರಸ್ಟ್‌ನ ಬಹುಮುಖ ಚಟುವಟಿಕೆಗಳ ಸಕಲ ಪರಿಚಯವೂ ಆಗಿದ್ದು. ಆ ಮೊದಲ ಮಾತುಕತೆಯಲ್ಲೇ ಕೌಲಗಿಯವರು ಹಿರಿತನದ ಯಾವ ಭಾರಗಳೂ ಇಲ್ಲದ ತಮ್ಮ ನಗುಮೊಗದ ಆತ್ಮೀಯತೆಯಿಂದ ನನ್ನನ್ನು ಸೆಳೆದರು. ಅವರು ಜೆಪಿಯವರ ಮೇಲಿನ ಅಭಿಮಾನದಿಂದ ಜೆಪಿಯವರು ಬಹು ಪ್ರಾಮಾಣಿಕವಾಗಿ ತಮ್ಮ ವೈಯುಕ್ತಿಕ ಬದುಕಿನ 'ವಿಫಲತೆ'ಗಳ ಬಗ್ಗೆ ಹೇಳಿಕೊಂಡಿದ್ದ ಸಂದರ್ಶನವೊಂದನ್ನು ನನ್ನ ಪುಸ್ತಕದಲ್ಲಿ ಸೇರಿಸಿದ್ದಕ್ಕಾಗಿ ಆಕ್ಷೇಪಿಸಿದರಾದರೂ, ನನ್ನ ಬಗೆಗಿನ ಅವರ ಆತ್ಮೀಯತೆಯಲ್ಲಿ ಏನೂ ವ್ಯತ್ಯಾಸವಾಗಲಿಲ್ಲ.

ಇದಕ್ಕೆ, ಅಂದು ವಿದ್ಯುಕ್ತವಾಗಿ ಆರಂಭವಾದ ಆ ಹಿರಿಯರ ಮತ್ತು ಈ ಕಿರಿಯನ ಸಂಬಂಧ ನಂತರದ ಈ ಹದಿನೈದು ವರ್ಷಗಳಲ್ಲಿ ಹೆಚ್ಚೆಚ್ಚು ಆತ್ಮೀಯವಾಗುತ್ತಾ ಹೋದದ್ದೇ ಸಾಕ್ಷಿಯಾಗಿದೆ. ನಾನು ಸರ್ಕಾರಿ ಸೇವೆಯಿಂದ ಸ್ವಯಂನಿವೃತ್ತಿ ಪಡೆದು ಶಿವಮೊಗ್ಗದಲ್ಲಿ ನೆಲೆಯಾಗಿ ಅವರ ಸಂಪಾದಕತ್ವದ 'ಜನಪದ ವಿಚಾರ' ಮಾಸಿಕದ ನಿಯಮಿತ ಓದುಗನಾದ ಮೇಲೆ, ವಿಶೇಷವಾಗಿ

ನಾನೂ ಆರು ವರ್ಷಗಳ ಹಿಂದೆ ನನ್ನ ಸಂಪಾದಕತ್ವದಲ್ಲಿ 'ಹೊಸ ಮನುಷ್ಯ' ಎಂಬ ಸಮಾಜವಾದಿ ಮಾಸಿಕವನ್ನು ಅರಂಭಿಸಿದ ಮೇಲೆ ನನ್ನ ಮತ್ತು ಅವರ ಸಂಬಂಧ ಬೇರೆಯೇ ಹಂತ ತಲುಪಿತೆಂದು ಹೇಳಬೇಕು. ಅವರಿಗೆ ನಮ್ಮ ಪತ್ರಿಕೆಯ ಒಂದು ಸಂಚಿಕೆ ತುಂಬ ಮೆಚ್ಚುಗೆಯಾದರೆ, ಅವರು ಚಿಕ್ಕ ಹುಡುಗನಂತೆ ಕೂಡಲೇ ನನಗೆ ದೂರವಾಣಿ ಕರೆಮಾಡಿ, 'ಏನ್ರೀ ನಾಗಭೂಷಣ, ನಮ್ಮ 'ಜನಪದ ವಿಚಾರ'ದ ಮೇಲೆ ಸ್ಪರ್ಧೆಗೆ ಇಳಿದಿದ್ದೀರಾ? ಅದೆಲ್ಲ ನಡೆಯೊಲ್ಲ... ನಮ್ಮ ಮುಂದಿನ ಸಂಚಿಕೆ ಕಾದು ನೋಡಿ!' ಎಂದು ಸವಾಲು ಹಾಕುತ್ತಲೇ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ತಮ್ಮ ಮೆಚ್ಚುಗೆಯನ್ನು ಸೂಚಿಸುತ್ತಿದ್ದರು. ಆ ಮೆಚ್ಚುಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸಾಕಾರಗೊಳ್ಳುತ್ತಿದ್ದುದು ಮತ್ತು ನನ್ನನ್ನು ಅವರ ಮುಂದೆ ವಿನೀತನನ್ನಾಗಿಸುತ್ತಿದ್ದುದು ಅವರ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಅವರು ನನ್ನ ಅಥವಾ ನಮ್ಮ ಪತ್ರಿಕೆಯ ಲೇಖನವೊಂದನ್ನು ಅಳವಡಿಸಿಕೊಂಡಾಗ!

ಈ ಮಧ್ಯೆ ನಾನು ಸುರೇಂದ್ರ ಕೌಲಗಿಯವರನ್ನು ನನ್ನ ಕೆಲವು ಗೆಳೆಯರೊಂದಿಗೆ ಮೇಲುಕೋಟೆಯ ಅವರ ಮನೆಗೆ ಹೋಗಿ ಎರಡು ಬಾರಿ ಕಂಡು ಮಾತನಾಡಿದ್ದೇನೆ. ಆ ಎರಡೂ ಸಂದರ್ಭಗಳಲ್ಲಿ ಹರೆಯದ ಹುಡುಗನ ಉತ್ಸಾಹದಿಂದ ನನ್ನೊಡನೆ ಗಾಂಧಿ–ವಿನೋಬಾ–ಜೆಪಿ ವಿಚಾರಗಳ ಬಗ್ಗೆ ನನಗೆ ಮುಜುಗರವಾಗುವಂತಹ ವಿದ್ಯಾರ್ಥಿ ವಿನಯದೊಂದಿಗೆ ಚರ್ಚಿಸಿದ್ದಾರೆ. ತಮ್ಮ ಜನಪದ ಸೇವಾ ಟ್ರಸ್‌ನ ಎಲ್ಲ ಚಟುವಟಿಕೆಗಳ ಜಾಗಗಳನ್ನೂ ನಾನು ಮತ್ತು ನನ್ನ ಪತ್ನಿ ನೋಡಿ ಬರಬೇಕೆಂಬ ಇಚ್ಛೆಯಿಂದ ಅದಕ್ಕೆ ಸಕಲ ಏರ್ಪಾಡುಗಳನ್ನೂ ಮಾಡಿದ್ದಾರೆ. ನಾವು ಅವರ ಟ್ರಸ್ಟಿನ ಖಾದಿ ಮತ್ತು ಗ್ರಾಮೋದ್ಯೋಗ ಚಟುವಟಿಕೆಗಳನ್ನೂ ಅನಾಥ ಮಕ್ಕಳ ಕೇಂದ್ರ 'ಕರುಣಾ ಗೃಹವನ್ನೂ, ಅಪರೂಪದ ಪುಸ್ತಗಳಿರುವ ದೊಡ್ಡ ಗ್ರಂಥಾಲಯವನ್ನೂ ನೋಡಿ ಮತ್ತು ಈ ಹಿಂದೆ ಅವರು ನಡೆಸಿದ ಶೈಕ್ಷಣಿಕ ಸಂಸ್ಥೆಗಳ ಕಥೆಯನ್ನೂ ಕೇಳಿ ಅವರ ಬಗ್ಗೆ ವಿಶಿಷ್ಟ ಗೌರವ ತಾಳಿದ್ದೇವೆ. ಈ ಟ್ರಸ್ಟ್‌ನ ಎರಡು ಪ್ರಕಟಣೆಗಳಾದ ಜೆ.ಸಿ. ಕುಮಾರಪ್ಪ ಅವರ ಗಾಂಧಿ ಅರ್ಥಶಾಸ್ತ್ರ ಕುರಿತ 'ಶಾಶ್ವತ ಅರ್ಥಶಾಸ್ತ್ರ' ಮತ್ತು ಫುಕೊವೊಕಾನ 'One straw revolution'ನ ಅನುವಾದ 'ಒಂದು ಹುಲ್ಲಿನ ಕ್ರಾಂತಿ' ಪರ್ಯಾಯ ಬದುಕನ್ನು ಕುರಿತ ಕನ್ನಡ ಸಾಹಿತ್ಯ ರಾಶಿಗೆ ಸಂದಿರುವ ಎರಡು ಅಮೂಲ್ಯ ಕೊಡುಗೆಗಳಾಗಿವೆ ಎಂದೇ ನಾನು ಭಾವಿಸಿದ್ದೇನೆ.

ಇಷ್ಟು ಕೆಲಸಗಳನ್ನು ಮಾಡಿರುವ ದೊಡ್ಡ ಜೀವ ನನ್ನನ್ನು ಒಮ್ಮೆ ಶ್ರೀರಂಗಪಟ್ಟಣದಲ್ಲಿ ನಡೆದ ವಾರ್ಷಿಕ ಸರ್ವೋದಯ ಸಮ್ಮೇಳನಕ್ಕೂ, ಮತ್ತೊಮ್ಮೆ

ಕಳೆದ ವರ್ಷ ಮೇಲುಕೋಟೆಯಲ್ಲಿ ಅವರೇ ಮುಂದೆ ನಿಂತು ಆಯೋಜಿಸಿದ್ದ ಪ್ರಥಮ ಕರ್ನಾಟಕ ಸರ್ವೋದಯ ಸಮ್ಮೇಳನಕ್ಕೂ ಅಭಿಮಾನದಿಂದ ಆಹ್ವಾನಿಸಿ ನನ್ನಿಂದ ಮಾತುಗಳನ್ನಾಡಿಸಿ ಅನನ್ಯ ಪ್ರೀತಿ ತೋರಿಸಿದ್ದಾರೆ.. ಸರ್ವೋದಯ ಚಳುವಳಿ ಕುರಿತ ಅವರ ಈ ಉತ್ಸಾಹ ನನ್ನನ್ನು ಒಮ್ಮೊಮ್ಮೆ ಮೂಕವಿಸ್ಮಿತನ್ನಾಗಿಯೂ ಮಾಡಿದೆ. ಒಮ್ಮೆ ಅವರು ಅದರ ಸಂಘಟನೆಗಾಗಿ ಮೇಲುಕೋಟೆಯಿಂದ ಶಿವಮೊಗ್ಗದವರೆಗೂ ಬಂದು ಏನೂ ಮಾಡಲಾಗದೆ ಬರಿಗೈಲಿ ಹಿಂತಿರುಗಿದ್ದನ್ನು ಕಂಡು ನಾನು ವಿಷಾದಪಟ್ಟಿದ್ದೇನೆ. ಆದರೆ ಅವರಿಗೇನೂ ವಿಷಾದವಿದ್ದಂತೆ ತೋರಲಿಲ್ಲ. ಅವರು 'ಜನಪದ ವಿಚಾರ'ದಲ್ಲಿ ಪ್ರತಿ ತಿಂಗಳೂ ಸರ್ವೋದಯದ ಮುನ್ನಡೆ ಎಂದು ಆಶಾದಾಯಕವಾದದ್ದನ್ನು ಏನನ್ನಾದರೂ ಬರೆಯುತ್ತಲೇ ಇದ್ದರಲ್ಲಾ!

'ಜನಪದ ವಿಚಾರ' ಗಾಂಧಿ ಚಿಂತನೆಗಳಗೆಂದೇ ಮೀಸಲಾದ ಕನ್ನಡದ ಏಕೈಕ ಪತ್ರಿಕೆಯಾಗಿದ್ದು ಅದರಲ್ಲಿನ ಗಾಂದಿ ವಿಚಾರ ಕುರಿತ ಹಲವು ಅಪರೂಪದ ಅನುವಾದ ಲೇಖನಗಳನ್ನು ಓದಿ ನಾನು ಗಾಂಧೀಜಿಯ ಬಗ್ಗೆ ಹೊಸ ಒಳನೋಟ ಗಳನ್ನು ಪಡೆದಿದ್ದೇನೆ. ಹಾಗೇ ಗಾಂಧಿಯುಗ ಮತ್ತೆ ಬರಲಿದೆ ಮತ್ತು ಬಂದೇ ಬರಬೇಕೆಂಬ ಅದಮ್ಯ ನಂಬಿಕೆಯಿಂದ ಮತ್ತು ಗಾಂಧಿ ಚಿಂತನೆಯ ಒಳಹೊಕ್ಕು ತೆಗೆದ ಸಮಯೋಚಿತ ಸೂಕ್ತಿಗಳ ಬಲದಿಂದ ಹದಿಹರೆಯದವರನ್ನೂ ನಾಚಿಸು ವಂತಹ ಹುರುಪಿನೊಂದಿಗೆ ಬರೆಯುತ್ತಿದ್ದ ಅದರ ಸಂಪಾದಕೀಯಗಳನ್ನು ನಾನು ಮರೆಯಲಾರೆ. ಇಂತಹ ಆಯ್ದ.ಸಂಪಾದಕೀಯಗಳ ಸಂಗ್ರಹವೊಂದನ್ನು ಸಿದ್ಧಪಡಿಸಿ ಅದಕ್ಕಾಗಿ ಅವರು ನನ್ನನ್ನು ಇನ್ನಿಲ್ಲದಂತೆ ಒತ್ತಾಯಿಸಿ ಅದಕ್ಕೆ ಒಂದು ಮುನ್ನುಡಿಯನ್ನೂ ಬರೆಸಿದ್ದರು. ಅದು ಪುಸ್ತಕವಾಗಿ ಪ್ರಕಟವಾಯಿತೋ ಇಲ್ಲವೋ ತಿಳಿಯೆ! ಅದೇನೇ ಇರಲಿ, ಅಷ್ಟೆಲ್ಲ ದೊಡ್ಡ ಕೆಲಸಗಳನ್ನು ಮಾಡಿದ ಅವರು ನನ್ನಂತಹ ಕಿರಿಯನ ಬಗ್ಗೆ ತೋರಿಸಿದ ಪ್ರೀತಿ-ಪ್ರೇಮ-ಅಭಿಮಾನಗಳು ನನ್ನನ್ನು ಹೆಚ್ಚು ನಮ್ರನನ್ನಾಗಿಸಿವೆ. ಅದೂ ಒಳ್ಳೆಯದಕ್ಕೇ ತಾನೇ?

ಇಂತಹ ಹಿರಿಯ ಜೀವದ ನೆನಪನ್ನು ಹಸಿರಾಗಿರಿಸುವಂತೆ ಜನಪದ ಸೇವಾ ಟ್ರಸ್ಟ್‌ನ ಚಟುವಟಿಕೆಗಳು ಇನ್ನಷ್ಟು ವ್ಯಾಪಕ ಮತ್ತು ಚುರುಕುಗೊಳ್ಳಲಿ ಮತ್ತು ಮುಖ್ಯವಾಗಿ 'ಜನಪದ ವಿಚಾರ' ಪತ್ರಿಕೆ ಇನ್ನಷ್ಟು ಸಮೃದ್ಧವಾಗಿ ಬೆಳೆದು ಮುಂದುವರಿಯುವಂತಾಗಲಿ.

ಮಧ್ಯಮಮಾರ್ಗಿ ಸುರೇಂದ್ರ ಕೌಲಗಿಯವರು

– ಪ್ರಸನ್ನ, ಹೆಗ್ಗೋಡು

ಗಾಂಧಿವಾದಿ ಎಂಬ ವಿಶಾಲವಾದ ಒಂದು ಕೆಟಗರಿ ಇದೆ. ಈ ಕೆಟಗರಿಯಲ್ಲಿ ಹಲವು ರೀತಿಯ ವ್ಯಕ್ತಿತ್ವಗಳನ್ನು ತಂದು ಚೆಲ್ಲಲಾಗಿರುತ್ತದೆ. ಖಾದಿ ಬಟ್ಟೆ ತೊಟ್ಟವರು, ವಯಸ್ಸಾದವರು, ಕೇಳುವುದುಕ್ಕೂ ಮೊದಲೇ ಉಪದೇಶ ನೀಡುವವರು, ಉದ್ದುದ್ದವಾಗಿ ಹಾಗೂ ನೀರಸವಾಗಿ ಭಾಷಣ ಮಾಡುವವರು, ಇತ್ಯಾದಿ ಎಲ್ಲರನ್ನೂ ತಂದು ಚೆಲ್ಲಲಾಗಿರುತ್ತದೆ. ಸುರೇಂದ್ರ ಕೌಲಗಿಯವರನ್ನೂ ಸಹ ಇದೇ ಸಾಮಾನ್ಯ ಕೆಟಗಿರಿಯಲ್ಲಿ ಚೆಲ್ಲುವುದು ಸಂಪ್ರದಾಯ. ಹಾಗಾಗಿ ಸುರೇಂದ್ರ ಕೌಲಗಿಯವರ ಭಿನ್ನತೆಯೇನು ಎಂದು ತಿಳಿಸುವ ಜವಾಬ್ದಾರಿ, ಸಹಜವಾಗಿಯೇ, ಈ ಲೇಖನದ ಮೇಲೆ ಬಿದ್ದಿದೆ.

ಸುರೇಂದ್ರ ಕೌಲಗಿಯವರು ಮಹಾನಗರಗಳಲ್ಲಿ ಬದುಕಲಿಲ್ಲ. ವಿಪರೀತ ಭಾಷಣ ಮಾಡಲಿಲ್ಲ. ಒಬ್ಬ, ಸರಳ ಸಜ್ಜನ, ಸರ್ವೋದಯ ಕಾರ್ಯಕರ್ತನಾಗಿ ಬದುಕಿನುದ್ದಕ್ಕೂ ಉಳಿದರು. ತನ್ನ ಬದುಕೇ ತನ್ನ ಸಂದೇಶ ಎಂದು ಸಾರಿದ ಗಾಂಧೀಜಿಯವರ ಮಾತಿನಂತೆ, ಬದುಕಿನ ಮೂಲಕವೇ ಸಂದೇಶಿಸಿದರು ಕೌಲಗಿಯವರು. ಇದು, ಅದೆಷ್ಟು ದೊಡ್ಡ ಸಾಧನೆಯೆಂದು ತಿಳಿಹೇಳುವುದು, ಇಂದಿನ ದಿನದ ಮಾನಗಳಲ್ಲಿ, ಸುಲಭ ಸಾಧ್ಯವಾದ ಕೆಲಸವಲ್ಲ. ಸರಳ ಬದುಕು ನೀರಸವಾಗಿ ಕಾಣುತ್ತಿರುವ ಸಂಕೀರ್ಣತೆಯ ಯುಗವಿದು.

ಬದುಕಿನುದ್ದಕ್ಕೂ, ಕೌಲಗಿಯವರು, ಖಾದಿ ಬಟ್ಟೆಯ ಉತ್ಪಾದನೆ ಮಾಡಿದರು, ಅನಾಥ ಮಕ್ಕಳ ಪಾಲನೆ ಮಾಡಿದರು, ಸಣ್ಣ ಪತ್ರಿಕೆಯೊಂದರ ಮೂಲಕ ಜನಪದ ವಿಚಾರಗಳ ಪ್ರಸಾರ ಮಾಡಿದರು, ಸಣ್ಣ ಪತ್ರಿಕೆಯೊಂದರ ಮೂಲಕ ಜನಪದ ವಿಚಾರಗಳನ್ನು ಸಿದ್ಧ ಮಾದರಿಯಿಂದಾಚೆಗೆ ಕೊಂಡೊಯ್ಯುವ, ಹೊಸ ಜನಾಂಗದೊಂದಿಗೆ ಸಂಭಾಷಿಸುವ ಗಂಭೀರ ಪ್ರಯತ್ನ ಮಾಡಿದರು ಕೌಲಗಿಯವರು.

ಪ್ರವಾಹದ ವಿರುದ್ಧ ಈಜಬೇಕಾಗಿ ಬಂದವರು, ಕೌಲಗಿ ಹಾಗೂ ಅವರ ಸಮಕಾಲೀನ ಗಾಂಧಿವಾದಿಗಳು. ಇವರು ಸಕ್ರಿಯರಾಗಿದ್ದ ಸ್ವಾತಂತ್ರ್ಯಾನಂತರದ ದಶಕಗಳು ಬೃಹತ್ತನ್ನು ಹಂಬಲಿಸಿದ ಯುಗ. ಭಾರಿ ವ್ಯವಸ್ಥೆಗಳು ಭಾರಿ ಯಂತ್ರಗಳು ಹಾಗೂ ಭಾರಿ ಯೋಜನೆಗಳನ್ನು ಜಾರಿಗೆ ತಂದ ದೈತ್ಯ ಬೆಳವಣಿಗೆಯ

ಯುಗ. ಬೆಳವಣಿಗೆಯೆಂಬುದು, ಬೆಳೆದೂ ಬೆಳೆದೂ, ಇತ್ತ ಸಂಪೂರ್ಣ ಯಂತ್ರನಾಗರೀಕತೆಗೂ, ಅತ್ತ ಸಂಪೂರ್ಣ ಕಾಲ್ಪನಿಕ ಪರಂಪರೆಯೊಂದಕ್ಕೂ ಅನುವು ಮಾಡಿಕೊಟ್ಟ, ಬಲಪಂಥಿಯ ಯುಗ. ಮಾನವ ಸಭ್ಯತೆಯನ್ನೇ ಸೀಳಿ, ನಿಜಕ್ಕೂ ದೈತ್ಯವೇ ಆಗಿ ಪರಿಣಮಿಸಿದ ಯುಗ. ಮಾರುಕಟ್ಟೆ ಸಾರ್ವಭೌಮವಾದ ಕಲಿಯುಗ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಅನೇಕ 'ಗಾಂಧಿವಾದಿ'ಗಳು ಕೊಂಚ ಹೆಚ್ಚಾಗಿ ಮಾತನಾಡಿದ್ದರೆ, ಶುಷ್ಕ ಭಾಷಣಗಳನ್ನು ಮಾಡಿದ್ದರೆ, ಆಶ್ಚರ್ಯ ಪಡಬೇಕಾದ್ದೇನಿಲ್ಲ. ಕೌಲಗಿಯವರು ದೃತಿಗೆಡಲಿಲ್ಲ. ವಿಶಣ್ಣ ಪರಿಸ್ಥಿತಿಯ ಅರಿವಿತ್ತು ಅವರಿಗೆ. ಶಾಂತರಾಗಿ ಉಳಿದರು. ಸದ್ದಿರದೆ 'ಗಾಂಧಿ' ಮಾದರಿಯೊಂದನ್ನು ಸಲಹಿದರು.

ಸದ್ದಿರದೆ ಬದುಕುವುದು ಹಾಗೂ ವಿಪರೀತ ಸದ್ದು ಮಾಡುತ್ತ ಬದುಕುವುದು ಎರಡು ತುದಿಗಳು. ಒಬ್ಬ ಸಮರ್ಥ ಸಾಮಾಜಿಕ ಕಾರ್ಯಕರ್ತ ಇವೆರಡು ತುದಿಗಳ ನಡುವಣ ಮಧ್ಯಮ ಮಾರ್ಗವೊಂದನ್ನು ಆಯ್ಕೆ ಮಾಡಿಕೊಂಡು ನಡೆಯಲು ಬಯಸುತ್ತಾನೆ. ಕೌಲಗಿಯವರು ಸಾಕಷ್ಟು ಯಶಸ್ವಿಯಾಗಿ ಮಧ್ಯಮ ಮಾರ್ಗದಲ್ಲಿ ಕ್ರಮಿಸಿದರು. ತುಂಬು ಬದುಕು ಬದುಕಿದರು. ಕೊನೆಯವರೆಗೂ ಸಕ್ರಿಯರಾಗಿದ್ದು ಕೊಂಡು ಮರೆಯಾಗಿ ಹೋದ ಪುಣ್ಯವಂತರು ಸುರೇಂದ್ರ ಕೌಲಗಿ.

ಜನತೆಯ ಸಂಗಾತಿ : ಸುರೇಂದ್ರ ಕೌಲಗಿ

– ಕೆ.ಪಿ.ಸುರೇಶ

ದೇಶದ ಹೆಸರಾಂತ ಗಾಂಧೀವಾದಿ, ಸರ್ವೋದಯ ಕಾರ್ಯಕರ್ತ ಸುರೇಂದ್ರ ಕೌಲಗಿ ವಿಶ್ರಮಿಸಿದ್ದಾರೆ. ಅವರ ನಿಧನದೊಂದಿಗೆ ಗಾಂಧೀ ಯುಗದ ಇನ್ನೊಂದು ಕೊಂಡಿ ಕಳಚಿದೆ.

ಕೌಲಗಿಯವರು ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಕಣಕಣದಲ್ಲೂ ತುಂಬಿಕೊಂಡ ಒಂದು ತಲೆಮಾರಿನ ಪ್ರತಿನಿಧಿ. ಅವರು ಗಾಂದಿಯನ್ನು ಕಂಡಿರಲಿಲ್ಲ. ಆದರೆ ಗಾಂಧಿಯ ನೆರಳಂತಿದ್ದವರ ಒಡನಾಡಿಯಾದರು. ಒಂದು ಕನಸನ್ನು ನಿಜಗೊಳಿಸುವ ಶ್ರಮಕ್ಕೆ ಜೀವನವನ್ನೇ ಮುಡಿಪಾಗಿಟ್ಟರು.

ಸುರೇಂದ್ರ ಕೌಲಗಿಯವರ ಕಥನವೆಂದರೆ ಸಾಮಾನ್ಯನೊಬ್ಬ ಅಸ್ಖಲಿತ ಸಾಮಾಜಿಕ ಶೀಲದ ಮಾದರಿಯಾಗಿ ಬೆಳೆದ ಕಥನ.

ಸುರೇಂದ್ರರ ತಂದೆ ವೆಂಕಟೇಶ ಕೌಲಗಿ ಸಾಮಾನ್ಯ ಪೋಸ್ಟ್ ಮಾಸ್ಟರ್. ಕರುಬದೇ, ದುರಾಸೆ ಪಡದೆ, ಇದ್ದುದರಲ್ಲಿ ಮಾನವಾಗಿ ಬದುಕುವ ಋಜು ಮಾರ್ಗದ ಮನುಷ್ಯ. ಅಪ್ಪ ಬ್ರಿಟಿಷ್ ಸರ್ಕಾರದ ನೌಕರಿ ಮಾಡುತ್ತಿದ್ದರೂ, ಅಮ್ಮ ಆ ಕಾಲದ ರಾಷ್ಟ್ರೀಯ ಪ್ರಭಾವಕ್ಕೆ ಪಕ್ಕಾಗಿ ಖಾದಿ ನೂಲು ತೆಗೆಯುತ್ತಿದ್ದರಂತೆ.

೧೯೩೩ರಲ್ಲಿ ಜನಿಸಿದ ಸುರೇಂದ್ರ ಬೇರೆ ಬೇರೆ ಊರುಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಿದವರು. ಮೆಟ್ರಿಕ್ ವೇಳೆಗೆ ಬಡತನದ ಕಾರಣಕ್ಕೆ ವಿದ್ಯಾಭ್ಯಾಸಕ್ಕೆ ತಿಲಾಂಜಲಿ ನೀಡಬೇಕಾಯಿತು. ಆಗಲೇ ಕರ್ನಾಟಕ ಏಕೀಕರಣ ವಿಚಾರದಿಂದಲೂ ಪ್ರಭಾವಿತರಾಗಿದ್ದ ಅವರು ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗ ಎಂದು ಪ್ರತಿಪಾದಿಸಿ ಬರೆದ ಪತ್ರಗಳು ಟೈಂಸ್ ಆಫ್ ಇಂಡಿಯಾ ಹಾಗೂ ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಈ ಎಲ್ಲ ಬರಹಗಳನ್ನು ಅವರು ಮೆಟ್ರಿಕ್ ಹಂತದ ವಿದ್ಯಾರ್ಥಿಯಾಗಿ ಬರೆದಿದ್ದರು ಎಂಬುದು ಗಮನಿಸಬೇಕಾದ ವಿಷಯ.

ಅನ್ನದ ದಾರಿ ಹುಡುಕಲು ಮುಂಬೈನಲ್ಲಿದ್ದ ಅಣ್ಣನ ಜೊತೆ ಸೇರಿದ ಸುರೇಂದ್ರರಿಗೆ ವಕೀಲರೊಬ್ಬರ ಕಛೇರಿಯಲ್ಲಿ ಸ್ಟೆನೋ ಕೆಲಸ ಅದೇ ವೇಳೆಗೆ, ಸ್ವಾತಂತ್ರ್ಯ ಸೇನಾನಿಗಳ ಆಪ್ತ ನ್ಯಾಯಮೂರ್ತಿ ವೈದ್ಯರಾಗಿದ್ದ ದಿನ್ ಷಾ

ಮೆಹ್ತಾ ಅವರು ಸ್ಟೆನೊಗ್ರಾಫರ್ ಒಬ್ಬರನ್ನು ತಲಾಷ್ ಮಾಡುತ್ತಿದ್ದರು. ಸುರೇಂದ್ರ ಇ ಸ್ಥಾನ ತುಂಬಿದರು. ಅಲ್ಲಿ ಸುರೇಂದ್ರ ಅನೂಹ್ಯ ಗುರಿಯತ್ತ ಅಚಾನಕ ಎರಡನೇ ಹೆಜ್ಜೆ ಇಟ್ಟರು. ಮೆಹ್ತಾ ಅವರಲ್ಲಿಗೆ ಬರುತ್ತಿದ್ದ ಸ್ವಾತಂತ್ರ್ಯ ಸೇನಾನಿಗಳನ್ನು ಅಚ್ಚರಿ ಕಂಗಳಿಂದ ನೋಡುತ್ತಿದ್ದ ಸುರೇಂದ್ರರಿಗೆ ಹೊಸ ಲೋಕವೊಂದು ಅನಾವರಣವಾಯಿತು. ಮೆಹ್ತಾ ಅವರಲ್ಲಿಗೆ ಬರುತ್ತಿದ್ದ ಲೋಕನಾಯಕ ಜೆಪಿ ತನಗೊಬ್ಬ ಆಪ್ತ ಕಾರ್ಯದರ್ಶಿ/ಸ್ಟೆನೋ ಬೇಕು ಎಂದು ಪ್ರಸ್ತಾಪಿಸಿದರು. ಆಗಲೇ ಜೆಪಿ ಸಕ್ರಿಯ ರಾಜಕೀಯಕ್ಕೆ ವಿದಾಯ ಹೇಳಿ ವಿನೋಬಾ ಅವರ ಸಹವರ್ತಿಯಾಗಿದ್ದರು. ಬಿಹಾರದ ಸುಖೋದೆವರಾದಲ್ಲಿ ಸರ್ವೋದಯ ಕೇಂದ್ರವೊಂದನ್ನು ಸ್ಥಾಪಿಸಿದ್ದರು. 'ಸರ್ವೋದಯ ಕಾರ್ಯಕರ್ತನಾಗಿ ನಿಮ್ಮೊಂದಿಗೆ ದುಡಿಯುತ್ತೇನೆ' ಎಂದು ಸುರೇಂದ್ರ ಜೆಪಿಯವರಲ್ಲಿ ನಿವೇದಿಸಿಕೊಂಡರು. ಅಲ್ಲಿಗೆ ಸುರೇಂದ್ರ ಅವರ ಬದುಕಿನ ಗುರಿ ನಿಚ್ಚಳವಾಯಿತು. ಜೆಪಿ ನೀಡುತ್ತಿದ್ದ ಐವತ್ತು ರೂಪಾಯಿ ಮಾಸಿಕ ವೇತನದಲ್ಲಿ ಅರ್ಧವನ್ನು ಮುಂಬಯಿಯಲ್ಲಿ ಏಗುತ್ತಿದ್ದ ತಮ್ಮ ಅಣ್ಣನಿಗೆ ಕಳಿಸುತ್ತಿದ್ದ ಸುರೇಂದ್ರ ಜೆಪಿಯ ನೆರಳಾಗಿ ಹಿಂಬಾಲಿಸಿದರು.

ಇಲವಾಲದಲ್ಲಿ ೧೯೫೫ರಲ್ಲಿ ನಡೆದ ಸರ್ವೋದಯ ಮೇಲ ಕೌಲಗಿಯವರ ಬದುಕಿಗೆ ಇನ್ನೊಂದು ತಿರುವು ನಿಡಿತು. ಸರ್ವೋದಯ ಕಾರ್ಯಕರ್ತರು ಒಂದೊಂದು ಹಳ್ಳಿಗಳನ್ನು ಆರಿಇಕೊಂಡು ಅಲ್ಲಿ ದುಡಿಯಬೇಕೆಂಬ ಆದರ್ಶದಂತೆ ಕೌಲಗಿ ಮೇಲುಕೋಟೆಗೆ ಬಂದರು. ಆಕಾಲದ ಉತ್ಸಾಹೀ ಖಾದ್ರಿ ಶಾಮಣ್ಣ ಅವರ ಒತ್ತಾಸೆ ಈ ಆಯ್ಕೆಗೆ ಕಾರಣ

ಮೇಲುಕೋಟೆಗೆ ಬಂದ ಮೊದಲ ದಿನಗಳನ್ನು ಕೌಲಗಿಯವರು ಹೀಗೆ ವರ್ಣಿಸುತ್ತಾರೆ,

"೧೯೫೦ರ ದಶಕದಲ್ಲಿ ಮೇಲುಕೋಟೆ ಇಂದಿನ ಯಾವ ಆಧುನಿಕ ಸೌಕರ್ಯವನ್ನೂ ಪಡೆದಿರಲಿಲ್ಲ. ಬ್ಯಾಂಕಿನ ಸೌಕರ್ಯ ಇರಲಿಲ್ಲ. ಪ್ರಾಥಮಿಕ ಆರೋಗ್ಯಕೇಂದ್ರವೊಂದಿತ್ತು. ಹಳ್ಳಿಯ ಜನ ಎತ್ತಿನ ಗಾಡಿ ಕಟ್ಟಿಕೊಂಡುಬರುತ್ತಿದ್ದರು. ಗರ್ಭಿಣಿ ಮಹಿಳೆಯರೂ ಎತ್ತಿನ ಗಾಡಿಯಲ್ಲೇ ಬರುತ್ತಿದ್ದರು. ಪಕ್ಕದ ಮತ್ತು ದೂರದ ಹಳ್ಳಿಗಳಿಗೆಲ್ಲಾ ನಡೆದುಕೊಂಡೇ ಹೋಗಬೇಕಾಗಿತ್ತು. ಮೈಸೂರು–ಬೆಂಗಳೂರು ಕಡೆಗೆ ಒಂದೆರಡು ಖಾಸಗಿ ಬಸ್ಸುಗಳಿದ್ದವು. ಮೇಲುಕೋಟೆಯವರಿಗೆ ಜಕ್ಕನಹಳ್ಳಿಯಿಂದ ಬೆಟ್ಟ ಹತ್ತಿ ೪ ಮೈಲಿ ನಡೆದು ಬರುವುದು ಮಾಮೂಲಿನ ಸಂಗತಿಯಾಗಿತ್ತು.

ಇದು ಮೇಲುಕೋಟೆಯ ಚಿತ್ರಣವಾದರೆ, ಸುತ್ತಲೂ ಒಣಭೂಮಿ

ಪ್ರದೇಶ. ಮಳೆಯನ್ನವಲಂಬಿಸಿದ ವ್ಯವಸಾಯ ಇದ್ದುದರಿಂದ ಗ್ರಾಮಗಳಲ್ಲಿ ಬಹಳಷ್ಟು ಬಡತನವಿತ್ತು. ನಿರಕ್ಷರತೆ ಇತ್ತು. ಗ್ರಾಮಗಳಲ್ಲಿ ಯಾವ ಉದ್ಯೋಗವೂ ಇಲ್ಲದ್ದರಿಂದ ಹಳ್ಳಿಯ ಮಹಿಳೆ, ಪುರುಷ ಮಕ್ಕಳಾದಿಯಾಗಿ ಪಕ್ಕದ ವಸಂತಪುರವೆಂಬ ಕಾಡಿಗೆ ಹೋಗಿ ಸೌದೆ ಸಂಗ್ರಹಿಸಿ ೫-೬ ಮೈಲಿ ದೂರದ ಮೇಲುಕೋಟೆಗೆ ತಲೆಯ ಮೇಲೆ ಹೊರೆ ಹೊತ್ತುಕೊಂಡು ಬಂದು, "ಸೌದೆ, ಸೌದೆ" ಎಂದು ಕೂಗುತ್ತಾ ಊರಿನ ಓಣಿ ಓಣಿ ಸುತ್ತುತ್ತಿದ್ದರು. ಒಂದು ಹೊರೆಯ ಬೆಲೆ ಒಂದೂವರೆಯಿಂದ ಎರಡು ರೂಪಾಯಿ. ಈ ಸಂಪಾದನೆಗಾಗಿ ಅವರು ಇಡೀ ದಿನ ಪರಿಶ್ರಮ ಪಡಬೇಕಾಗುತ್ತಿತ್ತು. ಹಾಗೇ ಮೊಸರು ವ್ಯಾಪಾರ, ಬಿದಿರಿನ ಬುಟ್ಟಿ ಮಧ್ಯೆ ಮಡಕೆ ಇಟ್ಟುಕೊಂಡು, "ಮೊಸರು. ಮೊಸರು" ಎಂದು ಕೂಗುತ್ತಾ ಊರಿನ ಬೀದಿಬೀದಿ ಸುತ್ತುತ್ತಿದ್ದರು. ಬಿದಿರಿನ ಒಂದು ಪಾವು ಮೊಸರಿಗೆ ೧೦-೧೫ ಪೈಸೆ. ಪ್ರತೀ ಮಂಗಳವಾರದ ಸಂತೆಗೆ ರೈತರು ತರಕಾರಿ,ಕಾಳು □ಕಡಿ ತರುತ್ತಿದ್ದರು, ಎಷ್ಟು ವ್ಯಾಪಾರವಾಯಿತೋ ಅದೆ ದೊಡ್ಡದೆಂದು ಭಾವಿಸಿ ಮನೆಗೆ ಹೋಗುತ್ತಿದ್ದರು. ಹೀಗೆ ಒಟ್ಟಾರೆಯಾಗಿ ಪ್ರಕೃತಿ ಸೌಂದರ್ಯದ ನಡುವೆಯೂ, ವಿದ್ವತ್ತು, ಸಂಸ್ಕೃತಿಗಳ ಮಧ್ಯೆಯೂ ಬಡಕಲಾದ ಊರಾಗಿ, ಸಾವಿರ ವರ್ಷಗಳ ಇತಿಹಾಸದ ಮುಸುಕು ಹೊದ್ದು ಮಲಗಿತ್ತು".

ಪು.ತಿನ. ಕಂಡ ಮೊಸರು ಮಾರುವ ನಂದಗೋಕುಲಕ್ಕಿಂತ ಭಿನ್ನವಾದ ಬಡತನದ ಆಯಾಮ ಕೌಲಗಿಯವರಿಗೆ ಕಂಡಿತ್ತು. ಮೇಲುಕೋಟೆಯಲ್ಲಿ ಸರ್ವೋದಯ ಆದರ್ಶದ ಕೆಲಸ ಮಾಡುತ್ತಿದ್ದಾಗಲೇ ಪರಿಚಯವಾದ ಗಿರಿಜಾ ಅವರನ್ನು ಸುರೇಂದ್ರ ವಿವಾಹವಾದರು. ಇಬ್ಬರೂ ಅಲ್ಲಿಂದಾಚೆಗೆ ದಣಿವರಿಯದ ಸೇವೆಯಲ್ಲಿ ನಿರತರಾಗಿದ್ದು ನಮ್ಮ ಕಾಲದ ಅಪೂರ್ವ ಘಟನೆಗಳಲ್ಲೊಂದು.

ತಮ್ಮ ಕಾರ್ಯಚಟುವಟಿಕೆಗಳಿಗೆ ಸಾಂಸ್ಥಿಕ ರೂಪ ನೀಡಲು ೧೯೬೦, ಆಗಸ್ಟ್ ೧೨ರಂದು ಜನಪದ ಸೇವಾ ಟ್ರಸ್ಟ್ ಸ್ಥಾಪಿಸಿದರು. ಸ್ವಲ್ಪ ಸಮಯ ಕೌಲಗಿ ದಂಪತಿಗಲು ನಂಜನಗೂಡಿನ ಕೆಂಪಿ ಸಿದ್ದನ ಹುಂಡಿಗೆ ಬಂದರು. ಕೆಂಪಿ ಸಿದ್ದನ ಹುಂಡಿಯಲ್ಲಿ ಸರ್ವೋದಯ ಕಾರ್ಯಕರ್ತರಾಗಿ ದುಡಿದ ಕೌಲಗಿ ದಂಪತಿಗಳು ಮತ್ತೆ ಮೇಲುಕೋಟೆಗೆ ಮರಳಿದರು

ಅಲ್ಲಿಂದಾಚೆಗೆ ಅರ್ಧ ಶತಮಾನಕ್ಕೂ ಮಿಕ್ಕಿ ಏಕಾಗ್ರವಾಗಿ ಈ ದಂಪತಿಗಳು ಸೇವೆಯ ಮಾದರಿಯೊಂದನ್ನು ರೂಪಿಸಿದರು. ಅಂಗವಿಕಲ ಮಕ್ಕಳ ಕ್ಷೇಮಾರ್ಥ ಸ್ಥಾಪಿಸಿದ ಕರುಣಾಗೃಹ ರಾಜ್ಯದಲ್ಲೇ ಮಾದರಿಯಾಯಿತು. ಮೇಲುಕೋಟೆಯ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೃಷಿ ವಿಕಾಸದ ಕೆಲಸವನ್ನೂ ಕೌಲಗಿ ಮಾಡಿದರು. ಔಪಚಾರಿಕ ಶಿಕ್ಷಣ ಪಡೆಯದವರಿಗೆ ಕಂಡೆನ್ಸ್ಡ್

ಕೋರ್ಸ್ ಆರಂಭಿಸಿದರು. ಮುದ್ರಣಾಲಯ, ಟೈಪಿಂಗ್ ತರಗತಿ, ಶಾಲೆ– ಹೀಗೆ ಕೌಲಗಿ ದಂಪತಿಗಳು ಸಮಗ್ರವಾಗಿ ಚಟುವಟಿಕೆಗಳನ್ನು ಹೆಣೆಯುತ್ತಾ ಬಂದರು.

ಸಾವಯವ ಕೃಷಿ ಬಗ್ಗೆ ಮೊದಲ ಪ್ರಯೋಗಗಳನ್ನು ಶುರುಮಾಡಿದ್ದೂ ಜನಪದ ಸೇವಾ ಟ್ರಸ್ಟ್. ಕೌಲಗಿಯವರ ಹಿರಿಯ ಮಗ ಸಂತೋಷ ಎಂಜಿನಿಯರಿಂಗ್ ಶಿಕ್ಷಣ ಬಿಟ್ಟು ಟ್ರಸ್ಟ್‌ನ ಕಾರ್ಯಕರ್ತನಾದ. ನೇಕಾರಿಕೆ, ಸಹಜ ಕೃಷಿಯ ಆಳ ಜ್ಞಾನ ಬೆಳೆಸಿಕೊಂಡ ಸಂತೋಷ ಒಂದು ಹುಲ್ಲಿನಕ್ರಾಂತಿಯ ಅನುವಾದದ ಮೂಲಕ ಕೌಲಗಿಯವರ ರಚನಾತ್ಮಕ ಕೆಲಸಗಳಿಗೆ ಹೊಸ ಆಯಾಮ ನೀಡಿದ. ಎಂಭತ್ತರ ದಶಕದಲ್ಲಿ ಹೊಸ ರಾಜಕೀಯ ಆಶಯಗಳಿಗೆ ತೆರೆದುಕೊಂಡ ಕೌಲಗಿಯವರು ಮತದಾರರ ವೇದಿಕೆ ಸ್ಥಾಪಿಸಿ ಪ್ರಜಾಸತ್ತೆಯ ಆಶಯಗಳನ್ನು ಆಳಗೊಳಿಸುವ ಕೆಲಸ ಮಾಡಿದರು. ಅಭಿವೃದ್ಧಿಯ ಹೆಸರಿನಲ್ಲಿ ಪರಿಸರ ನಾಶದಿಂದ ಹಿಡಿದು ಅಸಮಾನತೆಯನ್ನು ಪೊರೆಯುವ ಎಲ್ಲಾ ಪ್ರಭುತ್ವದ ಸಂಚಿನ ವಿರುದ್ಧ ದನಿಯೆತ್ತಿದರು. ಕಾರ್ಪೋರೇಟ್ ನಿಯಂತ್ರಣಕ್ಕೆ ದೇಶ ಬರುತ್ತಿರುವುದುರ ವಿರುದ್ಧ ಸದಾ ಸೆಟೆದು ನಿಲ್ಲುತ್ತಿದ್ದ ಕೌಲಗಿಯವರು ಗ್ರಾಮಸ್ವರಾಜ್ಯ ಮತ್ತು ವಿಕೇಂದ್ರೀಕೃತ ಉತ್ಪಾದನೆಯ ಪ್ರಾಮುಖ್ಯತೆ ಬಗ್ಗೆ ಸತತವಾಗಿ ಮಾತಾಡಿದರು.

ಯಾವ್ಯಾವುದೋ ಪ್ರಶಸ್ತಿಗಳು ಅರಸಿ ಬಂದಾಗಲೂ ನಿರಾಕರಿಸುತ್ತಾ ಋಜು ಮಾರ್ಗ ತೋರಿದರು. ದೇಸೀ ಪ್ರಶಸ್ತಿ ಮತ್ತು ಜಮುನಾಲಾಲ್ ಬಜಾಜ್ ಪ್ರಶಸ್ತಿಗಳನ್ನು ಮಾತ್ರಾ ಅವರು ಸ್ವೀಕರಿಸಿದ್ದು. ಅವರು ಬಹು ಗೌರವಿಸುತ್ತಿದ್ದ ಗಾಂಧಿಯ ಆದರ್ಶಗಳ ಪ್ರಣಾಲಿ ಈ ಪ್ರಶಸ್ತಿಗಳ ಹಿಂದೆ ಇತ್ತು.

ಈ ಅವಿಶ್ರಾಂತ ಕೆಲಸದ ಕಾರಣಕ್ಕೇ ಕೆಲವು ವರ್ಷಗಳ ಹಿಂದೆ ಅನಾರೋಗ್ಯಕ್ಕೀಡಾದ ಕೌಲಗಿಯವರು ಮತ್ತೆ ವಾಕರ್ ಬಳಸುತ್ತಾ ರಾಜ್ಯಾದ್ಯಂತ ಓಡಾಡುತ್ತಿದ್ದರು!. ಕಳೆದ ವರ್ಷ ಅವರ ಸಂಗಾತಿ ನಮ್ಮೆಲ್ಲರ ಪ್ರೀತಿಯ ಅಮ್ಮ ಗಿರಿಜಾ ಕೌಲಗಿ ಸ್ವರ್ಗೀಯರಾದ ಮೇಲೆ ಕೂಡಾ ಸುರೇಂದ್ರ ಕೌಲಗಿಯವರು ತಮ್ಮ ಫೋಕಸ್ ಕಳೆದುಕೊಳ್ಳಲಿಲ್ಲ. ಬರವಣಿಗೆ, ಓದು, ಉಪನ್ಯಾಸ ಚರ್ಚೆಗಳಲ್ಲಿ ಸತತವಾಗಿ ತೊಡಗಿಸಿಕೊಂಡರು. ಮೊನ್ನೆಯೂ ಅಷ್ಟೇ. ಆಸ್ಪತ್ರೆಗೆ ದಾಖಲಾಗುವ ಮುನ್ನಾ ದಿನ ಮೈಸೂರಿನ ಕಾಲೇಜೊಂದರಲ್ಲಿ ಉಪನ್ಯಾಸ ನೀಡಿದ್ದರು. ಜಿಎಸ್‌ಟಿ ಮೇಲೆ ಲೇಖನ ಬರೆದಿದ್ದರು. ಅವರು ಆಸ್ಪತ್ರೆಯಲ್ಲಿ ಜೀವನ್ಮರಣದ ಹೋರಾಟದಲ್ಲಿದ್ದಾಗ ಪ್ರಜಾವಾಣಿಯಲ್ಲಿ ಆ ಲೇಖನ ಪ್ರಕಟವಾಯಿತು!!. ಜನಪದ ವಿಚಾರ ಎಂಬ ಗಾಂಧೀಯ ಸರ್ವೋದಯ ವಿಚಾರಗಳ ಮಾಸಿಕವೊಂದನ್ನು

ಎಷ್ಟೇ ಕಷ್ಟವಾದರೂ ಪ್ರಕಟಿಸುತ್ತಾ ಬಂದರು.

ಮೊನ್ನೆ ನಿಧನರಾದಾಗ ಒಂದು ತಲೆಮಾರು ಮಾಡಬೇಕಾದ ಕೆಲಸದ ನೀಲನಕ್ಷೆ ಮುಂದಿಟ್ಟೇ ನೀಗಿಕೊಂಡರು.

ಕರ್ನಾಟಕದ ಸಾಹಿತ್ಯ- ಸಾಂಸ್ಕೃತಿಕ ಹೋರಾಟಗಳ ಜಗತ್ತು ಆಪ್ತವಾಗಿದ್ದ ಏಕೈಕ ಕೇಂದ್ರ ಜನಪದ ಸೇವಾ ಟ್ರಸ್ಟ್ ಎಂದರೆ ತಪ್ಪಾಗಲಾರದು. ವಿಭಿನ್ನ ಸೈದ್ಧಾಂತಿಕ ನಿಲುವುಳ್ಳವರೂ ಕೌಲಗಿಯವರ ಜೊತೆ ಸಂವಾದಿಸುತ್ತಿದ್ದರು. ಗೌರವಿಸುತ್ತಿದ್ದರು.

ವೈಯಕ್ತಿಕವಾಗಿ ನನಗೆ ಅವರು ದೃಷ್ಟಿ ನಿಚ್ಚಳ ಗೊಳಿಸಿದ ಗುರು ಮಾರ್ಗದರ್ಶಿ. ೧೯೮೯ರಲ್ಲಿ ಅವರ ಮತ್ತು ಸಂತೋಷನ ಪರಿಚಯವಾಗಿದ್ದೇ ನಾನು ನನ್ನ ಕೆಲಸ ತೊರೆದು ಅವರೊಂದಿಗೆ ಸೇರಿದೆ. ಅಲ್ಲಿಂದೀಚೆಯ ಮೂರು ದಶಕದ ನನ್ನ ಹಾಡುಪಾಡು ಸಾಹಸಗಳ ಹಿಂದೆ ಇದ್ದ ಸ್ಥೈರ್ಯದ ಮೂಲ ಅವರೇ. ಅವರ ಒಡನಾಟವಿದ್ದ ಎಲ್ಲರಿಗೂ ಅವರು ದಾದಾ. ಆದರ್ಶಗಳ ಅನುಷ್ಠಾನ ಪರ್ಯಾಯಗಳ ಹುಡುಕಾಟ, ಹೋರಾಟದ ಕಾವು ಇರುವ ಎಲ್ಲರಿಗೂ ದಾದಾ ಸ್ಫೂರ್ತಿಯ ಸೆಲೆ-ನೆಲೆ ಎರಡೂ ಆಗಿದ್ದರು.

ನಮ್ಮ ಕಾಲದ ಎಲ್ಲಾ ಅಪಸವ್ಯಗಳ ಸುಳಿ- ಬಿರುಗಾಳಿಗಳ ಮಧ್ಯೆಯು ಅವರು ನೈತಿಕ ದಿಕ್ಸೂಚಿ ಆಗಿದ್ದರು. ಈಗ ಈ ಹೊಣೆ ನಮ್ಮ ಮೇಲಿದೆ.

ಸ್ವಾತಂತ್ರ್ಯ ಚಳವಳಿಯೋತ್ತರ ಗಾಂಧಿವಾದಿಯ ಮಾದರಿ: ಸುರೇಂದ್ರ ಕೌಲಗಿ

– ಡಾ॥ ವಾಸು

ಸಾಮಾನ್ಯವಾಗಿ ಗಾಂಧಿವಾದಿಯೆಂದರೆ, ಸ್ವಾತಂತ್ರ್ಯ ಹೋರಾಟಗಾರರೆಂದೇ ತಿಳಿಯಲಾಗುತ್ತಿದ್ದ ಕಾಲದಲ್ಲಿ ಬದುಕಿದ್ದ ಸುರೇಂದ್ರ ಕೌಲಗಿಯವರು, ಈ ವರ್ಷದ 'ಸ್ವಾತಂತ್ರ್ಯದ ತಿಂಗಳಲ್ಲೇ' ಇಲ್ಲವಾದರು. ಸ್ವಾತಂತ್ರ್ಯ ಬಂದಾಗಲೂ ಸುರೇಂದ್ರ ಕೌಲಗಿಯವರಿಗೆ ೧೩ ವರ್ಷಗಳು ಮಾತ್ರ. ಹಾಗಾಗಿ ಅವರು, ಸ್ವತಂತ್ರ ಸಂಗ್ರಾಮದಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿರಲಿಲ್ಲ. ಆದರೂ 'ಸ್ವಾತಂತ್ರ್ಯ ಹೋರಾಟದ ಮೌಲ್ಯ'ಗಳಿಗೆ ಬದ್ಧವಾಗಿ ಜೀವಿಸಿದರು. ನಿರಂತರವಾದ ರಚನಾತ್ಮಕ ಚಟುವಟಿಕೆಗಳ ಜೊತೆಗೆ, ಆಗಾಗ್ಗೆ ಸಮಾಜದಲ್ಲಿ ನಡೆಯುವ ಅನ್ಯಾಯದ ವಿರುದ್ಧ ದನಿಯೆತ್ತುವ ಮೂಲಕ 'ಗಾಂಧೀ ಮಾರ್ಗ'ದ ನಿಷ್ಠಾವಂತ ಅನುಯಾಯಿಯಾಗಿ ಸಾಕಷ್ಟು ಕಾಲ ನೆನಪಿನಲ್ಲಿ ಉಳಿಯುತ್ತಾರೆ.

ಮಂಡ್ಯದ ಪರಿಸರದಲ್ಲಿ ಹಲವರು ಅವರನ್ನು ಕೌಜಲಗಿಯೆಂದು ಕರೆಯುತ್ತಿದ್ದುದನ್ನು ಗಮನಿಸಿದ್ದೇನೆ. ಕೌಜಲಗಿ ಮತ್ತು ಕೌಲಗಿ ಎರಡೂ ಸಹಾ ಉತ್ತರ ಕರ್ನಾಟಕದ ಹೆಸರುಗಳೇ. ಅಲ್ಲಿಂದ ಬಂದು, ಮೇಲುಕೋಟೆಯವರೇ ಆಗಿಬಿಟ್ಟಿದ್ದು, ಇಲ್ಲಿನವರೂ ಅವರನ್ನು ಮಂಡ್ಯದ ಅವಿಭಾಜ್ಯ ಅಂಗವೆಂದು ಭಾವಿಸಿದ್ದು ಆಶ್ಚರ್ಯದ ಸಂಗತಿಯೇನಲ್ಲ. ಮಂಡ್ಯದ ಬಗೆಗಿನ 'ಹೊರಗಿನ ಭಾವನೆ'ಗೆ ವಿರುದ್ಧವಾಗಿ ಇಲ್ಲಿ ಮಂಡ್ಯೇತರರನ್ನು ಹೊರಗಿನವರು–ಒಳಗಿನವರು ವ್ಯತ್ಯಾಸಗಳಿಲ್ಲದೇ ಒಳಗೊಳ್ಳುವ ಮನೋಭಾವ ಇದೆ. ಹಾಗಾಗಿಯೇ ನಮ್ಮಂಥ ಹಲವರಿಗೆ ಮೇಲುಕೋಟೆಯನ್ನು ನೆನೆಸಿಕೊಂಡಾಗ ಅದರಲ್ಲಿ ಕೌಲಗಿಯವರು ತಪ್ಪದೇ ಮನಸ್ಸಿನಲ್ಲಿ ಹಾದು ಹೋಗುತ್ತಾರೆ. ಮೇಲುಕೋಟೆಯ ವಿಚಾರ ಬಂದಾಗ ಜನಸಾಮಾನ್ಯರಿಗೆ ಚೆಲುವನಾರಾಯಣ, ವೈರಮುಡಿ, ಬೆಟ್ಟದ ಮೇಲಿನ ದೇವಸ್ಥಾನ, ಅಯ್ಯಂಗಾರರು, ಪುಳಿಯೋಗರೆ ನೆನಪಿಗೆ ಬರುವ ಹಾಗೆಯೇ, ಇನ್ನೂ ಹಲವರಿಗೆ ಖಾದ್ರಿ ಶಾಮಣ್ಣ, ಪು.ತಿ.ನ., ಸುರೇಂದ್ರ ಕೌಲಗಿಯವರು ನೆನಪಿಗೆ ಬರುತ್ತಾರೆ.

ಧಾರ್ಮಿಕ ವ್ಯಕ್ತಿಯಾಗಿದ್ದೂ ಸೆಕ್ಯುಲರ್ ಆಗಿರಬಲ್ಲ ಈ ನಾಡಿನ ವಿಶಿಷ್ಟ ಸಾಂಸ್ಕೃತಿಕ ವ್ಯಕ್ತಿಗಳಲ್ಲಿ ಪು.ತಿ.ನ ಒಬ್ಬರು. ಪರಮ ನಾಸ್ತಿಕರಾಗಿದ್ದ ಶಿವರಾಮ ಕಾರಂತರು ಬಾಬ್ರಿ ಮಸೀದಿ ಧ್ವಂಸವನ್ನು ಸಮರ್ಥಿಸಿದ್ದರೆ, ಗೋಕುಲ

ನಿರ್ಗಮನವನ್ನು ಬರೆದ ಪು.ತಿ.ನ ಅವರು ಅದನ್ನೆಂದೂ ಒಪ್ಪಲಿಲ್ಲ. ಕೌಲಗಿಯವರದ್ದು ಇನ್ನೊಂದು ಮಾದರಿ. ಅವರು ಅಧಾರ್ಮಿಕ ವ್ಯಕ್ತಿಯೆಂದು ಯಾರೂ ಹೇಳಲಾರರು. ಹಾಗೆಂದು ಪರಮ ಧಾರ್ಮಿಕರೆಂದೂ ಭಾವಿಸಲಾಗದು. ಆದರೆ ಸೆಕ್ಯುಲರ್. ಗಾಂಧಿಯವರ ರೀತಿಯಲ್ಲಿ 'ಹಿಂದೂ'ವಾಗಿದ್ದುಕೊಂಡು ಏಸುವನ್ನೂ, ರಹೀಮನನ್ನೂ ಭಜನೆಯಲ್ಲಿ ಅವರು ನೆನೆಯಬಲ್ಲರು. ಅವರ ಹೊಸಜೀವನ ದಾರಿಯಲ್ಲಿ ಸಂತೋಷ್ ಕೌಲಗಿಯವರು ಅಲ್ಲಿನ ನಿತ್ಯದ ರೂಢಿಯಂತೆ ಸರ್ವಧರ್ಮ ಪ್ರಾರ್ಥನೆ 'ಓಂ ತತ್ಸತ್ ಶ್ರೀ ನಾರಾಯಣ ನೀ' ಹೇಳಿಕೊಟ್ಟಾಗ ನಮಗೆ ಮುಜುಗರವಾಗಿತ್ತು. ಕೋಟಿಗಟ್ಟಲೆ ಧಾರ್ಮಿಕ ಜನರನ್ನು ನಾಡಕಟ್ಟುವ ಕಾಯಕದಲ್ಲಿ ಒಳಗೊಳ್ಳುವ ಸಹಜ ಚಟುವಟಿಕೆಗಳಾಗಿ ಅದು ಅಲ್ಲಿ ನೆಲೆಗೊಂಡಿತ್ತು. ಆ ಪರಿಸರದಲ್ಲಿ ಮಾಂಸಾಹಾರ ನಿಷಿದ್ಧವಾಗಿದ್ದರೂ, 'ನೀವು ಮಾಂಸಾಹಾರ ಬಿಡಬೇಕು' ಎಂಬ ಪರೋಕ್ಷ ಸಂದೇಶವನ್ನು ರವಾನಿಸುವ 'ಮೇಲರಿಮೆಯ ಬ್ರಾಹ್ಮಣ್ಯ' ಕಾಣುವುದಿಲ್ಲ. ಸೆಕ್ಯುಲರ್ ಆಗಿರುವ ಈ ಮಾದರಿಯ ಪ್ರತೀಕವಾಗಿ ಬದುಕಿದ, ಬದುಕುತ್ತಿರುವ ಕೌಲಗಿಗಳು ಇಲ್ಲೇ ಮೇಲುಕೋಟೆಯಲ್ಲೇ ಇದ್ದಾರೆ.

ಕೆಲವು ಊರುಗಳೂ ವಿಚಿತ್ರ. ಮೇಲ್ನೋಟಕ್ಕೆ ಪರಸ್ಪರ ಬೇರೆಯೇ ಎನ್ನಿಸುವ ವಿಚಾರಗಳು/ಚಟುವಟಿಕೆಗಳೆರಡೂ ಅಲ್ಲಿ ನಡೆಯುತ್ತಿರುತ್ತವೆ. ಶೃಂಗೇರಿಯಲ್ಲಿ ಅಲ್ಲಿನ ಮಠದ ಕಾರ್ಯಾಚರಣೆ ಹಾಗೂ ಕಲ್ಕುಳಿ ವಿಠಲ ಹೆಗ್ಡೆಯವರು ಮತ್ತು ಇನ್ನಿತರರ ಕಟು ವೈಚಾರಿಕ ಚಟುವಟಿಕೆಗಳು. ಉಡುಪಿಯಲ್ಲಿ ಕೋಮು ಸೌಹಾರ್ದ ವೇದಿಕೆಯ ಚಟುವಟಿಕೆಗಳು ಹಾಗೂ ಅಷ್ಟಮಠಗಳ ಕಾರ್ಯಾಚರಣೆ. ಮೇಲುಕೋಟೆಯ ವೈದಿಕ ಪರಂಪರೆ ಇವೆರಡಕ್ಕಿಂತ ಭಿನ್ನ. ಮೇಲಿನ ಉದಾಹರಣೆಗಳು ಅದ್ವೈತ, ದ್ವೈತ ಪರಂಪರೆಯ ಕರ್ಮಠ ಪೀಠಗಳು. ಇವತ್ತಿಗೂ ಪ್ರತಿಗಾಮಿ ರಾಜಕೀಯ, ಸಾಮಾಜಿಕ ಹುನ್ನಾರಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಭಾಗಿಯಾಗುತ್ತಿರುವ ಮಠಗಳು. ಅವಕ್ಕಿಂತ ಭಿನ್ನವಾಗಿ ಎಲ್ಲಾ ಜಾತಿ ಜನರಿಗೂ ದೀಕ್ಷೆ ಕೊಟ್ಟು ಹೊಸ ಮಾರ್ಗವನ್ನು ಹುಟ್ಟು ಹಾಕಿದ ರಾಮಾನುಜಾಚಾರ್ಯರ ಕರ್ಮಭೂಮಿ ಮೇಲುಕೋಟೆ. ಇವರಿಗೆ ಇಂದಿನ ಸಾಮಾಜಿಕ ರಾಜಕೀಯ ವಲಯಗಳಲ್ಲಿ ಅಂತಹ ದೊಡ್ಡ ಪ್ರಭಾವವೇನೂ ಇಲ್ಲ. ಈ ಪಂಥ ಆರಂಭವಾದ ಕಾಲಕ್ಕಿಂತ ಭಿನ್ನವಾಗಿ ಬ್ರಾಹ್ಮಣ್ಯದ ಎಲ್ಲಾ ತಾರತಮ್ಯದ ಗುಣಗಳನ್ನು ನಂತರ ಸಾಕಷ್ಟು ಮೈಗೂಡಿಸಿಕೊಂಡಿತು. ಕರ್ನಾಟಕದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈ ಪಂಥದ ಜನ ಅಷ್ಟು ಆಕ್ರಮಣಕಾರಿಯಾಗಿಲ್ಲದೇ ಇರುವುದರಿಂದಲೋ ಏನೋ, ಅದೇ ಜಾಗದಲ್ಲಿ

ಭಿನ್ನ ರೀತಿಯ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳನ್ನು ಕಂಡುಕೊಂಡವರೂ ಮೃದುವಾಗಿಯೇ ಇದ್ದಿರಬಹುದು.

ಆದರೆ, ಮಂಡ್ಯ ಜಿಲ್ಲೆಯಲ್ಲಿ ಬಿಎಂಐಸಿ ಯೋಜನೆಯ ವಿರುದ್ಧ ಜನಜಾಗೃತಿ ಮೂಡಿಸುವ ಮೂಲಕ ಆರಂಭವಾದ ನಮ್ಮ ಚಟುವಟಿಕೆಗಳಲ್ಲಿ ಕೌಲಗಿಯವರು ಸಕ್ರಿಯವಾಗಿ ಪಾಲ್ಗೊಂಡರು. ಗಾಂಧಿವಾದಿಗಳೆಲ್ಲರಿಗೆ ಜಾಗತೀಕರಣ ಯುಗದ ಯೋಜನೆಗಳು ಬಹುದೊಡ್ಡ ಅಪಾಯವಾಗಿ ಕಂಡಿತು. ಹಾಗಾಗಿಯೇ ಬೆಂಗಳೂರಿನಲ್ಲಿ ಎಚ್.ಎಸ್.ದೊರೆಸ್ವಾಮಿಯವರು ಮತ್ತು ಮಂಡ್ಯದಲ್ಲಿ ಡಾ.ಸಿ.ಬಂದೀಗೌಡರಂತಹ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಆ ಹೋರಾಟದ ಮುಂಚೂಣಿಯಲ್ಲಿದ್ದರು. ಅಂತಹ ಇನ್ನೂ ಹಲವು ಚಟುವಟಿಕೆಗಳಲ್ಲಿ ಕೌಲಗಿಯವರು ನಮ್ಮೊಡನಿದ್ದರು. ಆಗಾಗ್ಗೆ ಬರುವ ಇಂತಹ 'ಇಶ್ಯೂ' ಆಧಾರಿತ ಹೋರಾಟಗಾರರಾಗಿ ಕೆಲವರ ಜೀವನ ಮುಗಿದು ಹೋಗಿಬಿಡುತ್ತದೆ. ಆ ಹೊತ್ತಿಗೆ ದೂರದಿಂದಷ್ಟೇ ಕೌಲಗಿಯವರನ್ನು ನೋಡಿದ್ದ ನಮ್ಮಂಥವರಿಗೆ, ಇವರೂ ಒಬ್ಬ ಸಜ್ಜನ ಹಿರಿಯ ವ್ಯಕ್ತಿಯಾಗಷ್ಟೇ ಆರಂಭದಲ್ಲಿ ಕಂಡಿದ್ದರು. ಈ ಒಡನಾಟದ ಫಲವಾಗಿ ಮೇಲುಕೋಟೆಗೆ ಭೇಟಿ ಕೊಟ್ಟಾಗ, ಅಲ್ಲಿನ ಅವರ ಚಟುವಟಿಕೆಗಳ ವಿಸ್ತಾರದ ಅರಿವಾಗಿದ್ದು.

ಗಾಂಧಿ ಮಾದರಿಯ ರಚನಾತ್ಮಕ ಚಟುವಟಿಕೆಗಳ ಕೆಲವು ಮಾಡೆಲ್‌ಗಳನ್ನು ಅವರು ಅಲ್ಲಿ ಕಟ್ಟಲೆತ್ನಿಸಿದ್ದು ನಮಗೆ ಕಂಡಿತು. ನಾವು ನೋಡುವ ಹೊತ್ತಿಗೆ ಅವರು ಕೆಲವು ಹಳೆಯ ಪ್ರಯತ್ನಗಳನ್ನು ನಿಲ್ಲಿಸಿದ್ದರು; ಹೊಸವನ್ನು ಕೈಗೆತ್ತಿಕೊಂಡಿದ್ದರು. ಅವರ ಮಗ ಸಂತೋಷ್ ಕೌಲಗಿಯವರು ಹೆಚ್ಚಿನ ಜವಾಬ್ದಾರಿ ಹೊತ್ತುಕೊಂಡಿದ್ದ ಕಾಲವಿದಾಗಿತ್ತು. ಇದರಲ್ಲೂ ವಿಶೇಷತೆಯಿತ್ತು. ಕೆ.ಪಿ.ಸುರೇಶ್ ಅವರು ಹೇಳಿರುವಂತೆ ಸುರೇಂದ್ರ ಕೌಲಗಿಯವರು ಸ್ವಾತಂತ್ರ್ಯ ಹೋರಾಟದ ಆದರ್ಶಗಳನ್ನು ಕಣಕಣದಲ್ಲೂ ತುಂಬಿಕೊಂಡ ಒಂದು ತಲೆಮಾರಿನ ಪ್ರತಿನಿಧಿ. ಇಂತಹ ಆದರ್ಶವಂತರಲ್ಲಿ ಹಲವರು ತಮ್ಮ ಮಕ್ಕಳನ್ನು 'ಚೆನ್ನಾಗಿ ಸೆಟ್ಲ್' ಆಗಲಿ ಎಂದು ಬಯಸುತ್ತಾರೆಯೇ ಹೊರತು, ಆದರ್ಶಗಳನ್ನು ಮುಂದುವರೆಸಲಿ ಎಂದಲ್ಲ. ಅದಕ್ಕಿಂತ ಭಿನ್ನವಾಗಿ ಇಂಜಿನಿಯರಿಂಗ್ ಓದಿಕೊಂಡಿದ್ದೂ, ಹಳ್ಳಿಗೆ ಬಂದು ಗಾಂಧಿ ಆದರ್ಶಗಳನ್ನು ಮುಂದುವರೆಸುವ ರೀತಿ ಕೌಲಗಿಯವರು ಮಕ್ಕಳನ್ನು ತರಬೇತು ಮಾಡಿದ್ದರು. ಎರಡನೆಯದಾಗಿ, ಅವರ ಮಕ್ಕಳು ಈ ಚಿಂತನೆಗಳನ್ನು ಇನ್ನೊಂದಷ್ಟು ಮುಂದಕ್ಕೆ ತೆಗೆದುಕೊಂಡು ಹೋಗಬೇಕೇ ಹೊರತು, ಹಳೆಯ ಮಾದರಿಗಳಿಗೆ ಯಥಾವತ್ ಗುಂಟು ಬೀಳುವುದಲ್ಲ ಎಂಬ ನಿಲುವು ಮತ್ತು ಧೋರಣೆಯಲ್ಲಿ ಅವರುಗಳಿದ್ದಾರೆ. ನಿಜಾರ್ಥದಲ್ಲಿ ಇದು

ಸ್ವಾತಂತ್ರ್ಯೋತ್ತರ ಕಾಲದ ಗಾಂಧಿವಾದಿಯ 'ಮುಂದುವರಿಕೆ'ಯಾಗಿದೆ. ಅವರ ಮಕ್ಕಳು ೨೧ನೇ ಶತಮಾನದ ಮುಂದುವರಿಕೆಯಾಗಿ ಬೆಳೆಯುತ್ತಿರುವುದೂ ವಿಶಿಷ್ಟವಾಗಿದೆ. ನಮಗೆ ನೇರವಾಗಿ 'ಅಮ್ಮ' ಗಿರಿಜಮ್ಮನವರ ಜೊತೆ ಅಷ್ಟು ಒಡನಾಟ ಇರಲಿಲ್ಲ. ಆದರೆ, ಮೇಲುಕೋಟೆಯನ್ನೇ ನೆಲೆಯಾಗಿಸಿಕೊಂಡು ಕೌಲಗಿಯವರು ನಡೆಸಿದ ಚಟುವಟಿಕೆಗಳಲ್ಲಿ ಗಿರಿಜಮ್ಮನವರ ಪಾಲು ಒಂದು ಕೈ ಹೆಚ್ಚೇ ಇದ್ದಂತೆ ತೋರುತ್ತದೆ. ಇವರ ಮೊಮ್ಮಕ್ಕಳು 'ಗಾಂಧಿವಾದ'ವನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೊಯ್ಯಲು ತರಬೇತಾಗುತ್ತಿರುವುದು ಮತ್ತೂ ವಿಶೇಷವಾಗಿದೆ.

ಗಾಂಧಿ ಚಿಂತನೆ ಹಾಗೂ ಕ್ರಿಯಾಶೀಲತೆಯನ್ನು ಒಪ್ಪಿಕೊಂಡಿದ್ದ ಹಿರಿಯ ಕೌಲಗಿಯವರು ಹೊಸ ಕಾಲಕ್ಕೆ ಅಪ್‌ಡೇಟ್ ಆದಂತೆ ಅನ್ನಿಸುತ್ತಿರಲಿಲ್ಲ. 'ಮೇಲುಕೋಟೆಯು ಮಂಡ್ಯ ನಗರಕ್ಕೆ ದೂರವಾಗಿದ್ದ'ರಿಂದ ನಿರಂತರ ಒಡನಾಟ ಸಾಧ್ಯವಾಗಲಿಲ್ಲ. ಹಾಗಾಗಿ ಇದರ ಕುರಿತು ಹೀಗೇನೇ ಎಂದು ಹೇಳುವುದು ತಪ್ಪಾದೀತು. ನಮ್ಮ ಚಿಂತನೆ-ಚಟುವಟಿಕೆಗಳ ಕುರಿತು ಒಂದು ಪ್ರಶ್ನೆಯೆತ್ತಿ, ತಮ್ಮದೇ ಶೈಲಿಯ ನಗೆಯೊಂದಿಗೆ ಭಿನ್ನ ಭಾವವನ್ನು ವ್ಯಕ್ತಪಡಿಸುತ್ತಿದ್ದುದರ ಆಚೆಗೆ, ತನ್ನ ಅನಿಸಿಕೆಯನ್ನು ನಮ್ಮ ಮೇಲೆ ಹೇರಿದಂತೆ ಎಂದೂ ಅನ್ನಿಸಿಲ್ಲ. ಹಲವು ಬಗೆಯ ಸಾಮಾಜಿಕ ಚಟುವಟಿಕೆಗಳಿಗೆ ನಮಗೆ ನೈತಿಕ ಬಲ ಹಾಗೂ ನೆರವನ್ನು ನೀಡುವವರಲ್ಲಿ ರೈತಸಂಘ ಮತ್ತು ದಸಂಸದ ಹಿರಿಯರ ಜೊತೆಗೆ, ಪ್ರೊ.ಎಚ್ಚೆಲ್ಕೆ, ಡಾ.ಸಿ.ಬಂದೀಗೌಡ ಮತ್ತು ಸುರೇಂದ್ರ ಕೌಲಗಿಯವರ ಭಾಗೀದಾರಿಕೆಯನ್ನು ನಾವು ಯಾವಾಗಲೂ ನೆಚ್ಚಿಕೊಳ್ಳಬಹುದಿತ್ತು. ಎಚ್ಚೆಲ್ಕೆಯವರು ಬೇಕೆಂದಾಗಲೆಲ್ಲಾ ಮಂಡ್ಯದಲ್ಲಿ ಸಿಗುತ್ತಿದ್ದರು. ವಿಶೇಷವಾದ ಸಂದರ್ಭಗಳಲ್ಲಿ ಮಾತ್ರ ಇನ್ನಿಬ್ಬರನ್ನು ಸಂಪರ್ಕಿಸುತ್ತಿದ್ದೆವು. ಸಂಘಟನೆಗಳ ಭಾಗವಾಗಿರುವ ಇತರ ಹಿರಿಯರ ಜೊತೆಗೆ ನಂತರದ ತಲೆಮಾರಿನ ನಾವೆಲ್ಲರೂ ಇದ್ದೇವೆ. ಮೇಲೆ ಹೇಳಲಾದ ಹಿರಿಯರು ಮೂವರೂ ಈಗಿಲ್ಲ.

ನಮಗಿಂತ ಬಹಳ ಹಿರಿಯರಾದ, ಭಿನ್ನವಾದ ವೈಚಾರಿಕ ನೆಲೆಯಿಂದ ಹಾಗೂ ಸಮೃದ್ಧ ಜೀವನಾನುಭವದಿಂದ ನಮಗೆ ನೆರವೂ ನೀಡಬಲ್ಲ ಜೊತೆಜೊತೆಗೇ 'ಬುದ್ಧಿ'ಯನ್ನೂ ಹೇಳಬಹುದಾಗಿದ್ದವರು ಕಣ್ಮರೆಯಾದಂತೆ, ಉಳಿದವರ ಜವಾಬ್ದಾರಿ ಹೆಚ್ಚಾಗುತ್ತದೆ. ಅಂತಹ ಜವಾಬ್ದಾರಿಯನ್ನು ಉಳಿದವರಾದ ನಾವೆಲ್ಲರೂ ಒಟ್ಟಾಗಿ ಹೊರಬೇಕಿದೆ ಅಷ್ಟೇ.

ದಾದಾ ಅವರ ಕಡೆಯ ದಿನಗಳು

ಜುಲೈ ೨೩ : ಎಂದಿನಂತೆ ಅದೊಂದು ಮಾಮೂಲಿನ ದಿನ. ಜನಪದ ನಿಲಯದ ಹಜಾರದ ಬಲ ಮೂಲೆಯಲ್ಲಿ ದಾದಾ ತಮ್ಮ ಕುರ್ಚಿಯಲ್ಲಿ ಕುಳಿತು ಗಾಢವಾದ ಅಧ್ಯಯನದಲ್ಲಿ ತೊಡಗಿದ್ದರು. ಏನು ಓದುತ್ತಿದ್ದೀರಿ ಎಂದು ಕೇಳಿದೆ. ದಂಡಿ ಸತ್ಯಾಗ್ರಹದ ಬಗ್ಗೆ ಓದುತ್ತಿದ್ದೇನೆ, ನಾಳೆ ಮೈಸೂರಿನ ಕಾಲೇಜೊಂದರಲ್ಲಿ ದಂಡಿ ಸತ್ಯಾಗ್ರಹದ ಬಗ್ಗೆ ಮಾತನಾಡಬೇಕು ಎಂದರು. ಗಾಂಧಿಯ ಬಗ್ಗೆ, ಅವರ ಕೆಲಸದ ಬಗ್ಗೆ ನೀವು ಸಾವಿರಕ್ಕೂ ಹೆಚ್ಚು ಬಾರಿ ಮಾತನಾಡಿರಬಹುದು ಮತ್ತೆ ಓದಲು ಏನಿದೆ ? ಹಾಗೆಯೇ ಹೋಗಿ ಮಾತನಾಡಿ, ಯಾಕೆ ಅಷ್ಟೊಂದು ಓದುತ್ತೀರಿ ಎಂದೆ. ಹಾಗೆಯೇ ನಸು ನಗುತ್ತಾ ನನ್ನ ಮಾತು ಕೇಳಿಸದವರಂತೆ ಮತ್ತೆ ಪುಸ್ತಕದಲ್ಲಿ ತಲೆ ಹಾಕಿದರು. ಬಹಳ ವರ್ಷಗಳ ನಂತರ ಹಳೆಯ ಸ್ನೇಹಿತರಾದ ಶ್ರೀ ತಿರುಮಲರಾವ್ ದಂಪತಿಗಳು ಬೆಂಗಳೂರಿನಿಂದ ಬಂದರು. ಅವರೊಂದಿಗೆ ಹರಟಿ, ದೇವಸ್ಥಾನಕ್ಕೆ ಹೋಗಿ ಬಂದು ಊಟ ಮಾಡಿಯೇ ಹೋಗಬೇಕೆಂದು ಅವರಿಗೆ ಒತ್ತಾಯಿಸಿದರು. ಅದಕ್ಕೆ ಅವರು ಸಮ್ಮತಿಸಿ ದೇವಸ್ಥಾನದಿಂದ ಹಿಂದಿರುಗಿ ಬಂದರು. ಅವರು ದಂಪತಿಗಳು ಊಟ ಮಾಡುವಾಗ ಅನೇಕ ಹಳೆಯ ಸಂಗತಿಗಳನ್ನು ನೆನೆದು ಅವರೊಂದಿಗೆ ಮಾತನಾಡಿದರು. ಅವರು ಹೊರಟ ಕೆಲವೇ ನಿಮಿಷದಲ್ಲಿ ಕುಟುಂಬದ ಹತ್ತಿರದ ಸ್ನೇಹಿತರೂ, ಸಂಸ್ಥೆಯ ಸದಸ್ಯರೂ ಆದ ಶ್ರೀ ರಮೇಶ ಅವರು ಮಂಡ್ಯದಿಂದ ಬಂದರು. ಜಪಾನ ದೇಶಕ್ಕೆ ಹೋಗಿದ್ದ ರಮೇಶ ಅವರ ಭೇಟಿ ಹಲವು ತಿಂಗಳಿಂದ ಆಗಿರಲಿಲ್ಲ. ದಾದಾ ಮತ್ತು ಸುಮನಸನೊಂದಿಗೆ ರಮೇಶ್ ಅವರು ತಮ್ಮ ಜಪಾನ್ ಪ್ರವಾಸದ ಅನುಭವವನ್ನು ಹಂಚಿಕೊಂಡರು. ಅವರ ಚರ್ಚೆಯು ಅಭಿವೃದ್ಧಿ ಮತ್ತು ಪರಿಸರದ ಸುತ್ತ ಮತ್ತೆ ಗಿರಕಿ ಹೊಡೆಯ ತೊಡಗಿತು. ಅಂದು ರಮೇಶ ಅವರು ಕಡೆಯ ಭೇಟಿಗೆ ಬಂದರೇನೋ ಅನಿಸುತ್ತದೆ. ನಂತರ ದಾದಾ ತಮ್ಮ ಸಹಾಯಕಿ ಸೌಮ್ಯಾಳಿಗೆ ಭಾಷಣವನ್ನು ಹೇಳಿ ಬರೆಸಿ, ಅವಳು ಟೈಪಿಸಿಕೊಟ್ಟ ಭಾಷಣವನ್ನು ಓದಿ ತಿದ್ದಿದರು.

ಜುಲೈ ೨೪ : ಇಂದು ಅವರ ಕಡೆಯ ಭಾಷಣ ಆಗಬಹುದೆಂದು ಊಹಿಸಿಯೂ ಇಲ್ಲ. ಮೈಸೂರಿನ ಕಾಲೇಜೊಂದರಲ್ಲಿ ಉಪ್ಪಿನ ಸತ್ಯಾಗ್ರಹದ ಮೇಲೆ ಇಂದು ಅವರ ಭಾಷಣ. ಅವರಿಗೆ ಭಾಷಣಕ್ಕೆ ಹೋಗುವುದು ಎಂದರೆ ಎಲ್ಲಿಲ್ಲದ ಸಂಭ್ರಮ. ಬೆಳಿಗ್ಗೆ ಎದ್ದು, ಸ್ನಾನ ಮಾಡಿ, ಗರಿಗರಿ ಬಟ್ಟೆ ತೊಟ್ಟು, ತಿಂಡಿ ತಿಂದು, ಎರಡು ಮೂರು

ಬಾರಿ ಕನ್ನಡಿಯಲ್ಲಿ ನೋಡಿಕೊಂಡು ನಿಧಾನವಾಗಿ ಮನೆಯ ಮೆಟ್ಟಿಲು ಹಿಡಿದು, ಕಾರನ್ನು ಹತ್ತಿದರು. ಸಂಜೆ ಮನೆಗೆ ಹಿಂದಿರುಗಿದಾಗ ಅವರು ದಣಿದವರಂತೆ ಕಂಡರು.. ಊಟ ಬೇಡವೆಂದು ಒಂದು ಲೋಟ ಹಾಲು ಕುಡಿದು ಮಲಗಿದರು.

ಜುಲೈ ೨೫ : ಬೆಳಿಗ್ಗೆ ಎದ್ದಾಗ ಸ್ವಲ್ಪ ಜ್ವರ ಇತ್ತು. ಆದರೂ ಹಿಂದಿನ ದಿನದ ಸಭೆಯ ವಿವರಗಳನ್ನು ಮೊಮ್ಮಗನೊಂದಿಗೆ ಹಂಚಿಕೊಂಡು ನಕ್ಕರು. ಅಷ್ಟರಲ್ಲಿ ತಿಂಡಿ ತಯಾರಾಗಿತ್ತು. ಉಪ್ಪಿಟ್ಟಿಗೆ ಖಾರ ಕಡಿಮೆ ಎನ್ನುತ್ತಾ ತಿಂದರು. ಉಪ್ಪು-ಖಾರ ಗೊತ್ತಾಗುತ್ತಿದೆ ಎಂದ ಮೇಲೆ ನೀವು ಆರೋಗ್ಯವಾಗಿದ್ದೀರಿ ಎಂದು ಮೊಮ್ಮಗ ಹಾಸ್ಯ ಮಾಡಿದ. ಕಾಫಿ ಕುಡಿದು ಸ್ವಲ್ಪ ಹೊತ್ತು ಮಲಗುವುದಾಗಿ ಹೇಳಿದರು, ಅವರಿಗೆ ಒಳ್ಳೆಯ ನಿದ್ದೆ ಬಂದಿತ್ತು. ಎಚ್ಚರವಾದಾಗ ಮಧ್ಯಾಹ್ನ ೧ ಗಂಟೆ. ಏಳುವಾಗಲೇ ಉಸಿರಾಟದ ಸಮಸ್ಯೆಯಿಂದ ಎದ್ದರು. ಪರಿಸ್ಥಿತಿ ನಾಜೂಕಾಗಿದೆ ಎನಿಸಿ ಮೈಸೂರಿಗೆ ಕಾರಿನಲ್ಲಿ ಕರೆದೊಯ್ದೆವು. ಆ ಒಂದೂ ಕಾಲು ಗಂಟೆ ಕಾರಿನ ಪ್ರಯಾಣದಲ್ಲಿ ಉಸಿರಾಟಕ್ಕಾಗಿ ಬಹಳವಾಗಿ ಒದ್ದಾಡುತ್ತಿದ್ದರು. ಕಾರಿನಲ್ಲೇ ಆವರ ಪ್ರಾಣ ಹೋಗಿ ಬಿಡಬಹದೇನೋ ಎನಿಸತೊಡಗಿತು. ಆಸ್ಪತ್ರೆ ತಲುಪಿದ ಕೂಡಲೆ ವೈದ್ಯರು ತೀವ್ರ ನಿಗಾ ಘಟಕಕ್ಕೆ ಅವರನ್ನು ದಾಖಲಿಸಿ ವೆಂಟಿಲೇಟರ್ ಹಾಕಬೇಕಾದ ಅನಿವಾರ್ಯತೆಯನ್ನು ತಿಳಿಸಿದರು. ಬೇರೆ ದಾರಿ ಕಾಣದೆ ಅದಕ್ಕೆ ಒಪ್ಪಿಗೆ ನೀಡಿದೆವು.

ಜುಲೈ ೨೫-೩೧ : ಪರಿಸ್ಥಿತಿ ಹಾಗೆಯೇ ಮುಂದುವರೆಯಿತು. ತೀವ್ರ ನಿಗಾ ಘಟಕದ ಹೊರಗಡೆ ಕಾಯುತ್ತಾ ಕೂರುವುದು. ಆ ಸೆಕ್ಯುರಿಟಿ ಮನುಷ್ಯ ಕರೆದಾಗ ಹೋಗಿ ಚೀಟಿ ಪಡೆದು ಒಂದಷ್ಟು ಔಷಧ ತಂದು ಕೊಡುವುದು. ವೈದ್ಯರು ಬಂದು ಏನಾದರೂ ಹೇಳುವರೇನೋ ಕಾಯುವುದು. ಅತ್ಯಂತ ಆತಂಕದ ದಿನಗಳು ಇವು.

ಆಗಸ್ಟ ೧ -೨ : ಪರಿಸ್ಥಿತಿ ಹಾಗೆಯೇ ಮುಂದುವರೆಯಿತು. ವೆಂಟಿಲೇಟರ ತೆಗೆದರು. ಆದರೆ ಮಂಪರು ಕಡಿಮೆಯಾಗಿಲ್ಲ. ವೈದ್ಯರು ಮೂತ್ರ ಪಿಂಡದಲ್ಲಿ ಸಮಸ್ಯೆ ಕಾಣುತ್ತಿದೆ ಹಾಗಾಗಿ ಡಯಾಲಿಸಿಸ್ ಮಾಡಬೇಕಾಗಬಹುದೆಂಬ ಸೂಚನೆ ನೀಡಿದರು.

ಆಗಸ್ಟ್ ೩ : ಡಯಾಲಿಸಿಸ್ ಮಾಡಿಸ ಬೇಕೋ ಬೇಡವೋ ಎಂಬ ಅತಂತ್ರದಲ್ಲಿ ನಾವು ಸಿಲುಕಿದ್ದೇವೆ. ಆಸ್ಪತ್ರೆಯ ವೈದ್ಯರು ಮಾಡಿಸ ಬೇಕು ಎನ್ನಿತ್ತಿದ್ದಾರೆ. ಗೆಳೆಯ ವೈದ್ಯರುಗಳು, ಡಯಾಲಿಸಿಸ್ ಅನುಭವಿಸಿದವರು ಬೇಡ ಎನ್ನುತ್ತಿದ್ದಾರೆ. ಅನೇಕ ಸುತ್ತಿನ ಚರ್ಚೆಯ ನಂತರ ಬೇಡವೆಂದು ತೀರ್ಮಾನಿಸಿ ವಾರ್ಡಗೆ ವರ್ಗಾಯಿಸಿಲು ಕೋರಿದೆವು. ಆಗಬಹುದಾದಾ ಎಲ್ಲಾ ಸಮಸ್ಯೆಗೆ ನಾವೇ ಜವಾಬ್ದಾರಿ ಎಂದು ಬರೆಸಿಕೊಂಡು ರಾತ್ರಿ ೧೦ ಗಂಟೆಗೆ ವಾರ್ಡಗೆ ಅವರನ್ನು ವರ್ಗಾಯಿಸಿದರು.

ಆಗಸ್ಟ್ ೪ :ಉಸಿರಾಟದ ಸಮಸ್ಯೆಯ ನಡುವೆಯೂ ಅವರನ್ನು ಭೇಟಿ ಮಾಡಲು ಬಂದವರೆಲ್ಲರನ್ನೂ ಗುರುತಿಸುತ್ತಿದ್ದರು. ಮಾತನಾಡಲೂ ಪ್ರಯತ್ನಿಸುತ್ತಿದ್ದರು. ಬಾಯಾರಿಕೆ

ಎಂದು ಆಗಾಗ ನೀರನ್ನು ಕೇಳುತ್ತಿದ್ದರು. ಪರಿಸ್ಥಿತಿ ಅಂತಹ ಆಶಾದಾಯಕವಾಗೇನೂ ತೋರುತ್ತಿರಲಿಲ್ಲ.

ಆಗಸ್ಟ್ ೫: ಈ ದಿನ ಮಂಪರು ಹೆಚ್ಚಾದಂತೆ ತೋರ ತೊಡಗಿತು. ದಾದಾ, ದಾದಾ ಎಂದು ಕೂಗಿದರಷ್ಟೆ ಕಣ್ಣು ಬಿಟ್ಟು ನೋಡುತ್ತಿದ್ದರು. ಗೆಳೆಯ ಮನೋಹರ ಅವರು ನೀಡುತ್ತಿದ್ದ ಹೋಮಿಯೋಪತಿ ಔಷಧ ಸ್ವಲ್ಪ ಕೆಲಸ ಮಾಡುವಂತೆ ತೋರುತ್ತಿತ್ತು. ಅವರು ನೀಡುತ್ತಿದ್ದ ಸಣ್ಣ ಗುಳಿಗೆಗಳು ಅವರನ್ನು ಉಳಿಸಿ ಬಿಡಬಹುದೆಂಬ ಆಸೆ ನಮ್ಮೆಲ್ಲರ ಮನದ ಮೂಲೆಯಲ್ಲೆಲ್ಲೋ ಇರುತ್ತಿತ್ತು.

ಆಗಸ್ಟ್ ೬: ಈ ದಿನ ಭಾನುವಾರ. ಬೆಳಿಗ್ಗೆ ಎಷ್ಟು ಕೂಗಿದರೂ ಕಣ್ಣನ್ನು ಬಿಟ್ಟು ಯಾರನ್ನು ನೋಡುವ ಸ್ಥಿತಿಯಲ್ಲಿ ಅವರು ಇರಲಿಲ್ಲ. ಬೆಂಗಳೂರಿನಿಂದ ಮೊಮ್ಮಕ್ಕಳು ಬಂದರು. ಭಾನುವಾರವಾದ್ದರಿಂದ ಹತ್ತಿರದ ಸಂಬಂಧಿಗಳು, ಸ್ನೇಹಿತರೂ ಹೆಚ್ಚಿನ ಸಂಖ್ಯೆಯಲ್ಲಿ ಬಂದರು. ಆಸ್ಪತ್ರೆಯ ಆ ಕೋಣೆಯಲ್ಲಿ ಯಾವುದೋ ಅನಿರೀಕ್ಷಿತ ಸಮಯದ ತಿರುವು ದಾದಾ ಅವರಿಗೆ ಪ್ರಜ್ಞೆಯನ್ನು ಮರಳಿ ತರಬಹುದೆಂಬ ಆಸೆ ಎಲ್ಲರಲ್ಲೂ ಇತ್ತು. ಹಾಗೆಯೇ ಮುಂದಿನ ಕರಾಳ ಗಳಿಗೆಯನ್ನು ಒಪ್ಪಿಕೊಳ್ಳಲು ಒಳಗಿಂದೊಳಗೇ ಮನಸ್ಸು ಸಜ್ಜಾಗುತ್ತಿದ್ದವು. ಏನು ಮಾಡುವುದು ತೋಚದೆ ಅಲ್ಲಿದ್ದ ಹತ್ತಿರದವರು ವಿಷ್ಣು ಸಹಸ್ರನಾಮ ಪಠಿಸಿದರು. ಭೇಟಿಗೆ ಬಂದ ಸ್ನೇಹಿತರಾದ ಡಾ.ರಾಜೇಂದ್ರ ಅವರು ಕಡೆಯ ದಿನಗಳು ಬರುತ್ತಿವೆ ಎಂದೆನಿಸುತ್ತಿದೆ , ಊರಿಗೆ ಕರೆದು ಕೊಂಡು ಹೋಗುವುದು ವಾಸಿ, ಅವರ ಕರ್ಮ ಭೂಮಿಯಲ್ಲೇ ಅವರು ಕಡೆಯ ಉಸಿರನ್ನು ಎಳೆದರೆ ಒಳ್ಳೆಯದೇನೋ ಅಂದರು. ಅದು ವೈದ್ಯರ ಬಾಯಿಯಿಂದ ಬಂದ ಅಧಿಕೃತ ಮಾತಾಗಿತ್ತು. ನಮ್ಮ ಎದೆ ಹೊಡೆದು ಕೊಳ್ಳುವುದು ಹೆಚ್ಚತೊಡಗಿತು. ಮೌನ ಆವರಿಸಿತು. ಯಾರಿಗೂ ಯಾರೊಂದಿಗೂ ಮಾತನಾಡುವ ಮನಸ್ಸಿರಲಿಲ್ಲ. ಎಲ್ಲರೂ ಅಲ್ಲಲ್ಲಿಯೇ ಕುಳಿತು ಮುಂದಿನ ಸಹಿಸಲಾಗದ ಕ್ಷಣವನ್ನು ನಿರೀಕ್ಷಿಸತೊಡಗಿದೆವು. ರಾತ್ರಿ ೧೦.೧೫ ಅವರ ಕೊಠಡಿಯಲ್ಲಿ ಅವರ ಸಹಾಯಕ ಪುಟ್ಟವೀರನನ್ನು ಬಿಟ್ಟು ಯಾರೂ ಇಲ್ಲ. ಉಸಿರಾಟ ಬಿಗಡಾಯಿಸ ತೊಡಗಿತು. ಪುಟ್ಟವೀರ ಓಡಿಹೋಗಿ ದಾದಿಯನ್ನು ಕರೆದ. ಆಕೆ ಬಂದು ನೋಡುವಷ್ಟರಲ್ಲಿ ೮೪ ವರ್ಷಗಳಿಂದ ವಾಸವಾಗಿದ್ದ 'ಸುರೇಂದ್ರ ಕೌಲಗಿ' ಎಂಬ ಶುಭ್ರ,ಸುಂದರ ಗೂಡನ್ನು ತೊರೆದು ಪ್ರಾಣ ಪಕ್ಷಿ ಹಾರಿಹೋಗಿತ್ತು. ನಮ್ಮೆಲ್ಲರಿಗೂ ಅದರ ನೆರಳಿನಲ್ಲಿ ಉಣ್ಣಲು, ಆಟವಾಡಲು, ಕಲಿಯಲು, ಹತ್ತಲು ಅವಕಾಶ ಮಾಡಿ ಕೊಟ್ಟಿದ್ದ ಬೃಹತ್ ಆಲದ ಮರವೊಂದು ಧರೆಗುರುಳಿತ್ತು.

ಸುರೇಂದ್ರ ಕೌಲಗಿಯವರ ಕೊನೆಯ ಲೇಖನ

ಜಿ.ಎಸ್.ಟಿ ಮತ್ತು ಕುಮಾರಪ್ಪ ಅರ್ಥಶಾಸ್ತ್ರ

ಮಾನವನ ವ್ಯಕ್ತಿತ್ವದ ಗುಣಮಟ್ಟವನ್ನು ಉನ್ನತಿಸಬೇಕಿದೆ ಮತ್ತು ಅಭಿವೃದ್ಧಿಪಡಿಸಬೇಕಿದೆ- ಜೆ.ಸಿ. ಕುಮಾರಪ್ಪ

ಜುಲೈ ಒಂದರಿಂದ ದೇಶದಾದ್ಯಾಂತ ಸರಕು ಮತ್ತು ಸೇವಾ ತೆರಿಗೆ ಹೆಸರಿನಲ್ಲಿ ಹೊಸ ತೆರಿಗೆ ಪದ್ಧತಿ ಜಿ.ಎಸ್.ಟಿ ಜಾರಿಗೆ ಬಂದಿದೆ. ಸಧ್ಯದ ಆಡಳಿತಾರೂಢ ಪಕ್ಷದ ಸರ್ಕಾರ ಏಕರೂಪ ತೆರಿಗೆ ಪದ್ಧತಿಯ ಅನುಷ್ಠಾನವನ್ನು ಐತಿಹಾಸಿಕ ಘಟನೆ ಎಂದು ಬಣ್ಣಿಸಿದೆ. ಆ ತೆರಿಗೆಗೆ ಸಂಬಂಧಿಸಿದ ಶಾಸನವನ್ನು ಜೂನ್ ಮೂವತ್ತರ ಮಧ್ಯರಾತ್ರಿಯಿಂದ ಜಾರಿಗೆ ಕೊಟ್ಟಿದೆ. ಯಾವ ರೀತಿ ದೇಶಕ್ಕೆ ಸ್ವಾತಂತ್ರ್ಯ ೧೯೪೭ ಆಗಸ್ಟ್ ಹದಿನಾಲ್ಕರ ಮಧ್ಯರಾತ್ರಿ ದೊರೆಯಿತೊ ಅದೇ ರೀತಿಯ ಐತಿಹಾಸಿಕ ಕ್ಷಣವನ್ನು ಏಕರೂಪ ತೆರಿಗೆಯ ಜಾರಿಯನ್ನು ಘೋಷಿಸಲು ಪುನರ್‌ವರ್ತಿಸಲಾಯಿತು. ಆದರೆ ದೇಶದ ಮುಖ್ಯ ವಿರೋಧ ಪಕ್ಷಗಳು ಐತಿಹಾಸಿಕವೆಂದು ಕರೆಯಲ್ಪಡುವ ಲೋಕಸಭೆಯ ವಿಶೇಷ ಅಧಿವೇಶನವನ್ನು ಬಹಿಷ್ಕರಿಸಿದವು. ಏಕರೂಪ ತೆರಿಗೆಯ ಪದ್ಧತಿಯ ಬಗ್ಗೆ ಅವುಗಳಿಗೆ ತಮ್ಮದೇ ಆದ ಕೆಲವು ಆಕ್ಷೇಪಣೆಗಳಿವೆ. ಆ ಆಕ್ಷೇಪಣೆಗಳಿಗೆ ಸಮಧಾನವನ್ನೀಯುವ ಪ್ರಯತ್ನವನ್ನು ಸರ್ಕಾರ ಮಾಡಲಿಲ್ಲ. ಆದ್ದರಿಂದ ವಿರೋಧ ಪಕ್ಷಗಳ ನೈತಿಕ ಬೆಂಬಲವಿಲ್ಲದೆ ಜಾರಿಗೆ ಬಂದಿರುವ ಹೊಸ ಏಕರೂಪ ತೆರಿಗೆ ಪದ್ಧತಿಗೆ ಇದು ಒಂದು ಕಪ್ಪು ಚುಕ್ಕೆ ಎಂದು ಹೇಳಬಹುದು. ದೇಶದಲ್ಲಿ ಇದುವರೆಗೆ ಜಾರಿಯಲ್ಲಿದ್ದ ವಿವಿಧ ಪ್ರಕಾರದ ಮತ್ತು ವಿವಿಧ ಹಂತಗಳಲ್ಲಿಯ ಸರಕು ಮತ್ತು ಸೇವಾ ಮೇಲಿನ ತೆರಿಗೆಗಳನ್ನು ಕ್ರೂಢಿಕರಿಸಿ ಏಕರೂಪದ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗಿದೆ.

ರಾಜಕೀಯವಾಗಿ ಮತ್ತು ಭಾವಾನಾತ್ಮಕವಾಗಿ ಒಂದು ದೇಶವಾಗಿರುವ ಭಾರತ ಈಗ ಜಿ.ಎಸ್.ಟಿ ಏಕರೂಪ ತೆರಿಗೆ ಅನುಷ್ಠಾನದಿಂದಾಗಿ ಆರ್ಥಿಕವಾಗಿಯೂ ಒಂದೇ ದೇಶ ಆದಂತಾಗಿದೆ.

ದೇಶದ ಎಲ್ಲ ರಾಜ್ಯಗಳು ಹೊಸ ತೆರಿಗೆ ವ್ಯವಸ್ಥೆಯಲ್ಲಿ ಸಮಭಾಗಿಗಳಾಗಿವೆ. ಕ್ರೂಢೀಕೃತವಾಗುವ ಆದಾಯದಲ್ಲಿ ಕೂಡ ಪಾಲುದಾರರಾಗಿವೆ. ಗಣರಾಜ್ಯ ವ್ಯವಸ್ಥೆಗೆ ನಿಜ ಅರ್ಥ ಬಂದಂತಾಗಿದೆ. ಆದರೆ ದೇಶದ ಎಲ್ಲ ಅಭಿವೃದ್ಧಿ, ಆರ್ಥಿಕ, ಶೈಕ್ಷಣಿಕ, ವ್ಯವಸಾಯ ಮುಂತಾದ ಎಲ್ಲ ನೀತಿಗಳು ಪಾಶ್ಚಿಮಾತ್ಯ

ದೇಶಗಳ ಅನುಕರಣೆಯಾಗಿರುವಂತೆಯೇ ಈ ಏಕರೂಪ ತೆರಿಗೆ ಪದ್ಧತಿಯೂ ವಿದೇಶಗಳಲ್ಲಿಯ ತೆರಿಗೆ ಪದ್ಧತಿಯ ಅನುಕರಣೆಯೇ ಆಗಿದೆ.

ರಾಜ್ಯಗಳ ಸಹಕಾರ ಮತ್ತು ಸಹಾಯದೊಂದಿಗೆ ಜಿ.ಎಸ್.ಟಿ ಜಾರಿಗೆ ಬಂದಿದೆಯಾದರೂ ಗಣರಾಜ್ಯದ ವಿಕೇಂದ್ರಿಕರಣದ ಆಶಯಕ್ಕೆ ವ್ಯತಿರಿಕ್ತವಾಗಿ ಇದೊಂದು ಕೇಂದ್ರೀಕೃತ ಅರ್ಥವ್ಯವಸ್ಥೆ ಆಗಿದೆ. ದೇಶಕ್ಕೆಲ್ಲಾ ಏಕರೂಪ ತೆರಿಗೆ ಪದ್ಧತಿ ಜಾರಿಗೆ ಬಂದಿರುವುದರಿಂದ ದೇಶವೆಲ್ಲ ಒಂದು ಮಾರುಕಟ್ಟೆ ಯಾಗಿರುವುದರಿಂದ ಜೀವನಾವಶ್ಯಕವಾದ ಎಲ್ಲ ವಸ್ತುಗಳು ತೆರಿಗೆಯ ಜಾಲಕ್ಕೆ ಬಂದಿವೆ. ವಸ್ತುಗಳನ್ನು ಉಪಯೋಗಿಸುವವರು, ಉತ್ಪಾದಿಸುವವರು ಮತ್ತು ಸೇವಾ ಕ್ಷೇತ್ರದಲ್ಲಿ ದುಡಿಯುತ್ತಿರುವವರು ಹೊಸ ತೆರಿಗೆ ಕಕ್ಷೆಯೊಳಗೆ ಬರುತ್ತಾರೆ. ಅಂದರೆ ದೇಶದ ಪ್ರತಿಯೋರ್ವ ಪ್ರಜೆಯೂ ಪ್ರತ್ಯಕ್ಷವಾಗಿಯೋ ಅಥವಾ ಪರೋಕ್ಷವಾಗಿಯೋ ತೆರಿಗೆ ಕೊಡುವ ವ್ಯಕ್ತಿಯಾಗಿರುವುದರಿಂದ ಪ್ರತಿಯೊಬ್ಬ ಪ್ರಜೆ ಕೇವಲ ಸಹಜ ನಾಗರೀಕನಾಗಿ ಉಳಿದಿಲ್ಲ. ಈಗ ಅವನು ಆರ್ಥಿಕ ಘಟಕ ಕೂಡ (econamic man) ಆಗಿದ್ದಾನೆ. ಇಲ್ಲಿ ಸಮಾಧಾನಕರ ವಿಷಯ ವೇನೆಂದರೆ ಗಾಂಧೀಜಿಯವರು ೧೯೩೦ ರಲ್ಲಿ ನಡೆಸಿದ್ದ ಹೋರಾಟದ ಕಾರಣದಿಂದಾಗಿ ಸರ್ಕಾರಕ್ಕೆ ಉಪ್ಪಿನ ಮೇಲೆ ತೆರಿಗೆಯನ್ನು ಹಾಕುವುದು ಬಹುಶಃ ಸರಿಯಲ್ಲವೆಂದನಿಸಿ ಸರ್ಕಾರ ಅದನ್ನು ಜಿ.ಎಸ್.ಟಿ ಯು ಹೊರಗಿಟ್ಟಿರಬಹುದು.

ಕೇಂದ್ರೀಕೃತಗೊಳ್ಳುತ್ತಿರುವ ಅರ್ಥವ್ಯವಸ್ಥೆಯಿಂದಾಗಿ ಜೀವನದ ಎಲ್ಲ ಚಟುವಟಿಕೆಗಳು – ಅವು ಸಾಂಸ್ಕೃತಿಕವಾಗಿರಲಿ, ಸಾಹಿತ್ಯಿಕವಾಗಿರಲಿ ಅಥವಾ ಕ್ರೀಡೆಗಳೇ ಆಗಿರಲಿ ಅವು ಕೇಂದ್ರಿಕೃತವೇ ಆಗುವವು. ಕೇಂದ್ರಿಕರಣದಿಂದ ರಾಜಕೀಯ ಕ್ಷೇತ್ರವೂ ಹೊರ್ತಾಗಿ ಉಳಿಯಲು ಸಾಧ್ಯವಾಗುವುದಿಲ್ಲ. ಕೇಂದ್ರ ಸರ್ಕಾರದ ಅಧಿಕಾರವು ಕೂಡ ಕಾಲಕಳೆದಂತೆ ಇನ್ನಷ್ಟು ಕೇಂದ್ರಿಕೃತವಾಗುತ್ತಾ ಹೋಗುವುದು. ವಿವಿಧ ಪ್ರದೇಶದಲ್ಲಿಯ ರಾಷ್ಟ್ರಿಕೃತ ಬ್ಯಾಂಕುಗಳನ್ನು ಒಗ್ಗೂಡಿಸಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಎಂಬ ಹೆಸರಿನಲ್ಲಿ ಆರ್ಥಿಕ ವ್ಯವಹಾರಗಳನ್ನು ಕೇಂದ್ರೀಕರಣ ಮಾಡಲಾಗಿದೆ.


ಶಿಕ್ಷಣ, ವ್ಯವಸಾಯ, ಅರಣ್ಯ ಮುಂತಾದ ವಿಷಯಗಳು ಸಂವಿಧಾನದ ಪ್ರಕಾರ ರಾಜ್ಯ ಸರ್ಕಾರದ ಕ್ಷೇತ್ರಗಳಾಗಿದ್ದರೂ ಅಲ್ಲಿ ಕೇಂದ್ರ ಸರ್ಕಾರದ ನೀತಿ–ನಿರ್ಧಾರಗಳೇ ಪ್ರಮುಖವಾಗುತ್ತವೆ. ಕೇಂದ್ರಸರ್ಕಾರದ ಅನುದಾನವನ್ನೇ ರಾಜ್ಯಸರ್ಕಾರಗಳು ಹೆಚ್ಚಾಗಿ ಅವಲಂಬಿಸಿರುವುದರಿಂದ ರಾಜ್ಯಸರ್ಕಾರಗಳ ಪ್ರಭುತ್ವದ ಮೊನಚು ಕಡಿಮೆಯಾಗಿ ಕೇಂದ್ರಸರ್ಕಾರದ್ದೇ ತೀಕ್ಷ್ಣವಾಗುತ್ತದೆ.

ವಿಕೇಂದ್ರಿಕೃತ ಆಡಳಿತ ಪದ್ಧತಿ ಎಂದು ಭಾವಿಸಲ್ಪಟ್ಟಿರುವ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿಯೂ ಕೇಂದ್ರ ಸರ್ಕಾರದ ನೀತಿ-ನಿರ್ಧಾರಗಳ ಪ್ರಭಾವವನ್ನು ಕಾಣುತ್ತೇವೆ. ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಇರುವ ಕೇಂದ್ರ ಸರ್ಕಾರದ ವ್ಯವಸ್ಥೆಯಡಿಯಲ್ಲಿ ರಾಜ್ಯಗಳಲ್ಲಿರುವ ವಿಶ್ವವಿದ್ಯಾನಿಲಯಗಳು ಮತ್ತು ಇತರ ಶಿಕ್ಷಣ ಸಂಸ್ಥೆಗಳು ಒಳಪಟ್ಟಿರುವುದರಿಂದ ಶೈಕ್ಷಣಿಕ ವ್ಯವಸ್ಥೆಯಲ್ಲಿಯೂ ಕೇಂದ್ರೀಕರಣ ಸರ್ವಸಾಮಾನ್ಯವಾಗಿದೆ. ಅಲ್ಲದೆ ದೇಶಕ್ಕೊಂದೇ ಭಾಷೆ ಇರಬೇಕೆಂಬ ಉದ್ದೇಶದಿಂದ ಹಿಂದಿಯನ್ನು ಹಿಂದಿಯೇತರ ಪ್ರಜೆಗಳ ಮೇಲೆ ಹೇರಲಾಗುತ್ತಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮತ್ತು ಪಂಚವಾರ್ಷಿಕ ಯೋಜನೆಗಳ ಹೆಸರಿನಲ್ಲಿ ದೇಶದ ಆಡಳಿತ ಕೇಂದ್ರಿಕರಣದತ್ತ ದಾಪುಗಾಲು ಹಾಕುತ್ತಿದೆ. ಪ್ರಜೆಗಳಿಗಾಗಿ ಸರ್ಕಾರವೇ ಅಥವಾ ಸರ್ಕಾರಕ್ಕಾಗಿ ಪ್ರಜೆಗಳೇ ಎಂದು ಪ್ರಶ್ನೆ ಕೇಳುವ ಕಾಲ ಬಂದಿದೆ.

ವಿಕೇಂದ್ರಿಕರಣದ ಪ್ರಬಲ ಪ್ರತಿಪಾದಕ, ಶಾಶ್ವತ ಅರ್ಥಶಾಸ್ತ್ರದಂಥ ವಿಚಾರದ ಪ್ರವರ್ತಕ ಜೆ.ಸಿ. ಕುಮಾರಪ್ಪನವರ ಜನ್ಮದ ೧೨೫ ನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಜಿ.ಎಸ್.ಟಿ ವ್ಯವಸ್ಥೆಯ ಸಾಧಕ-ಬಾಧಕಗಳನ್ನು ಕುರಿತು ಗಂಭೀರ ಚರ್ಚೆ ನಡೆಯಬೇಕಿದೆ. ಜಿ.ಎಸ್.ಟಿ ಯ ಅನುಷ್ಠಾನ ಸರಾಗವಾಗಿ ಆಗಬೇಕಾದರೆ ಇನ್ನು ಮೂರು ವರ್ಷಗಳಾದರೂ ಬೇಕಾಗಬಹುದೆಂದು ಅಂದಾಜಿಸಲಾಗಿದೆ. ಈ ಮಧ್ಯೆ ಯಾವುದಾದಾರೂ ಸಮಸ್ಯೆಗಳು ಉಂಟಾದರೆ ಜಿ.ಎಸ್.ಟಿ ತನ್ನ ಸ್ವರೂಪವನ್ನೇ ಬದಲಾಯಿಸಿಕೊಳ್ಳಬಹುದು. ಉದಾಹರಣೆಗೆ:- ಭಾರತ-ಪಾಕ್ ಯುದ್ಧ ನಡೆದಲ್ಲಿ, ಅಮೇರಿಕಾ-ಉತ್ತರಕೋರಿಯಾ ಮಧ್ಯೆ ಘರ್ಷಣೆ ನಡೆದಲ್ಲಿ ಭಾರತ-ಚೀನಾ ಸಂಘರ್ಷ ನಡೆದಲ್ಲಿ, ಜಿ.ಎಸ್.ಟಿ ಇಂದಿನ ತನ್ನ ಮೂಲ ಸ್ವರೂಪವನ್ನು ಬದಲಾಯಿಸಿಕೊಳ್ಳಬಹುದು. ಜಾರಿಗೆ ಬಂದಿರುವ ಜಿ.ಎಸ್.ಟಿಯಲ್ಲಿ ಗ್ರಾಮೋದ್ಯೋಗಗಳ ಮತ್ತು ಸುಸ್ಥಿರ ಜೀವನದ ಬಗ್ಗೆ ಯಾವ ರೀತಿ ಉತ್ತೇಜಕಾರಕ ಸಂಗತಿಗಳಿವೆ ಎಂಬುದು ಗೊತ್ತಾಗುತ್ತಿಲ್ಲ. ಆರ್ಥಿಕವಾಗಿ ಮುಂದಿರುವವರ ಮತ್ತು ಕೈಗಾರಿಕೋದ್ಯಮಿಗಳಿಗೆ ಸಂಬಂಧಿಸಿದ ವಿವರಣೆಗಳೇ ಹೆಚ್ಚಾಗಿ ಕೇಳಿ ಬರುತ್ತಿವೆ. ಜಿ.ಎಸ್.ಟಿಯ ಮೂಲ ಉದ್ದೇಶ ಆರ್ಥಿಕ ಸಂಪನ್ಮೂಲವನ್ನು ಕ್ರೂಢೀಕರಿಸಿಕೊಳ್ಳುವುದೇ ಆಗಿದೆ. ಸಂಪನ್ಮೂಲ ಅಗತ್ಯವಾಗಿರುವುದು ದೇಶದ ಅಭಿವೃದ್ಧಿಗಾಗಿ ಎಂದು ಹೇಳಲಾಗುತ್ತದೆ. ದೇಶದ ಅಭಿವೃದ್ಧಿಯ ಚಿಂತನೆಯಲ್ಲಿ ದೇಶದ ರಕ್ಷಣಾ ವ್ಯವಸ್ಥೆಯೂ ಸೇರಿಕೊಳ್ಳುತ್ತದೆ. ರಕ್ಷಣಾ ವ್ಯವಸ್ಥೆಗೆ ಕ್ರೂಢೀಕರಣಗೊಂಡ ಸಂಪನ್ಮೂಲದಲ್ಲಿ ಶೇಕಡ ೮೦ ರಷ್ಟು ಹಣ ರಕ್ಷಣಾ ವಲಯಕ್ಕೆ ಖರ್ಚಾಗುತ್ತದೆ. ಆದ್ದರಿಂದ ಜಿ.ಎಸ್.ಟಿ ಮೂಲಕ ಸಂಗ್ರಹವಾಗುವ

ತೆರಿಗೆ ಪರೋಕ್ಷವಾಗಿ ಹಿಂಸಾಚಾರಕ್ಕೆ ಪ್ರೋತ್ಸಾಹ ಕೊಡುತ್ತದೆ. ನಮ್ಮ ಈಗಿನ ಕೇಂದ್ರ ಸರ್ಕಾರ ಜಗತ್ತಿನ ಎಲ್ಲ ದೇಶಗಳಿಂದ ಅಭಿವೃದ್ಧಿಗಾಗಿ ಅನೇಕ ಪ್ರಕಾರದ ಷರತ್ತುಗಳೊಂದಿಗೆ ಧನ ಸಹಾಯ ಪಡೆಯುತ್ತಿದೆ. ಈ ರೀತಿ ಪಡೆದ ವಿದೇಶಿ ಸಾಲದ ಮೊತ್ತ ಎಷ್ಟೊಂದು ಇದೆ ಎಂಬುದು ದೇಶಕ್ಕೆ ಗೊತ್ತಿಲ್ಲ. ಆದರೆ ಒಂದು ಮಾತು ಮಾತ್ರ ಸತ್ಯ: ಸಾಲಕೊಟ್ಟ ಅಥವಾ ಧನ ಸಹಾಯ ಮಾಡಿದ ದೇಶಗಳು ನಮ್ಮ ದೇಶದ ಹಣಕಾಸು, ಹಣದ ಚಲಾವಣೆ, ವಿನಿಮಯನೀತಿ ಇತ್ಯಾದಿಗಳನ್ನು ನಿರ್ಧರಿಸುವಲ್ಲಿ ಪ್ರಭಾವ ಬೀರುತ್ತವೆ. ಅಂದರೆ ಅಷ್ಟರ ಮಟ್ಟಿಗೆ ದೇಶ ತನ್ನ ಆರ್ಥಿಕ ಸ್ವಾತಂತ್ರ್ಯ ಕಳೆದುಕೊಂಡಂತ್ತಾಗುತ್ತದೆ.

ದೇಶದ ಆರ್ಥಿಕ ಬದಲಾವಣೆಯ ಈ ಸಂಕ್ರಾಂತಿ ಕಾಲದಲ್ಲಿ ಜೆ.ಸಿ. ಕುಮಾರಪ್ಪನವರು ಪ್ರತಿಪಾದಿಸಿದ್ದ ವಿಕೇಂದ್ರಿಕೃತ ಅಹಿಂಸಕ ರಾಜಕೀಯ ಆರ್ಥಿಕ ಚಿಂತನೆಯನ್ನು ಜ್ಞಾಪಿಸಿಕೊಳ್ಳುವುದು ಅಗತ್ಯವಾಗಿದೆ. ಎಲ್ಲ ವಿಶ್ವವಿದ್ಯಾನಿಲಯಗಳಲ್ಲಿ ಕುಮಾರಪ್ಪನವರ ಆರ್ಥಿಕ ವಿಚಾರಗಳ ಬಗ್ಗೆ ಅಧ್ಯಯನ ಮತ್ತು ವಿಚಾರ ಸಂಕಿರಣ ತುರ್ತಾಗಿ ನಡೆಯಬೇಕಿದೆ. ಸ್ವತಂತ್ರ ಭಾರತದ ಅತ್ಯಂತ ಗಣ್ಯ ಮತ್ತು ಆದ್ಯ ಚಿಂತಕರಲ್ಲಿ ಮತ್ತು ಮಹಾತ್ಮ ಗಾಂಧೀಜಿಯವರ ಸ್ವರಾಜ್ಯದ ವಿಚಾರಗಳಿಗೆ ಅರ್ಥಶಾಸ್ತ್ರದ ಸ್ವರೂಪಕೊಟ್ಟ ಕುಮಾರಪ್ಪನವರನ್ನು ಮರೆತು ದೊಡ್ಡ ತಪ್ಪು ಮಾಡಿದ್ದೇವೆ. ಅವರ ೧೨೫ ನೇ ವರ್ಷದ ಆಚರಣೆಯ ನಿಮಿತ್ತದಲ್ಲಾದರೂ ಎಲ್ಲ ಕಡೆಗೆ ಅವರ ಆರ್ಥಿಕ ಸಿದ್ಧಾಂತಗಳ ಬಗ್ಗೆ ವಿಚಾರಮಂಥನ ನಡೆಯುವಂತಾಗಲಿ ಮತ್ತು ದೇಶಕ್ಕೆ ಹೊಸ ಬೆಳಕು ಮತ್ತು ಪರ್ಯಾಯ ಆರ್ಥಿಕ ವ್ಯವಸ್ಥೆ ಸಿಗುವಂತಾಗಲಿ ಎಂದು ಹಾರೈಸಬೇಕಿದೆ.



ಸುರೇಂದ್ರ ಕೌಲಗಿಯವರ ನೆನಪಿನಲ್ಲಿ
ಹೊಸ ಜೀವನ ದಾರಿಯಲ್ಲಿ ನೆಟ್ಟಿರುವ
ಆಲದ ಸಸಿಯ ಮುಂದೆ ಇರುವ ಫಲಕ.

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest
janapada seva Trust Melkote, Dist- Mandya - 571431. Phone : 08236 299854
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237